

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸೆಪ್ಟೆಂಬರ್ 26 ಸೋಮವಾರ 2022


ಸಂಪುಟ: 43 | ಸಂಚಿಕೆ: 161 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528, ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4





ದಸರಾಗೆ ಇಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಚಾಲನೆ

- ಇದರೊಂದಿಗೆ ಇನ್ನಿತರೆ ವರ್ಣರಂಜಿತ ಕಾರ್ಯಕ್ರಮಗಳ ಉದ್ಘಾಟನೆ
- ಮುಂದಿನ ಒಂಭತ್ತು ದಿನ ಮೈಸೂರಲ್ಲಿ ಮಹಾ ಹಬ್ಬದ ವಾತಾವರಣ
- ಬೆಳಕಲ್ಲಿ ಪ್ರಜ್ವಲಿಸಲಿದೆ ಸಾಂಸ್ಕೃತಿಕ ನಗರಿ: ವ್ಯಾಪಕ ಬಂದೋಬಸ್ತ್



ಮೈಸೂರು, ಸೆ.25(ಆರ್‌ಕೆ)–ಭಾರತದ ಘನತೆವೆತ್ತ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ನಾಳೆ (ಸೋಮವಾರ) ವಿಶ್ವ ಪ್ರಸಿದ್ಧ ಮೈಸೂರು ದಸರಾ ಮಹೋತ್ಸವವನ್ನು ಉದ್ಘಾಟಿಸುವರು. ಚಾಮುಂಡಿಬೆಟ್ಟದಲ್ಲಿ ಸೋಮವಾರ ಬೆಳಗ್ಗೆ 9.45 ರಿಂದ 10.05 ಗಂಟೆಯೊಳಗೆ ಸಲ್ಲುವ ಶುಭ ವೃಶ್ಚಿಕ ಲಗ್ನದಲ್ಲಿ ನಾಡ ದೇವತೆ ತಾಯಿ ಶ್ರೀ ಚಾಮುಂಡೇಶ್ವರಿ ದೇವಿಗೆ ಅಗ್ರ ಪೂಜೆ ನೆರವೇರಿಸುವ ಮೂಲಕ ರಾಷ್ಟ್ರಪತಿಗಳು 2022ರ ನವರಾತ್ರಿ ಉತ್ಸವಕ್ಕೆ ಚಾಲನೆ ನೀಡುವರು.

ಶಾಸಕ ಜಿ.ಟಿ.ದೇವೇಗೌಡರು ಅಧ್ಯಕ್ಷತೆ ವಹಿಸಲಿರುವ ಸಮಾರಂಭದಲ್ಲಿ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕೇಂದ್ರ ಸಚಿವರಾದ ನಿರ್ಮಲಾ ಸೀತಾರಾಮನ್, ಪ್ರಹ್ಲಾದ್ ಜೋಶಿ, ರಾಜೀವ್ ಚಂದ್ರಶೇಖರ್, ಶೋಭಾ ಕರಂದ್ಲಾಜೆ, ಎ.ನಾರಾಯಣಸ್ವಾಮಿ, ಭಗವಂತ್ ಖೂಬಾ, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಸಚಿವರಾದ ವಿ.ಸುನಿಲ್‌ಕುಮಾರ್, ಜೊಲ್ಲೆ ಶಶಿಕಲಾ ಅಣ್ಣಾ ಸಾಹೇಬ್, ಆನಂದ್ ಸಿಂಗ್ ಹಾಗೂ ಮೇಯರ್ ಶಿವಕುಮಾರ್ ಭಾಗವಹಿಸುವರು.

ರಾಷ್ಟ್ರಪತಿಗಳಾದ ನಂತರ ದ್ರೌಪದಿ ಮುರ್ಮು ಅವರು ಇದೇ ಪ್ರಥಮ ಬಾರಿ ಸಾಂಸ್ಕೃತಿಕ ನಗರಿ ಮೈಸೂರಿಗೆ ಆಗಮಿಸುತ್ತಿರುವುದಲ್ಲದೆ, ವಿಶ್ವ ಖ್ಯಾತಿಯ ನಾಡಹಬ್ಬ ಉದ್ಘಾಟಿಸುತ್ತಿರುವುದರಿಂದ ಅವರನ್ನು ಬರಮಾಡಿಕೊಳ್ಳಲು ಜಿಲ್ಲಾಡಳಿತ ಸರ್ವ ರೀತಿಯಲ್ಲಿ ಸಜ್ಜಾಗಿದ್ದು, ವ್ಯಾಪಕ ಪೊಲೀಸ್ ಬಂದೋಬಸ್ತ್ ಮಾಡಲಾಗಿದೆ. ಅದರೊಟ್ಟಿಗೆ ನವರಾತ್ರಿ ಉತ್ಸವ ಆರಂಭವಾಗಲಿದ್ದು, ಚಾಮುಂಡಿಬೆಟ್ಟ, ಅರಮನೆ ಸೇರಿದಂತೆ ಮೈಸೂರು ನಗರ ಮದುವಣಗಿತ್ತಿಯಂತೆ ಶೃಂಗಾರಗೊಂಡಿದೆ. ರಾಷ್ಟ್ರಪತಿಗಳು ನಾಡಹಬ್ಬಕ್ಕೆ ಚಾಲನೆ ನೀಡುತ್ತಿದ್ದಂತೆಯೇ ದಸರಾ ಇನ್ನಿತರ ಎಲ್ಲಾ ಕಾರ್ಯಕ್ರಮಗಳೂ ಚಾಲನೆ ಪಡೆದುಕೊಳ್ಳಲಿವೆ. ▶ 9ನೇ ಪುಟಕ್ಕೆ

ಮುರ್ಮುಗೆ ಆದಿವಾಸಿಗಳಿಂದ ಸಾಂಪ್ರದಾಯಿಕ ಸ್ವಾಗತ

ರಾಷ್ಟ್ರಪತಿ ದ್ರೌಪದಿ ಮುರ್ಮು ಬುಡಕಟ್ಟು ಸಮುದಾಯಕ್ಕೆ ಸೇರಿರುವ ಹಿನ್ನೆಲೆಯಲ್ಲಿ ನಾಳೆ ಚಾಮುಂಡಿಬೆಟ್ಟದಲ್ಲಿ ಮೈಸೂರು, ಚಾಮರಾಜನಗರ, ಕೊಡಗು ಉತ್ತರ ಕನ್ನಡ ಜಿಲ್ಲೆಯಿಂದ ವಿವಿಧ ಬುಡಕಟ್ಟು ಸಮುದಾಯ ಕಲಾವಿದರನ್ನು ಆಹ್ವಾನಿಸಲಾಗಿದೆ. ಮಹಿಷಾಸುರ ಪ್ರತಿಮೆ ಬಳಿ ರಾಷ್ಟ್ರಪತಿಗಳ ಆಗಮನ ಹಾಗೂ ನಿರ್ಗಮನದ ವೇಳೆ ತಮ್ಮ ಸಾಂಪ್ರದಾಯಿಕ ನೃತ್ಯ, ಉಡುಗೆ–ತೊಡುಗೆಯೊಂದಿಗೆ ಸ್ವಾಗತಿಸಲಿದ್ದಾರೆ. ಉತ್ತರ ಕನ್ನಡ ಜಿಲ್ಲೆಯಿಂದ ಸಿದ್ಧಿ ಕಲಾತಂಡ ಆಗಮಿಸಿದ್ದು, ನೋಡಲ್ ಅಧಿಕಾರಿಯಾಗಿರುವ ವಿಜಯ್ ಕುಮಾರ್ ಪಾಟೀಲ್, ಅಂಬಿಕಾ ಪೇಟೆ ನೇತೃತ್ವದಲ್ಲಿ 13 ಮಂದಿ ಸಿದ್ಧಿ ಜನಾಂಗದ ಕಲಾವಿದರು ಮೈಸೂರಿಗೆ ಬಂದಿದ್ದಾರೆ. ಇವರು ಸುಗ್ಗಿಹಬ್ಬ, ಶುಭ ಕಾರ್ಯದಲ್ಲಿ ಪ್ರದರ್ಶಿಸುವ ಸಾಂಪ್ರದಾಯಿಕ ಡಮಾಮಿ ನೃತ್ಯ ಪ್ರದರ್ಶಿಸಲಿದ್ದಾರೆ. ಚಾಮರಾಜನಗರ ಜಿಲ್ಲೆಯಿಂದ ನೋಡಲ್ ಅಧಿಕಾರಿಯಾಗಿರುವ ಎಂ.ಬಸವಣ್ಣ ▶ 9ನೇ ಪುಟಕ್ಕೆ

ಐತಿಹಾಸಿಕ ಕ್ಷಣಕ್ಕೆ ಚಾಮುಂಡಿ ಸನ್ನಿಧಿಯಲ್ಲಿ ಸಕಲ ಸಿದ್ಧತೆ

ದೇವಿಯ ಉತ್ಸವ ಮೂರ್ತಿಗೆ ಆರಂಭವಾಗಿದೆ ಸಾಂಪ್ರದಾಯಿಕ ಪೂಜಾ ಕೈಂಕರ್ಯ

ಮೈಸೂರು,ಸೆ.25(ಎಂಟಿವೈ)–ನಾಡಹಬ್ಬ ದಸರಾ ಮಹೋತ್ಸವಕ್ಕೆ ಕ್ಷಣಗಣನೆ ಆರಂಭವಾಗಿದ್ದು, ಚಾಮುಂಡಿಬೆಟ್ಟದಲ್ಲಿ ಈ ಸಾಲಿನ ದಸರಾ ಉದ್ಘಾಟನೆ ಹಾಗೂ ದೇವಾಲಯದಲ್ಲಿ ನಡೆಯಲಿರುವ ಧಾರ್ಮಿಕ ಕಾರ್ಯಕ್ರಮಕ್ಕೆ ಸಕಲ ಸಿದ್ಧತೆ ಮಾಡಿಕೊಳ್ಳಲಾಗಿದೆ. ಚಾಮುಂಡಿಬೆಟ್ಟದಲ್ಲಿ ದೇವಾಲಯದ ಪಕ್ಕದ ಆವರಣದಲ್ಲಿ ದಸರಾ ಉತ್ಸವ ಉದ್ಘಾಟನಾ ಸಮಾರಂಭಕ್ಕಾಗಿ ವೇದಿಕೆ ನಿರ್ಮಿಸಲಾಗಿದ್ದು, 13 ಮಂದಿ ಗಣ್ಯರು ಆಸೀನರಾಗಲು ವೇದಿಕೆಯಲ್ಲಿ ಆಸನದ ವ್ಯವಸ್ಥೆ ಮಾಡಲಾಗಿದೆ. ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಉದ್ಘಾಟಿಸಲಿರುವ ಕಾರ್ಯಕ್ರಮವನ್ನು ವೀಕ್ಷಿಸಲು 1200 ಮಂದಿ ಗಣ್ಯರಿಗಷ್ಟೇ ಅವಕಾಶ ಮಾಡಲಾಗಿದೆ. ಕಾರ್ಯಕ್ರಮದ ಅಂಗವಾಗಿ ಚಾಮುಂಡಿಬೆಟ್ಟ ಹಾಗೂ ಬೆಟ್ಟಕ್ಕೆ ಸಂಪರ್ಕ ಕಲ್ಪಿಸುವ ಎಲ್ಲಾ ರಸ್ತೆಗಳಲ್ಲೂ ಬಿಗಿ ಭದ್ರತೆಗಾಗಿ ಪೊಲೀಸರನ್ನು ನಿಯೋಜಿಸಲಾಗಿದೆ. ಭಾನುವಾರ ರಾತ್ರಿಯಿಂದಲೇ ಪೊಲೀಸರು ಚಾಮುಂಡಿಬೆಟ್ಟದಲ್ಲಿ ಬೀಡು ಬಿಟ್ಟಿದ್ದಾರೆ. ಅಲ್ಲದೇ, ಭಾನುವಾರ ಬೆಳಗ್ಗಿನಿಂದಲೇ ಚಾಮುಂಡಿಬೆಟ್ಟಕ್ಕೆ ಬರುವ ಎಲ್ಲಾ ವಾಹನಗಳನ್ನು ತಪಾಸಣೆ ಮಾಡುವುದರೊಂದಿಗೆ ದಾರಿಯುದ್ದಕ್ಕೂ ಹಾಗೂ ದೇವಾಲಯದ ಸುತ್ತಲೂ ಲೋಹಶೋಧಕ ಹಾಗೂ ▶ 9ನೇ ಪುಟಕ್ಕೆ



ಚಾಮುಂಡೇಶ್ವರಿ ಉತ್ಸವ ಮೂರ್ತಿಯನ್ನು ಅಣಿಗೊಳಿಸುತ್ತಿರುವುದನ್ನು ಕಾಣಬಹುದು.



ದಸರಾ ಉದ್ಘಾಟನಾ ಕಾರ್ಯಕ್ರಮಕ್ಕೆ ಬೆಳ್ಳಿ ರಥ ಸಿದ್ಧಗೊಳಿಸುತ್ತಿರುವುದು.




ಇಂದು ಖಾಸಗಿ ದರ್ಬಾರ್‌ಗೆ ಚಾಲನೆ



ಮೈಸೂರು, ಸೆ.25(ಎಂಟಿವೈ)– ದಸರಾ ಮಹೋತ್ಸವದ ಹಿನ್ನೆಲೆಯಲ್ಲಿ ಅರಮನೆಯಲ್ಲಿ ನಾಳೆ(ಸೆ.26)ಯಿಂದ ಖಾಸಗಿ ದರ್ಬಾರ್ ಆರಂಭವಾಗಲಿದ್ದು, ನವರಾತ್ರಿಯ ವೇಳೆ ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಚಿನ್ನದ ಸಿಂಹಾಸನವೇರಿ ವಿವಿಧ ಧಾರ್ಮಿಕ ಕೈಂಕರ್ಯಗಳಲ್ಲಿ ಪಾಲ್ಗೊಳ್ಳಲಿದ್ದಾರೆ.

ನವರಾತ್ರಿ ಆರಂಭದ ಹಿನ್ನೆಲೆಯಲ್ಲಿ ಅರಮನೆಯ ದರ್ಬಾರ್ ಹಾಲ್‌ನಲ್ಲಿ ನಾಳೆ ಬೆಳಗ್ಗಿನಿಂದ ಮಧ್ಯಾಹ್ನದವರೆಗೂ ವಿವಿಧ ಪೂಜಾ ಕೈಂಕರ್ಯಗಳಲ್ಲಿ ರಾಜವಂಶಸ್ಥರಾದ ಪ್ರಮೋದಾದೇವಿ ಒಡೆಯರ್, ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಹಾಗೂ ತ್ರಿಷಿಕಾ ಕುಮಾರಿ ಒಡೆಯರ್, ಆದ್ಯವೀರ ಒಡೆಯರ್ ಸಕ್ರಿಯವಾಗಿ ಪಾಲ್ಗೊಳ್ಳಲಿದ್ದಾರೆ. ಯದುವಂಶದ ಸಾಂಪ್ರದಾಯಿಕ ಆಚರಣೆಗಳಲ್ಲಿ ಪ್ರಮುಖವಾದ ಖಾಸಗಿ ದರ್ಬಾರ್‌ಗೆ ಚಾಲನೆ ದೊರೆಯಲಿದೆ. ಖಾಸಗಿ ದರ್ಬಾರ್‌ಗಾಗಿ ಅರಮನೆಯ ನೆಲಮಾಳಿಗೆಯಲ್ಲಿದ್ದ ಚಿನ್ನದ ಸಿಂಹಾಸನದ ಬಿಡಿಭಾಗಗಳನ್ನು ಸೆ.20ರಂದು ದರ್ಬಾರ್ ಹಾಲ್‌ನಲ್ಲಿ ಜೋಡಿಸಲಾಗಿತ್ತು. ಸಿಂಹಾಸನಕ್ಕೆ ನಾಳೆ ಬೆಳಗ್ಗೆ 6.15ರಿಂದ 6.30ರೊಳಗೆ ಸಲ್ಲುವ ಶುಭ ಗಳಿಗೆಯಲ್ಲಿ 'ಸಿಂಹ' ಜೋಡಣೆ ಮಾಡಲಾಗುತ್ತದೆ. ಬಳಿಕ ಮಧ್ಯಾಹ್ನ 12.15ರಿಂದ 12.25ರೊಳಗೆ ಸಿಂಹಾಸನ ರೋಹಣ ಮಾಡಿ ದರ್ಬಾರ್ ನಡೆಸಲಿದ್ದಾರೆ. ನಾಳೆಯಿಂದ ಅ.3ರವರೆಗೂ ಸಂಜೆ 6.30ರಿಂದ ಖಾಸಗಿ ದರ್ಬಾರ್ ನಡೆಸಲಾಗುತ್ತದೆ

ಮೈಸೂರು ವಿವಿ ಕಾರ್ಯಸೌಧಕ್ಕೆ ಕಾಟಾಚಾರದ ದೀಪಾಲಂಕಾರ!



ಮೈಸೂರು ವಿವಿ ಕ್ರಾಫರ್ಡ್ ಹಾಲ್‌ಗೆ ಈ ಬಾರಿಯ ದೀಪಾಲಂಕಾರ.



ಕಳೆದ ವರ್ಷ ಆಕರ್ಷಕ ದೀಪಾಲಂಕಾರದಿಂದ ಕಂಗೊಳಿಸಿದ್ದ ಕ್ರಾಫರ್ಡ್ ಹಾಲ್.

ಮೈಸೂರು, ಸೆ.25– ದಸರಾ ಪ್ರಯುಕ್ತ ಪ್ರತಿಷ್ಠಿತ ಮೈಸೂರು ವಿಶ್ವವಿದ್ಯಾನಿಲಯದ ಕಾರ್ಯಸೌಧ (ಕ್ರಾಫರ್ಡ್ ಹಾಲ್)ಕ್ಕೆ ಈ ಬಾರಿಯೂ ವಿದ್ಯುತ್ ದೀಪಾಲಂಕಾರ ಮಾಡಲಾಗಿದೆ. ಆದರೆ ಇದು ಕಾಟಾಚಾರಕ್ಕೆ ಮಾಡಿದಂತಿದೆ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಬಳ್ಳಿ ಮಾದರಿಯಲ್ಲಿ ನಾನಾ ದೀಪಗಳನ್ನು ಅಳವಡಿಸಲಾಗಿದೆ. ಆದರೆ ಇದು ಸ್ವಲ್ಪವೂ ಕಾರ್ಯಸೌಧಕ್ಕೆ ಒಪ್ಪುವಂತಿಲ್ಲ. ನಾಲ್ವಡಿ ಕೃಷ್ಣರಾಜ ಒಡೆಯರ್ ಕೊಡುಗೆಯಾದ ಶತಮಾನದ ಇತಿಹಾಸವಿರುವ ಮೈಸೂರು ವಿವಿ ಕಾರ್ಯಸೌಧಕ್ಕೆ ಇಷ್ಟೊಂದು ಕೆಟ್ಟ ಹಾಗೂ ಬೇಜವಾಬ್ದಾರಿ ರೀತಿಯಲ್ಲಿ ದೀಪಾಲಂಕಾರ ಮಾಡಬಾರದಿತ್ತು ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ಮೈಸೂರಿನಲ್ಲಿರುವ ಪಾರಂಪರಿಕ ಕಟ್ಟಡಗಳಲ್ಲೇ ಕ್ರಾಫರ್ಡ್ ಭವನ ಅತ್ಯಂತ ಸುಂದರವಾಗಿದೆ. ಈ ಭವನದ ನಿರ್ಮಾಣ ಶೈಲಿ ಹಾಗೂ ಅದಕ್ಕೆ ಬಳಿದಿರುವ ಬಣ್ಣಕ್ಕೆ ಒಪ್ಪುವಂತಹ ರೀತಿಯಲ್ಲಿ ಇದುವರೆಗೂ ದೀಪಾಲಂಕಾರ ಮಾಡಲಾಗುತ್ತಿತ್ತು. ಇದರಿಂದಾಗಿ ಕಟ್ಟಡದ ಸೌಂದರ್ಯ ಇಮ್ಮಡಿಯಾಗುತ್ತಿತ್ತು. ಪ್ರತಿ ದಸರಾದಲ್ಲಿ ಬಹಳ ಎಚ್ಚರಿಕೆ ವಹಿಸಿ ಸೂಕ್ತವಾದ ವಿದ್ಯುತ್ ಬಲ್ಬ್‌ಗಳನ್ನು ಅಳವಡಿಸಲಾಗುತ್ತಿತ್ತು. ದಸರಾ ದೀಪಾಲಂಕಾರ ಸವಿಯಲು ಬಂದವರು ತಪ್ಪದೆ ಕ್ರಾಫರ್ಡ್ ಹಾಲ್ ಬಳಿ ಹೋಗಿ, ಫೋಟೋ ಕ್ಲಿಕ್ಕಿಸಿಕೊಳ್ಳುತ್ತಿದ್ದರು. ಹಳೆಯ ಹಾಗೂ ಹಾಲಿ ವಿದ್ಯಾರ್ಥಿಗಳು ಕ್ರಾಫರ್ಡ್ ಹಾಲ್ ಬಳಿಯೇ ತಾಸುಗಟ್ಟಲೆ ಕುಳಿತು ಬೆಳಕಿನ ಸೊಬಗು ಸವಿಯುತ್ತಿದ್ದರು.

ಆದರೆ ಈಗ ಮಾಡಿರುವ ದೀಪಾಲಂಕಾರ ಯಾವುದೋ ಹಳ್ಳಿಯ ಜಾತ್ರೆಯಲ್ಲಿ ಸೀರಿಯಲ್ ಸೆಟ್ ಅಳವಡಿಸಿದಂತೆ ಭಾಸವಾಗುತ್ತದೆ. ಯಾವುದೋ ಧಾರ್ಮಿಕ ಕೇಂದ್ರಕ್ಕೋ ಇನ್ಯಾವುದೊ ಸಮಾರಂಭಕ್ಕೋ ಕಿಂಚಿತ್ತೂ ಸೌಂದರ್ಯ ಪ್ರಜ್ಞೆ ಇಲ್ಲದ ವ್ಯಕ್ತಿ ವಿದ್ಯುತ್ ದೀಪಾಲಂಕಾರ ಮಾಡಿದಂತಿದೆ. ಪ್ರತಿಷ್ಠಿತ ಮೈಸೂರು ವಿವಿ ಕಾರ್ಯಸೌಧಕ್ಕೆ ದೀಪಾಲಂಕಾರ ಮಾಡುವ ಮುನ್ನ ಹತ್ತಾರು ಬಾರಿ ಯೋಚಿಸಿ ಈ ಕಾರ್ಯದಲ್ಲಿ ಪರಿಣಿತಿ ಇರುವಂತವರ ಸಲಹೆ ಪಡೆದು ಮುಂದುವರೆಯಬೇಕಿತ್ತು. ಇದರ ಜೊತೆಗೆ ದೀಪಾಲಂಕಾರದ ಬಗ್ಗೆ ಅನುಭವವಿರುವ, ಸೌಂದರ್ಯ ಪ್ರಜ್ಞೆಯುಳ್ಳ ಗುತ್ತಿಗೆದಾರನಿಗೆ ಜವಾಬ್ದಾರಿ ನೀಡಿ, ವಿವಿ ಕುಲಪತಿ, ಕುಲಸಚಿವರು ಮೇಲುಸ್ತುವಾರಿ ಮಾಡಬೇಕಿತ್ತು. ಆದರೆ ಈ ಬಾರಿ ಇದ್ಯಾವುದೂ ನಡೆದಂತಿಲ್ಲ. ಬೇಕಾಬಿಟ್ಟಿ ಮನಃಸ್ಥಿತಿ ಎದ್ದು ಕಾಣುತ್ತಿದೆ. ಕೇವಲ ಹಣಕ್ಕೋಸ್ಕರ ಗುತ್ತಿಗೆದಾರ ಕಾಟಾಚಾರಕ್ಕೆ ದೀಪಾಲಂಕಾರ ಮಾಡಿದಂತಿದೆ ಎಂದು ದೂರಿದ್ದಾರೆ. ದಸರಾ ದೀಪಾಲಂಕಾರದ ಉಸ್ತುವಾರಿ ಹೊತ್ತಿರುವ ಅಧಿಕಾರಿಗಳು ಕೂಡಲೇ ಇದರತ್ತ ಗಮನಹರಿಸಿ ಸರಿಪಡಿಸುವ ಕೆಲಸ ಮಾಡಬೇಕೆಂದು ಸೌಂದರ್ಯ ಪ್ರಜ್ಞೆಯುಳ್ಳವರು ಆಗ್ರಹಿಸಿದ್ದಾರೆ.





ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಭಾನುವಾರ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಸುತ್ತೂರು ಶಾಖಾ ಮಠಕ್ಕೆ ಭೇಟಿ ನೀಡಿ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಗಳ ಆಶೀರ್ವಾದ ಪಡೆದರು. ಈ ವೇಳೆ ಸಂಸದ ಪ್ರತಾಪ್ ಸಿಂಹ ಸೇರಿದಂತೆ ಬಿಜೆಪಿ ಮುಖಂಡರು ಉಪಸ್ಥಿತರಿದ್ದರು.

ಮೈಸೂರು ದೀಪಾಲಂಕಾರ ವೀಕ್ಷಿಸಿದ ಸಿಎಂ

ಮೈಸೂರು, ಸೆ.25(ಜಿಎ)– ಮೈಸೂರು ನಗರದೆಲ್ಲೆಡೆ ಕಂಗೊಳಿಸುತ್ತಿದ್ದ ವಿದ್ಯುತ್ ದೀಪಾಲಂಕಾರವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭಾನುವಾರ ರಾತ್ರಿ ವೀಕ್ಷಿಸಿ ಸಂಭ್ರಮಿಸಿದರು. ಮುಖ್ಯಮಂತ್ರಿಗಳೊಂದಿಗೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಸುನೀಲ್‌ಕುಮಾರ್, ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಸೇರಿದಂತೆ ಗಣ್ಯರು ಇಂದು ರಾತ್ರಿ ವಿದ್ಯಾಪೀಠ ಸರ್ಕಲ್ ನಿಂದ ಅಂಬಾರಿ ಬಸ್‌ನಲ್ಲಿ ಹಾರ್ಡಿಂಗ್ ಸರ್ಕಲ್, ಜಯಚಾಮರಾಜೇಂದ್ರ ಒಡೆಯರ್ ಸರ್ಕಲ್, ಕೆ.ಆರ್. ಸರ್ಕಲ್, ಸಯ್ಯಾಜಿ ರಾವ್ ರಸ್ತೆ ಮೂಲಕ ಹೈವೇ ಸರ್ಕಲ್, ಆಯುರ್ವೇದಿಕ್ ಆಸ್ಪತ್ರೆಯಿಂದ ಬಲಕ್ಕೆ ತಿರುಗಿ, ರೈಲ್ವೇ ನಿಲ್ದಾಣ, ಮೆಟ್ರೊ ಪೋಲೋ ಸರ್ಕಲ್, ಹುಣಸೂರು ರಸ್ತೆ ಕಡೆಗೆ ತಿರುಗಿ ಸ್ಕೌಟ್ಸ್ ಅಂಡ್ ಗೈಡ್ಸ್ ಶಾಲೆ ಮೂಲಕ ಚಾಮರಾಜ ಜೋಡಿ ರಸ್ತೆಗಳಲ್ಲಿನ ದೀಪಾಲಂಕಾರ ವೀಕ್ಷಿಸಿ ಮೆಚ್ಚುಗೆ ವ್ಯಕ್ತಪಡಿಸಿದರು.

ಭಾರತದ ಐಕ್ಯತೆಗಾಗಿ ರಾಹುಲ್‌ಗಾಂಧಿ ಪಾದಯಾತ್ರೆ

ಪೂರ್ವಭಾವಿ ಸಭೆಯಲ್ಲಿ ಜಿಪಂ ಮಾಜಿ ಅಧ್ಯಕ್ಷ ಕೆ.ಮರೀಗೌಡ



ಮೈಸೂರು,ಸೆ.25–ಭಾರತ ಸರ್ವಧರ್ಮ ಸಮನ್ವಯ ರಾಷ್ಟ್ರವಾಗಿದ್ದು, ಎಲ್ಲಾ ಧರ್ಮ, ಜಾತಿ ಜನಾಂಗದ ಜನರು ನೆಮ್ಮದಿಯಿಂದ ಬದುಕಲು ಅಂಬೇಡ್ಕರ್‌ರವರು ಸಂವಿಧಾನದಲ್ಲಿ ಅವಕಾಶ ಮಾಡಿಕೊಟ್ಟಿದ್ದಾರೆ. ಆದರೆ ಕೇಂದ್ರ ಮತ್ತು ರಾಜ್ಯದ ಬಿಜೆಪಿ ಸರ್ಕಾರಗಳು ಜನರಿಗೆ ಕೋಮುವಾದ, ಜಾತಿವಾದ ಮತ್ತು ಸಂಘರ್ಷಗಳಿಗೆ ಉತ್ತೇಜನ ನೀಡುತ್ತಿರುವುದರ ವಿರುದ್ಧ ರಾಹುಲ್‌ಗಾಂಧಿಯವರು ಭಾರತದ ಐಕ್ಯತೆಗಾಗಿ ಪಾದಯಾತ್ರೆ ಮಾಡುತ್ತಿದ್ದಾರೆ ಎಂದು ಜಿ.ಪಂ. ಮಾಜಿ ಅಧ್ಯಕ್ಷ ಕೆ.ಮರೀಗೌಡ ತಿಳಿಸಿದರು.

ಚಾಮುಂಡೇಶ್ವರಿ ಕ್ಷೇತ್ರದ ಬೀರಿಹುಂಡಿಯಲ್ಲಿ ನಡೆದ ಭಾರತ್ ಜೋಡೋ ಯಾತ್ರೆ ಮತ್ತು ಬೂತ್‌ಮಟ್ಟದ ಪದಾಧಿಕಾರಿಗಳ ಆಯ್ಕೆಯ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಬಿಜೆಪಿ ಪಕ್ಷ ನುಡಿದಂತೆ ನಡೆಯದೆ ಸುಳ್ಳು ಭರವಸೆಗಳನ್ನು ನೀಡುತ್ತಿದೆ. ಪೆಟ್ರೋಲ್, ಡೀಸೆಲ್, ಗ್ಯಾಸ್, ದಿನಬಳಕೆಯ ವಸ್ತುಗಳ ಬೆಲೆ ಗಗನಕ್ಕೇರಿ, ಜನಸಾಮಾನ್ಯರ ಬದುಕು ದುಸ್ತರವಾಗಿದೆ. ಜಿ.ಎಸ್.ಟಿ. ಹಾಕಿದ್ದರಿಂದ ಸಣ್ಣಸಣ್ಣ ಕೈಗಾರಿಕೆಗಳು ಮುಚ್ಚಿ ಹೋಗಿವೆ. ನಿರುದ್ಯೋಗ ಸಮಸ್ಯೆ ತಾಂಡವವಾಡುತ್ತಿದೆ. ಎಲ್ಲಾ ಸರ್ಕಾರಿ ಒಡೆತನದ ರೈಲ್ವೆ, ಬಿಎಸ್‌ಎನ್‌ಎಲ್ ಕಂಪನಿಗಳನ್ನು ಅದಾನಿ ಅಂಬಾನಿಯರಿಗೆ ಮಾರುತ್ತಿದ್ದಾರೆ. ಈ ಎಲ್ಲದರ ಪರಿಣಾಮವಾಗಿ ಜನರಲ್ಲಿ ಜಾಗೃತಿ ಮೂಡಿಸಿ ಬಿಜೆಪಿ ಪಕ್ಷವನ್ನು ಕಿತ್ತೊಗೆಯಲು ರಾಹುಲ್‌ಗಾಂಧಿಯವರು ಸಂಕಲ್ಪ ಮಾಡಿ ಪಾದಯಾತ್ರೆ ಪ್ರಾರಂಭಿಸಿದ್ದಾರೆ. ಈ ಪಾದಯಾತ್ರೆ ಯಶಸ್ಸಿಗೆ ನಿಮ್ಮೆಲ್ಲರ ಸಹಕಾರ ಅಗತ್ಯವಿದೆ ಎಂದರು.

ಸಭೆಯಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಿ.ಗುರುಸ್ವಾಮಿ, ಗ್ರಾಪಂ ಮಾಜಿ ಅಧ್ಯಕ್ಷರಾದ ಬಸವರಾಜು, ಗುಡ್ಡಪ್ಪ, ಬಸವೇಗೌಡ, ಮಾಲೇಗೌಡ, ಅಸಂಘಟಿತ ಕಾರ್ಮಿಕ ಸಂಘದ ಅಧ್ಯಕ್ಷ ಕೆರೆಹುಂಡಿ ಮಹೇಶ್, ಎನ್‌ಎಸ್‌ಯುಐ ತಾಲೂಕು ಘಟಕದ ಅಧ್ಯಕ್ಷ ಕೋಟೆಹುಂಡಿ ಮನೋಜ್, ಮಲ್ಲೇಶ್, ಮಹಾದೇವ್, ಬಡಗಲಹುಂಡಿ ರವಿ, ಸ್ವಾಮಿ, ಶಿವಣ್ಣ, ಕರೀಗೌಡ, ಕೆಂಪೇಗೌಡ, ಉದಯ್‌ಕುಮಾರ್, ಪುಟ್ಟಸ್ವಾಮಿ ನಾಯ್ಕ, ಕೃಷ್ಣಮೂರ್ತಿ, ರಾಜೇಗೌಡ, ಸಿದ್ದರಾಜು, ಚಿಕಾಳು ಮತ್ತಿತರರು ಹಾಜರಿದ್ದರು.

ಅ.15ರಂದು ಹಿಂದಿ ಹೇರಿಕೆ ವಿರುದ್ಧ ರಾಜ್ಯಾದ್ಯಂತ ಚಳವಳಿ

ಮೈಸೂರಲ್ಲಿ ಪ್ರತಿಭಟನೆ ನಡೆಸಿ ಕನ್ನಡಪರ ಹೋರಾಟಗಾರ ವಾಟಾಳ್ ನಾಗರಾಜ್

ಮೈಸೂರು,ಸೆ.25(ಪಿಎಂ)–ರಾಜ್ಯದಲ್ಲಿ ಹಿಂದಿ ಭಾಷೆ ಹೇರಿಕೆ ವಿರೋಧಿಸಿ ಅ.15ರಂದು ರಾಜ್ಯಾದ್ಯಂತ ಎಲ್ಲಾ ಜಿಲ್ಲಾಧಿಕಾರಿ ಕಚೇರಿ ಎದುರು ಚಳವಳಿ ನಡೆಸಲಾಗುವುದು ಎಂದು ಕನ್ನಡ ಚಳವಳಿ ವಾಟಾಳ್ ಪಕ್ಷದ ಅಧ್ಯಕ್ಷ ವಾಟಾಳ್ ನಾಗರಾಜ್ ತಿಳಿಸಿದರು.

ಮೈಸೂರಿನ ಜಯಚಾಮರಾಜ ಒಡೆಯರ್ ವೃತ್ತದಲ್ಲಿ ಬೆಂಬಲಿಗರೊಂದಿಗೆ ಪ್ರತಿಭಟನೆ ನಡೆಸಿ, ಮಾತನಾಡಿದ ಅವರು, ಹಿಂದಿ ಹೇರಿಕೆ ಮೂಲಕ ಪ್ರಾದೇಶಿಕ ಭಾಷೆಗಳನ್ನು ತುಳಿಯಲಾಗುತ್ತಿದೆ. ಪ್ರಾದೇಶಿಕ ಭಾಷೆಗಳಿಗೆ ದೇಶದಲ್ಲಿ ಪ್ರಾಮುಖ್ಯತೆ ನೀಡಬೇಕು. ಒಕ್ಕೂಟ ವ್ಯವಸ್ಥೆಯಲ್ಲಿ ರಾಜ್ಯಗಳಿಗೆ ತನ್ನದೇ ಆದ ಸ್ಥಾನಮಾನವಿದೆ ಎಂದರು.



ದೇಶದ ಭಾಷೆಗಳಲ್ಲಿ ಹಿಂದಿಯೂ ಒಂದಾಗಿದೆ. ಕರ್ನಾಟಕದಲ್ಲಿ ಕನ್ನಡವೇ ಸಾರ್ವಭೌಮ. ಇಲ್ಲಿ ಹಿಂದಿ ಹೇರಿಕೆ ಸಹಿಸಲು ಸಾಧ್ಯವಿಲ್ಲ. ಬ್ಯಾಂಕ್‌ಗಳಲ್ಲಿ ಕನ್ನಡ ಭಾಷೆಗೆ ಆದ್ಯತೆ ನೀಡಬೇಕು. ಚೆಕ್‌ಗಳು ಕನ್ನಡದಲ್ಲೇ ಇರಬೇಕು. ರೈಲ್ವೆ, ಅಂಚೆ ಇಲಾಖೆ ಸೇರಿದಂತೆ ಕೇಂದ್ರದ ಅಧೀನದ ಇಲಾಖೆಗಳಲ್ಲಿ ಕನ್ನಡಕ್ಕೆ ಮೊದಲ ಆದ್ಯತೆ ನೀಡಬೇಕು ಎಂದು ಒತ್ತಾಯಿಸಿದರು. ಕೇಂದ್ರದ ಯಾರೇ ಸಚಿವರು ರಾಜ್ಯಕ್ಕೆ ಬಂದರೂ ಅವರ ಸಮಾರಂಭ ಕನ್ನಡದಲ್ಲೇ ನಡೆಯಬೇಕು. ಕರ್ನಾಟಕದಲ್ಲಿ ಕನ್ನಡವೇ ಅಧಿಕೃತವಾಗಿ ಭಾಷೆ ಆಗಿರುವ ಹಿನ್ನೆಲೆಯಲ್ಲಿ ಹಿಂದಿಯನ್ನು ತೀವ್ರವಾಗಿ ವಿರೋಧಿಸುತ್ತೇವೆ ಎಂದರು. ಬೆಂಬಲಿಗರಾದ ಮೂಗೂರು ನಂಜುಂಡಸ್ವಾಮಿ, ತಾಯೂರು ವಿಠ್ಠಲಮೂರ್ತಿ, ಪಾರ್ಥಸಾರಥಿ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಅ.30ರಂದು ಕಟ್ಟಡ ನಿರ್ಮಾಣ, ಅಸಂಘಟಿತ ಕಾರ್ಮಿಕರ ಕಾರ್ಯಾಗಾರ



ಮೈಸೂರು, ಸೆ.25(ಆರ್‌ಕೆಬಿ)– ಕರ್ನಾಟಕ ಕಾರ್ಮಿಕ ಸಂಘದ ವತಿಯಿಂದ ಕಾರ್ಮಿಕ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಸರ್ಕಾರದ ಗಮನ ಸೆಳೆಯಲು ಅ.30ರಂದು ಕುಣಿಗಲ್ ಪಟ್ಟಣದ ಜಿಕೆಬಿಎಂಎಸ್ ಶಾಲಾ ಬಯಲು ರಂಗಮಂದಿರದಲ್ಲಿ ಕಟ್ಟಡ ನಿರ್ಮಾಣ ಮತ್ತು ಅಸಂಘಟಿತ ಕಾರ್ಮಿಕರ ಸಮಾವೇಶ ಆಯೋಜಿಸಲಾಗಿದೆ ಎಂದು ಸಂಘದ ಅಧ್ಯಕ್ಷ ಕೆ.ಎಸ್. ವೆಂಕಟಸುಬ್ಬಯ್ಯ ತಿಳಿಸಿದರು.

ಸಚಿವರಾದ ಅರೆಬೈಲು ಶಿವರಾಮ್ ಹೆಬ್ಬಾರ್, ಬಿ.ಶ್ರೀರಾಮುಲು, ಜ್ಞಾನಪ್ರಕಾಶ ಸ್ವಾಮೀಜಿ ಇನ್ನಿತರರು ಸಮಾವೇಶದಲ್ಲಿ ಭಾಗವಹಿಸಲಿದ್ದಾರೆ ಎಂದು ಅವರು ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಇಂದಿನ ದಿನಬಳಕೆ ವಸ್ತುಗಳ ಬೆಲೆಯೇರಿಕೆ, ದುಬಾರಿಯಾಗಿರುವ ಕಚ್ಚಾ ವಸ್ತುಗಳು, ಕಾರ್ಮಿಕ ಇಲಾಖೆಯ ದ್ವಂದ್ವ ನೀತಿ, ಕಾರ್ಮಿಕರಿಗೆ ನೋಂದಣಿ ಮಾಡಲು ಸಿಎಸ್‌ಸಿ ಕೇಂದ್ರಗಳಲ್ಲಿ 500 ರೂ.ನಿಂದ ಸಾವಿರದವರೆಗೆ ದುಬಾರಿ ದರ ವಸೂಲಿ ಮಾಡುತ್ತಿರುವ ಬಗ್ಗೆ ಸರ್ಕಾರದ ಗಮನ ಸೆಳೆಯಲಾಗುವುದು. ಜೊತೆಗೆ ಸರ್ಕಾರದ ಸೌಲಭ್ಯಗಳನ್ನು ಶೀಘ್ರವಾಗಿ ದೊರಕಿಸುವಂತೆ ಸರ್ಕಾರದ ಮೇಲೆ ಒತ್ತಡ ಹೇರಲಾಗುವುದು ಎಂದು ಹೇಳಿದರು.

ಸಂಘದ ಜಿಲ್ಲಾಧ್ಯಕ್ಷ ಎಲ್.ಕೃಷ್ಣ ಮಾತನಾಡಿ, ಮೈಸೂರು ನಗರದಲ್ಲಿ ರಸ್ತೆಬದಿ ವ್ಯಾಪಾರಕ್ಕೆ ಸ್ಥಳೀಯರಿಗೆ ಅವಕಾಶ ನೀಡದೆ ಹೊರಗಡೆಯವರಿಗೆ ನೀಡುವ ಮೂಲಕ ಅಧಿಕಾರಿಗಳು ಸ್ಥಳೀಯರಿಗೆ ಸಿಗಬೇಕಾದ ಸೌಲಭ್ಯಗಳಿಂದ ವಂಚಿಸುತ್ತಿದ್ದಾರೆ. ಭ್ರಷ್ಟಾಚಾರಕ್ಕೆ ಪ್ರೋತ್ಸಾಹ ನೀಡುತ್ತಿದ್ದಾರೆ. ಅಂತಹ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಂಡು, ಬೀದಿಬದಿ ವ್ಯಾಪಾರಕ್ಕೆ ಸ್ಥಳೀಯರಿಗೂ ಅವಕಾಶ ಕಲ್ಪಿಸಬೇಕು ಎಂದು ಆಗ್ರಹಿಸಿದರು. ಗೋಷ್ಠಿಯಲ್ಲಿ ಜಿಲ್ಲಾಧ್ಯಕ್ಷ ಎಲ್.ಕೃಷ್ಣ, ಸುರೇಶ್, ರೇವಣ್ಣ ನಾಯಕ್, ಕುಮಾರಸ್ವಾಮಿ ಉಪಸ್ಥಿತರಿದ್ದರು.

ಮೈಸೂರಲ್ಲೂ ಪೇಸಿಎಂ ಅಭಿಯಾನ ಆರಂಭ

ಬಿಜೆಪಿ ಸರ್ಕಾರದಲ್ಲಿ 6 ಬಾರಿ ವಿದ್ಯುತ್ ದರ ಏರಿಕೆ, ಗ್ರಾಹಕರಿಗೆ ಹೊರೆ

ಮೈಸೂರು, ಸೆ.25(ಆರ್‌ಕೆಬಿ)– ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದ ಸರ್ಕಾರ ಶೇ.40 ಕಮಿಷನ್ ಸರ್ಕಾರ ಎಂದು ಆರೋಪಿಸಿ ಕಾಂಗ್ರೆಸ್ ಹಮ್ಮಿಕೊಂಡಿರುವ 'ಪೇಸಿಎಂ' ಕ್ಯೂಆರ್ ಕೋಡ್ ಅಂಟಿಸುವ ಅಭಿಯಾನ ಇದೀಗ ಮೈಸೂರಿನಲ್ಲೂ ಆರಂಭವಾಗಿದ್ದು, ಭಾನುವಾರ ಕಾಂಗ್ರೆಸ್ ಮುಖಂಡರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭಾವಚಿತ್ರ ಇರುವ ಕ್ಯೂಆರ್ ಕೋಡ್‌ನ ಪೋಸ್ಟರ್‌ಗಳನ್ನು ಮೈಸೂರಿನ ದಾಸಪ್ಪ ಸರ್ಕಲ್‌ನಲ್ಲಿ ಅಂಟಿಸುವ ಕಾರ್ಯಕ್ಕೆ ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಚಾಲನೆ ನೀಡಿದರು.

ಕಾಂಗ್ರೆಸ್ ಕಚೇರಿಯಲ್ಲಿ ಪತ್ರಿಕಾಗೋಷ್ಠಿ ನಡೆಸಿದ ಎಂ.ಲಕ್ಷ್ಮಣ್, ನಂತರ ಪಕ್ಷದ ನಗರಾಧ್ಯಕ್ಷ ಆರ್. ಮೂರ್ತಿ, ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಬಿ.ಎಂ.ರಾಮು ಹಾಗೂ ಇನ್ನಿತರರು ಕಾಂಗ್ರೆಸ್ ಕಚೇರಿ ಎದುರಿನ ಜೆ.ಕೆ.ಮೈದಾನದ ಕಾಂಪೌಂಡ್‌ಗೆ ಪೇಸಿಎಂ ಪೋಸ್ಟರ್‌ಗಳನ್ನು ಅಂಟಿಸಿದರು.



ಇದಕ್ಕೂ ಮೊದಲು ಮಾತನಾಡಿದ ಲಕ್ಷ್ಮಣ್, ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದ ಇದುವರೆಗೆ ಆರು ಬಾರಿ ವಿದ್ಯುತ್ ದರ ಏರಿಕೆ ಮಾಡಿದೆ. 2019ರ ಅಕ್ಟೋಬರ್‌ನಲ್ಲಿ 45 ಪೈಸೆ, 2020ರ ನವೆಂಬರ್‌ನಲ್ಲಿ 40 ಪೈಸೆ, 2021ರ ಜನವರಿಯಲ್ಲಿ 35 ಪೈಸೆ, ಮತ್ತೆ ಜೂನ್‌ನಲ್ಲಿ 30 ಪೈಸೆ, 2022ರ ಏಪ್ರಿಲ್‌ನಲ್ಲಿ 35 ಪೈಸೆ ಹಾಗೂ ಮತ್ತೆ ಜುಲೈನಲ್ಲಿ 30 ಪೈಸೆ, ಈಗ ಮತ್ತೊಮ್ಮೆ 43 ಪೈಸೆ ಹೆಚ್ಚಳ ಮಾಡಿ, ಒಟ್ಟು 2.50 ರೂ. ಗಳಷ್ಟು ಹೆಚ್ಚಳ ಮಾಡಿ ವಿದ್ಯುತ್ ಬಳಸುವ ಸಾಮಾನ್ಯ ಗ್ರಾಹಕರ ಮೇಲೆ ಬರೆ ಎಳೆದಿದೆ. ಇದು ಬಿಜೆಪಿ ಸರ್ಕಾರದ ವಿದ್ಯುತ್ ದಂಧೆ ಎಂದು ಬಿಜೆಪಿ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದರು.

ಅಕ್ಟೋಬರ್ 2020ರಲ್ಲಿ ಅಂದಿನ ಕೆಪಿಟಿಸಿಎಲ್ ಎಂಡಿ ಆಗಿದ್ದ ಪೊನ್ನುರಾಜ್ ಅವರು ಸರ್ಕಾರಕ್ಕೆ ಪತ್ರ ಬರೆದು ಹೆಚ್ಚು ಬೆಲೆ ನೀಡಿ ವಿದ್ಯುತ್ ಖರೀದಿ ಮಾಡುವುದರಿಂದ ಸರ್ಕಾರಕ್ಕೆ 4 ವರ್ಷಕ್ಕೆ 44 ಸಾವಿರ ಕೋಟಿ ನಷ್ಟವುಂಟಾಗಿದೆ ಎಂದು ತಿಳಿಸಿದ್ದಾರೆ ಎಂದರು. ಭ್ರಷ್ಟಾಚಾರದ ವಿರುದ್ಧ ಕಾಂಗ್ರೆಸ್ ನಡೆಸುತ್ತಿರುವ ಪೇಸಿಎಂ ಹೋರಾಟಕ್ಕೆ ಬಿಜೆಪಿಯವರು ಜಾತಿ ಹಣೆಪಟ್ಟಿ ಕಟ್ಟುತ್ತಿದ್ದಾರೆ. ಇದು ನಾಚಿಕೆಗೇಡಿನ ಸಂಗತಿ. ಬಿಜೆಪಿಯವರು ಭ್ರಷ್ಟಾಚಾರ ಮಾಡುತ್ತಿದ್ದರೆ ವಿರೋಧಪಕ್ಷವಾಗಿ ಕಾಂಗ್ರೆಸ್ ಸುಮ್ಮನೆ ಕೂರಬೇಕೆ? ಎಂದು ಲಕ್ಷ್ಮಣ್ ಪ್ರಶ್ನಿಸಿದರು. ನಗರಾಧ್ಯಕ್ಷ ಆರ್.ಮೂರ್ತಿ, ಜಿಪಂ ಮಾಜಿ ಅಧ್ಯಕ್ಷ ಬಿ.ಎಂ.ರಾಮು, ಮುಖಂಡರಾದ ಗಿರೀಶ್, ಕೆ.ಮಹೇಶ್, ಶಫಿ ಇತರರು ಈ ವೇಳೆ ಉಪಸ್ಥಿತರಿದ್ದರು.

ಬಿಜೆಪಿಯಿಂದ ಡರ್ಟಿ ಪಾಲಿಟಿಕ್ಸ್, ಕಾಂಗ್ರೆಸ್‌ನಿಂದಲ್ಲ...

ಮಾಜಿ ಸಚಿವ ಪ್ರಿಯಾಂಕ ಖರ್ಗೆ ವಾಗ್ದಾಳಿ

ಮೈಸೂರು,ಸೆ.25(ಜಿಎ)–ಕಾಂಗ್ರೆಸ್‌ನವರು ಡರ್ಟಿ ಪಾಲಿಟಿಕ್ಸ್ ಮಾಡುತ್ತಿಲ್ಲ. ಬಿಜೆಪಿಯವರು ಡರ್ಟಿ ಪಾಲಿಟಿಕ್ಸ್ ಮಾಡುತ್ತಿರುವುದು ಎಂದು ಮಾಜಿ ಸಚಿವ ಪ್ರಿಯಾಂಕ್ ಖರ್ಗೆ ವಾಗ್ದಾಳಿ ನಡೆಸಿದ್ದಾರೆ.



ನಗರದ ಕಾಂಗ್ರೆಸ್ ಕಚೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ಸಿನವರು ಲಿಂಗಾಯತ ಮುಖ್ಯಮಂತ್ರಿಯನ್ನು ಟಾರ್ಗೆಟ್ ಮಾಡುತ್ತಿದ್ದಾರೆ ಎಂದು ಬಿಜೆಪಿ ಆರೋಪಿಸಿದೆ. ಆದರೆ, ಬಿಎಸ್‌ವೈ ವಿರುದ್ಧ ಎಫ್‌ಐಆರ್ ದಾಖಲಾಗಿ ಅವರನ್ನು ಅಧಿಕಾರದಿಂದ ಕೆಳಗಿಸಿದಾಗ ಮತ್ತು ಗುತ್ತಿಗೆದಾರ ಸಂತೋಷ್ ಪಾಟೀಲ್ ಆತ್ಮಹತ್ಯೆ ಮಾಡಿಕೊಂಡಾಗ ನಿಮ್ಮ ಅನುಕಂಪ ಎಲ್ಲಿ ಹೋಗಿತ್ತು ಎಂದು ಪ್ರಶ್ನಿಸಿದರು.

ನಿಮ್ಮದು ಭ್ರಷ್ಟಾಚಾರಿಗಳ ಜಾತಿಯಾಗಿದೆ. ಪ್ರಶ್ನಿಸಿದರೆ ಜಾತಿ, ಧರ್ಮವನ್ನು ಮುಂದಿಡುತ್ತೀರಾ. ತಾಕತ್, ಧಮ್ಮು ಎಂದೆಲ್ಲ ಹೇಳುತ್ತೀರಿ, ಬಸವ ತತ್ವ ಎಂದರೆ ಏನೂ ಗೊತ್ತಾ? ಬಸವಣ್ಣನವರ ತತ್ವ ವಚನವನ್ನು ಓದಿಕೊಳ್ಳಿ, ಅದಕ್ಕೆ ವಿರುದ್ಧವಾಗಿ ಸರಕಾರ ಕೆಲಸ ಮಾಡುತ್ತಿದೆ. ವಿಶ್ವನಾಥ್, ಈಶ್ವರಪ್ಪ ಮೊದಲಾದವರು ನಿಮ್ಮ ಸರಕಾರದ ವಿರುದ್ಧವೇ ಮಾತನಾಡುತ್ತಿರುವಾಗ ಅವರೆಲ್ಲಾ ಲಿಂಗಾಯತರ ವಿರುದ್ಧವೇ? ಮುಖ್ಯಮಂತ್ರಿ ಮತ್ತು ಸಚಿವ ಸ್ಥಾನ ಸಿಗದ ಅನೇಕರು ಸೂಟ್ ಒಲಿಸಿಕೊಂಡು ರೆಡಿಯಾಗಿ ನಾವೇ ಸಿಎಂ ಎನ್ನುತ್ತಿದ್ದವರು ಲಿಂಗಾಯತರ ವಿರೋಧಿಗಳ ಎಂದು ಪ್ರಶ್ನಿಸಿದರು.

ನಾವೆಲ್ಲ ಡರ್ಟಿ ಪಾಲಿಟಿಕ್ಸ್ ಮಾಡುತ್ತಿಲ್ಲ, ಬಿಜೆಪಿಯವರು ಡರ್ಟಿ ಪಾಲಿಟಿಕ್ಸ್ ಮಾಡುತ್ತಿರುವುದು, ಶಾಲೆಗೆ ಹೋಗುವ ಮಕ್ಕಳಿಗೆ ಕಾವಿ ಹಾಕಿ ಕಳುಹಿಸುತ್ತಿರುವುದು, ಜಟಾಕ ಕಟ್, ಹಲಾಲ್ ಕಟ್ ಮೊದಲಾದವನ್ನು ಮುನ್ನಲೆಗೆ ತರುವ ಮೂಲಕ ನೀವೂ ಡರ್ಟಿ ಪಾಲಿಟಿಕ್ಸ್ ಮಾಡುತ್ತಿರುವುದು ಎಂದ ಅವರು, ರಾಜ್ಯದ ಜನತೆ ಭ್ರಷ್ಟಚಾರ ವಿರುದ್ಧ ತಿರುಗಿ ಬಿದ್ದಿರುವುದರಿಂದ, ಬಿಜೆಪಿ ಹತಾಶವಾಗಿದೆ. ಅಲ್ಲದೇ, ಶೇ.40 ಪರ್ಸೆಂಟ್ ಟೈಟಲ್ ಇಮೇಜ್‌ನಿಂದ ಹೊರಬರಲು ಆಗುತ್ತಿಲ್ಲ. ಹುಳುಕು ಮುಚ್ಚಿ ಕೊಳ್ಳಲು ಯತ್ನಿಸುತ್ತಿರುವ ಬಿಜೆಪಿ, ಕಾಂಗ್ರೆಸ್ಸಿಗರ ಮೇಲೆ ಸುಮ್ಮಸುಮ್ಮನೆ ಆರೋಪ ಮಾಡುತ್ತಿದೆ ಎಂದರು. ನಿಮಗೆ ನಿಜಕ್ಕೂ ಪ್ರಾಮಾಣಿಕತೆ ಇದ್ದರೆ, ನಿಜಕ್ಕೂ ನಾಚಿಕೆ ಆಗಿದ್ದರೆ ಮೊದಲು ಭ್ರಷ್ಟಾಚಾರ ನಿಲ್ಲಿಸಿ. ನಾವು ನೀಡಿರುವ ಭ್ರಷ್ಟಾಚಾರದ ಬಗ್ಗೆ ನ್ಯಾಯಾಂಗ ತನಿಖೆಗೆ ಒಪ್ಪಿಸಿ. ತನಿಖೆ ಮಾಡಿ ಜೊತೆಗೆ ನಮ್ಮದೂ ಸೇರಿ ತನಿಖೆಗೆ ಒಪ್ಪಿಸಿ. ಈ ಸವಾಲು ಒಪ್ಪಿಕೊಳ್ಳುತ್ತೀರಾ? ಒಂದು ಕ್ಯೂ ಆರ್ ಕೋಡ್‌ಗೆ ವಿಧಾನ ಸೌಧ ಅಲುಗಾಡುತ್ತಿದೆ. ಪೇಸಿಎಂ ಪೋಸ್ಟರ್ ಬಗ್ಗೆ ರಾಷ್ಟ್ರ ಮಟ್ಟದಲ್ಲಿ ಚರ್ಚೆಯಾಗುತ್ತಿದ್ದು, ಈ ಅಭಿಯಾನದಿಂದ ಸರಕಾರದ ಮುಖವಾಡ ಜನರಿಗೆ ಗೊತ್ತಾಗುತ್ತಿದೆ ಎಂದರು. ಬಿಜೆಪಿ ತನ್ನ ದುರಾಡಳಿತ ಮುಚ್ಚಿಕೊಳ್ಳಲು ಹಾಗೂ ಜನರ ದಾರಿ ತಪ್ಪಿಸಲು ಆಡಳಿತ ಪಕ್ಷವೇ ಅಧಿವೇಶನದಲ್ಲಿ ಬಾವಿಗಿಳಿದು ಪ್ರತಿಭಟನೆ ನಡೆಸಿದೆ. ಜನ ಆಕ್ರೋಶ ವ್ಯಕ್ತಪಡಿಸಿದ್ದರಿಂದ ಜನೋತ್ಸವ ಎರಡು ಬಾರಿ ರದ್ದಾಗಿ ಖಾಲಿ ಕುರ್ಚಿಗಳ ಜನಸ್ಪಂದನೆ ಮಾಡಿದ್ದಾರೆ. ಬಿಜೆಪಿಯವರಿಗೆ ಜನ ಮುಂದಿನ ದಿನಗಳಲ್ಲಿ ತಕ್ಕಪಾಠ ಕಲಿಸುತ್ತಾರೆ ಎಂದರು.

ಸೆ.28ರಿಂದ ದಸರಾ ದರ್ಶನ

ಮೈಸೂರು,ಸೆ.25–ನಾಡಹಬ್ಬ ಮೈಸೂರು ದಸರಾವನ್ನು ನೋಡಿರದ ಮೈಸೂರು ಜಿಲ್ಲೆಯ 9 ತಾಲೂಕಿನ ಮಹಿಳೆಯರು, ಮಕ್ಕಳು ಹಾಗೂ ಆರ್ಥಿಕವಾಗಿ ಹಿಂದುಳಿದ ವರ್ಗದ ಗ್ರಾಮೀಣ ಜನತೆಯನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ವತಿ ಯಿಂದ ದಸರಾ ದರ್ಶನ ಕಾರ್ಯಕ್ರಮದಡಿ ಕರೆತಂದು ದಸರಾವನ್ನು ದರ್ಶನ ಮಾಡಿಸಲಾಗುವುದು ಎಂದು ದಸರಾ ದರ್ಶನ ಸಮಿತಿ ಹಾಗೂ ಮೈಸೂರು ವಿಭಾಗದ ಕ.ರಾ.ರ.ಸಾ. ನಿಗಮದ ವಿಭಾಗೀಯ ನಿಯಂತ್ರಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ದಸರಾ ದರ್ಶನ ಕಾರ್ಯಕ್ರಮಕ್ಕಾಗಿ 9 ತಾಲೂಕುಗಳಿಂದ ಸೆ.28ರಿಂದ ಸೆ.30ರವರೆಗೆ 3 ದಿನಗಳ ಕಾಲ ನಿಗಮದ 81 ವಾಹನಗಳಲ್ಲಿ ಸುಮಾರು 4455 ಜನತೆಯನ್ನು ಕರೆತಂದು ಅರಮನೆ ಮೃಗಾಲಯ, ಜೆ.ಕೆ.ಗ್ರೌಂಡ್‌ನಲ್ಲಿ ನಡೆಯುವ ಮಹಿಳಾ ಮತ್ತು ಮಕ್ಕಳ ದಸರಾ ವೀಕ್ಷಿಸಲು ಮತ್ತು ಚಾಮುಂಡಿಬೆಟ್ಟದಲ್ಲಿ ಶ್ರೀ ಚಾಮುಂಡೇಶ್ವರಿ ದೇವಿಯ ದರ್ಶನವನ್ನು ಪಡೆಯಲು ಅವಕಾಶ ಕಲ್ಪಿಸಲಾಗುವುದು. ದಸರಾ ಆಕರ್ಷಣೆ ಯಾದ ದೀಪಾಲಂಕಾರವನ್ನು ತೋರಿಸಿ ಪುನಃ ಮರಳಿ ಅವರವರ ತಾಲೂಕುಗಳಿಗೆ ಮರಳಿ ಬಿಡಲಾಗುವುದು. ದಸರಾ ದರ್ಶನ ಕಾರ್ಯಕ್ರಮದ ಉದ್ಘಾಟನೆಯನ್ನು ಸೆ.28ರಂದು ಬೆಳಗ್ಗೆ 9.30 ಗಂಟೆಗೆ ಮೈಸೂರಿನ ಅರಮನೆ ಮುಂಭಾಗದ ಕೋಟೆ ಆಂಜನೇಯ ಸ್ವಾಮಿ ಎದುರು ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವ ಶ್ರೀರಾಮುಲು ಉದ್ಘಾಟಿಸಲಿದ್ದು, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಿವೃತ್ತ ಎಸಿಪಿ ಮೋಹನ್‌ಗೆ ಮಾತೃ ವಿಯೋಗ



ಮೈಸೂರು, ಸೆ.25– ನಿವೃತ್ತ ಎಸಿಪಿ ಜಿ.ಎನ್. ಮೋಹನ್ ಅವರ ತಾಯಿ ಪುಟ್ಟತಾಯಮ್ಮ(90) ಮಂಡ್ಯ ಜಿಲ್ಲೆಯ ಸ್ವಗ್ರಾಮ ಗೆಜ್ಜಲಗೆರೆ ನಿವಾಸದಲ್ಲಿ ಭಾನುವಾರ ಅನಾರೋಗ್ಯ ನಿಧನರಾದರು. ಮೃತರು ಜಿ.ಎನ್. ಮೋಹನ್ ಸೇರಿದಂತೆ ಮೂವರು ಪುತ್ರರು, ನಾಲ್ವರು ಪುತ್ರಿಯರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸೋಮವಾರ ಮಧ್ಯಾಹ್ನ 12 ಗಂಟೆಗೆ ಸ್ವಗ್ರಾಮದಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.


ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

26.09.2022 ಸೋಮವಾರ, ಮಳೆ ನಕ್ಷತ್ರ: ಉತ್ತರ 14.09.2022 ರಿಂದ 26.09.2022
ಶ್ರೀ ಶುಭಕೃತು ನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಆಶ್ವಯುಜ ಮಾಸ, ಶುಕ್ಲ ಪಕ್ಷ,
ತಿಥಿ: ಪಾಡ್ಯ, ನಕ್ಷತ್ರ : ಉತ್ತರಾ, ರಾಹುಕಾಲ: ಬೆಳಗ್ಗೆ 7.30 ರಿಂದ 9ರವರೆಗೆ

ಇಂದಿನ ದಸರಾ ಕಾರ್ಯಕ್ರಮ



■ **ಚಾಮುಂಡಿಬೆಟ್ಟ:** 2022ರ ದಸರಾ ಮಹೋತ್ಸವ ಉದ್ಘಾಟನೆ, ಉದ್ಘಾಟನೆ: ರಾಷ್ಟ್ರಪತಿ ಶ್ರೀಮತಿ ದ್ರೌಪದಿ ಮುರ್ಮು, ಉಪಸ್ಥಿತಿ: ರಾಜ್ಯ ಪಾಲರಾದ ಥಾವರ್‌ಚಂದ್ ಗೆಹ್ಲೋಟ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ವಿತ್ತ ಸಚಿವೆ ಶ್ರೀಮತಿ ನಿರ್ಮಲಾ ಸೀತಾರಾಮನ್, ಕೇಂದ್ರ ಸಂಸದೀಯ ವ್ಯವಹಾರಗಳು, ಕಲ್ಲಿದ್ದಲು ಮತ್ತು ಗಣಿ ಸಚಿವ ಪ್ರಲ್ಹಾದ್ ಜೋಶಿ, ಕೌಶಲ್ಯಾಭಿವೃದ್ಧಿ ಮತ್ತು ವಾಣಿಜ್ಯೋದ್ಯಮ, ಎಲೆಕ್ಟ್ರಾನಿಕ್ ಮತ್ತು ತಂತ್ರಜ್ಞಾನ ಖಾತೆ ರಾಜ್ಯ ಸಚಿವ ರಾಜೀವ್ ಚಂದ್ರಶೇಖರ್, ಕೇಂದ್ರ ಕೃಷಿ ಹಾಗೂ ರೈತ ಕಲ್ಯಾಣ ಖಾತೆ ರಾಜ್ಯ ಸಚಿವೆ ಕು. ಶೋಭಾ ಕರಂದ್ಲಾಜೆ, ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಖಾತೆ ರಾಜ್ಯ ಸಚಿವ ಎ. ನಾರಾಯಣಸ್ವಾಮಿ, ಕೇಂದ್ರ ರಾಸಾಯನಿಕ, ರಸಗೊಬ್ಬರ ಸಚಿವ ಭಗವಂತ ಖೂಬಾ, ಮುಖ್ಯ ಅತಿಥಿಗಳು: ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್, ಇಂಧನ ಸಚಿವ ವಿ. ಸುನೀಲ್‌ಕುಮಾರ್, ಮುಜರಾಯಿ ಸಚಿವೆ ಶ್ರೀಮತಿ ಜೊಲ್ಲೆ ಶಶಿಕಲಾ ಅಣ್ಣಾಸಾಹೇಬ್, ಪ್ರವಾಸೋದ್ಯಮ ಸಚಿವ ಆನಂದ್ ಸಿಂಗ್, ಮೇಯರ್ ಶಿವಕುಮಾರ್, ಅಧ್ಯಕ್ಷತೆ: ಶಾಸಕ ಜಿ.ಟಿ. ದೇವೇಗೌಡ, ಸ್ಥಳ: ಚಾಮುಂಡಿಬೆಟ್ಟ, ಬೆಳಗ್ಗೆ 9.45 ರಿಂದ 10.05 ರೊಳಗೆ ಶುಭ ವೃಶ್ಚಿಕ ಲಗ್ನದಲ್ಲಿ.

■ **ವಿಚಾರ ಸಂಕಿರಣ:** ಕೈಗಾರಿಕಾ ವಿಚಾರ ಸಂಕಿರಣ, ಉದ್ಘಾಟನೆ: ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಮುರುಗೇಶ್ ಆರ್. ನಿರಾಣಿ, ಸ್ಥಳ: ವಿಜ್ಞಾನ ಭವನ, ಮೈಸೂರು, ಬೆಳಗ್ಗೆ 12 ಗಂಟೆಗೆ.

■ **ದಸರಾ ಚಲನಚಿತ್ರೋತ್ಸವ:** ದಸರಾ ಚಲನಚಿತ್ರೋತ್ಸವ–2022, ಉದ್ಘಾಟನೆ: ಹ್ಯಾಟ್ರಿಕ್ ಹೀರೋ ಡಾ. ಶಿವರಾಜ್‌ಕುಮಾರ್, ಸ್ಥಳ: ಕರ್ನಾಟಕ ಕಲಾಮಂದಿರ, ಮಧ್ಯಾಹ್ನ 12.30 ಗಂಟೆಗೆ.

■ **ಫಲಪುಷ್ಪ ಪ್ರದರ್ಶನ:** ದಸರಾ ಫಲಪುಷ್ಪ ಪ್ರದರ್ಶನ, ತೋಟಗಾರಿಕೆ ಸಚಿವ ಮುನಿರತ್ನ, ಸ್ಥಳ: ಕುಪ್ಪಣ್ಣ ಪಾರ್ಕ್, ನಜರ್‌ಬಾದ್, ಮಧ್ಯಾಹ್ನ 12.30ಕ್ಕೆ.

■ **ಆಹಾರ ಮೇಳ:** ದಸರಾ ಆಹಾರ ಮೇಳ, ಉದ್ಘಾಟನೆ: ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್, ಸ್ಥಳ: ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಮೈದಾನ, ಮಧ್ಯಾಹ್ನ 1 ಗಂಟೆಗೆ.

■ **ದಸರಾ ಕುಸ್ತಿ ಪಂದ್ಯಾವಳಿ:** ಉದ್ಘಾಟನೆ: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸ್ಥಳ: ಶ್ರೀ ದೇವರಾಜ ಅರಸು ವಿವಿಧೋದ್ದೇಶ ಕ್ರೀಡಾಂಗಣ, ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರ, ಮಧ್ಯಾಹ್ನ 3.30ಕ್ಕೆ.

■ **ವಸ್ತುಪ್ರದರ್ಶನ:** ದಸರಾ ವಸ್ತುಪ್ರದರ್ಶನ, ಉದ್ಘಾಟನೆ: ಪ್ರವಾಸೋದ್ಯಮ ಸಚಿವ ಆನಂದ್ ಸಿಂಗ್, ಸ್ಥಳ: ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರ ಆವರಣ, ಸಂಜೆ 4 ಗಂಟೆಗೆ.

■ **ಯೋಗ ದಸರಾ ನೃತ್ಯರೂಪಕ:** ಉದ್ಘಾಟನೆ: ಸಹಕಾರ ಸಚಿವ ಎಸ್.ಟಿ. ಸೋಮಶೇಖರ್, ಸ್ಥಳ: ಓವಲ್ ಮೈದಾನ, ಸಂಜೆ 5 ಗಂಟೆಗೆ.

■ **ಫಲಪುಷ್ಪ ಪ್ರದರ್ಶನ:** ಭಾರತ ಸ್ವಾತಂತ್ರ್ಯ ಅಮೃತ ಮಹೋತ್ಸವದ ಫಲಪುಷ್ಪ ಪ್ರದರ್ಶನ, ಸ್ಥಳ: ಅರಮನೆ ಆವರಣ, ಉದ್ಘಾಟನೆ: ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್, ಸಂಜೆ 5.30ಕ್ಕೆ.

■ **ಶಿಲ್ಪ ಚಿತ್ರಕಲೆ ಪ್ರದರ್ಶನ:** ರಾಜ್ಯ ಮಟ್ಟದ ಶಿಲ್ಪ ಚಿತ್ರಕಲೆ ಪ್ರದರ್ಶನ, ಸ್ಥಳ: ಕರ್ನಾಟಕ ಕಲಾಮಂದಿರ, ಉದ್ಘಾಟನೆ: ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ. ಸುನೀಲ್‌ಕುಮಾರ್, ಸಂಜೆ 5.30 ಗಂಟೆಗೆ.

■ **ಅರಮನೆ ಆವರಣ:** ದಸರಾ ಸಾಂಸ್ಕೃತಿಕ ಕಾರ್ಯಕ್ರಮಗಳ ಉದ್ಘಾಟನೆ ಮತ್ತು ರಾಜ್ಯ ಸಂಗೀತ ವಿದ್ವಾನ್ ಪ್ರಶಸ್ತಿ ಪ್ರದಾನ ಸಮಾರಂಭ, ಉದ್ಘಾಟನೆ: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಮುಖ್ಯ ಅತಿಥಿಗಳು: ವಿಧಾನಸಭಾ ಸಭಾಧ್ಯಕ್ಷ ವಿಶ್ವೇಶ್ವರ ಹೆಗ್ಡೆ ಕಾಗೇರಿ, ವಿಧಾನಪರಿಷತ್ ಸಭಾಪತಿ ರಘುನಾಥರಾವ್ ಮಲ್ಕಾಪುರೆ, ಮೈಸೂರು ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್, ಇಂಧನ ಸಚಿವ ವಿ. ಸುನೀಲ್‌ಕುಮಾರ್, ಮೇಯರ್ ಶಿವಕುಮಾರ್, ಅಧ್ಯಕ್ಷತೆ: ಶಾಸಕ ಎಸ್.ಎ. ರಾಮದಾಸ್, ಸ್ಥಳ: ಅರಮನೆ ಆವರಣ, ಸಂಜೆ 6 ಗಂಟೆಗೆ.

■ **ದೀಪಾಲಂಕಾರ:** ದಸರಾ ವಿದ್ಯುತ್ ದೀಪಾಲಂಕಾರ, ಉದ್ಘಾಟನೆ: ಇಂಧನ ಸಚಿವ ವಿ. ಸುನೀಲ್‌ಕುಮಾರ್, ಸ್ಥಳ: ಹಸಿರು ಮಂಟಪ, ನ್ಯೂ ಸಯ್ಯಾಜಿರಾವ್ ರಸ್ತೆ, ಸಂಜೆ 6.30ಕ್ಕೆ.

ಸಾಂಸ್ಕೃತಿಕ ಕಾರ್ಯಕ್ರಮ (ಅರಮನೆ ಆವರಣ): ನಾದಸ್ವರ: ಯದುನಾಥ್ ಮತ್ತು ಗುರುರಾಜ್ ತಂಡದಿಂದ, ವೀರಭದ್ರ ಕುಣಿತ. ಕಿರಾಳು ಮಹೇಶ, ನೃತ್ಯರೂಪಕ ಅಮೃತ ಭಾರತಿಗೆ ಕನ್ನಡದಾರತಿ: ಬೆಂಗಳೂರಿನ ಸಪ್ತಸ್ವರ ಆರ್ಟ್ಸ್ ಅಂಡ್ ಕ್ರಿಯೇಷನ್ಸ್, ಸುಗಮ ಸಂಗೀತ: ಮೈಸೂರಿನ ಹೆಚ್.ಆರ್. ಲೀಲಾವತಿ ಅವರಿಂದ.

■ **ಆರ್ಟ್ ಆಫ್ ಲಿವಿಂಗ್:** ಜೀವನ ಕಲೆ ಆನಂದ ಅನುಭೂತಿ ಶಿಬಿರ, ಸ್ಥಳ: ಆರ್ಟ್ ಆಫ್ ಲಿವಿಂಗ್, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 6ರಿಂದ.

■ **ರಾಮ್‌ಸನ್ಸ್ ಕಲಾ ಪ್ರತಿಷ್ಠಾನ:** ಬೊಂಬೆ ಮನೆ, ದಸರೆಯ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10 ರಿಂದ.

■ **ದಿ ಇನ್‌ಸ್ಟಿಟ್ಯೂಟ್ ಆಫ್ ಎಜುಕೇಷನ್ ಟ್ರಸ್ಟ್: ಬಾಸುದೇವ ಸೋಮಾನಿ ಕಾಲೇಜು, ರಾಷ್ಟ್ರೀಯ ಸೇವಾ ಯೋಜನೆ:** ಎನ್‌ಎಸ್‌ಎಸ್ ಸಂಸ್ಥಾಪನಾ ದಿನಾಚರಣೆ ಪ್ರಯುಕ್ತ ವಿಶೇಷ ಉಪನ್ಯಾಸ ಕಾರ್ಯಕ್ರಮ, ವಿಷಯ: ಎನ್‌ಎಸ್‌ಎಸ್ ಮತ್ತು ಯುವ ಜನಾಂಗ, ಸ್ಥಳ: ಕಾಲೇಜು ಸಭಾಂಗಣ, ಬೆಳಗ್ಗೆ 10.45ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ–ಕೊಳ್ಳೆಗಾಲ ಶರ್ಮ, 6.20 ದಸರಾ ವಿಶೇಷ ಗೀತಾರಾಧನ, 6.35 ಹಾಗೂ ಸಂಜೆ 5ಕ್ಕೆ: ಶತಮಾನದ ಸ್ಮರಣೆಗಳು: ಮಂಡ್ಯ ಜಿಲ್ಲೆಯ ಶತಮಾನದ ನೆನಪುಗಳು: ಲೇಖನ ಪ್ರಸ್ತುತಿ– ಡಿ.ಎನ್. ಶ್ರೀಪಾದ್, 6.40 ದಸರಾ ಸಂದರ್ಭದಲ್ಲಿ ವಿಶೇಷ ಸರಣಿ 'ರಾಜ ಮಾರ್ಗ' ಮೈಸೂರಿನ ಐತಿಹಾಸಿಕ ರಸ್ತೆಗಳ ಪರಿಚಯ: ಪ್ರಸ್ತುತಿ– ಡಾ.ಮೈಸೂರು ಉಮೇಶ್, 6.50 ರೈತರಿಗೆ ಸಲಹೆ, 9.10 ಹರಿಕೇಶಾಂಗಿ ಮಾತಂಗಿ: ನವರಾತ್ರಿ ದಸರಾ ಸಂದರ್ಭದಲ್ಲಿ ರಾಜ್ಯವ್ಯಾಪಿ ವಿಶೇಷ ಸಂಗೀತ ಸರಣಿ, ಪ್ರಸ್ತುತಿ– ಮೈಸೂರು ಎಸ್.ರಾಜಲಕ್ಷ್ಮಿ, 9.30 ಭಾರತದ ಗೌರವಾನ್ವಿತ ರಾಷ್ಟ್ರಪತಿಗಳಾದ ಶ್ರೀಮತಿ ದ್ರೌಪದಿ ಮುರ್ಮು ಅವರು ಉದ್ಘಾಟಿಸಲಿರುವ ದಸರಾ ಉದ್ಘಾಟನಾ ಸಮಾರಂಭದ ನೇರ ಪ್ರಸಾರ, ವೀಕ್ಷಕ ವಿವರಣೆ ನೀಡುವವರು– ಕನ್ನಡದಲ್ಲಿ–ದಿವಾಕರ ಹೆಗಡೆ, ಡಾ.ಮೈಸೂರು ಉಮೇಶ್ (ರಾಜ್ಯವ್ಯಾಪಿ ಪ್ರಸಾರದಲ್ಲಿ) ಹಿಂದಿ ಹಾಗೂ ಇಂಗ್ಲೀಷ್‌ನಲ್ಲಿ ಶ್ರೀ ಎ. ಸುಬ್ರಹ್ಮಣಿಯನ್ (ರಾಷ್ಟ್ರವ್ಯಾಪಿ ಪ್ರಸಾರದಲ್ಲಿ), 11.00 'ಶ್ರೀ ಕಮಲಾಂಬ ಜಯತಿ' ನವರಾತ್ರಿ ಸಂದರ್ಭದಲ್ಲಿ ಶ್ರೀ ಮುತ್ತುಸ್ವಾಮಿ ದೀಕ್ಷಿತರ ನವಾವರಣ ಕೃತಿಗಳನ್ನಾಧರಿಸಿದ ವಿಶೇಷ ಸಂಗೀತ ಸರಣಿ 4ನೇ ಕಾರ್ಯಕ್ರಮ, ಪರಿಕಲ್ಪನೆ– ಪ್ರೊ. ರಾ. ವಿಶ್ವೇಶ್ವರನ್, ಪ್ರಸ್ತುತಿ– ಜಿ. ರಾಜಲಕ್ಷ್ಮಿ, ನಂತರ ನಿಮ್ಮೊಂದಿಗೆ ಮೈಸೂರು ಆಕಾಶವಾಣಿ. **ಮಧ್ಯಾಹ್ನ:** 12.30 ಭಕ್ತಿಗೀತೆಗಳು: ಎಂ.ವೆಂಕಟೇಶ್ ಕುಮಾರ್, ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ, 12.45 ನಮ್ಮ ಆರೋಗ್ಯ ಕಾರ್ಯಕ್ರಮ: "ಹಿರಿಯರಲ್ಲಿ ಕಂಡುಬರುವ ಡಿಮೆನ್ಷಿಯಾ ಮತ್ತು ಇತರೆ ನರ ಸಂಬಂಧಿ ಸಮಸ್ಯೆಗಳಿಗೆ ಕಾರಣಗಳು, ಚಿಕಿತ್ಸೆ ಮತ್ತು ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆ" ಕುರಿತು ಡಾ.ಬಿ.ಎಸ್. ಕೇಶವ ಅವರೊಂದಿಗೆ ಮಾತುಕತೆ, 1.20 'ಜಂಬೂ ಸವಾರಿ' ಮೈಸೂರು ದಸರಾ ಆನೆ ಸ್ಟೋರಿ, ದಸರಾ ಸಂದರ್ಭದಲ್ಲಿ ವಿಶೇಷ ಬಾನುಲಿ ಸರಣಿ ಪ್ರಸ್ತುತಿ–ಅಬ್ದುಲ್ ರಶೀದ್ ಹಾಗೂ ಡಾ. ಮೈಸೂರು ಉಮೇಶ್, 3.00 ಜಿ. ಗುರುಪ್ರಸಾದ್: ಸ್ಯಾಕ್ಸೋಫೋನ್ ವಾದನ. **ಸಂಜೆ:** 4.00 ಮಹಿಳಾರಂಗ ಮೈಸೂರಿನ ಗೆಳತಿ ಮಹಿಳಾ ಸಮಾಜದ ಸದಸ್ಯೆಯರಿಂದ ಕಾರ್ಯಕ್ರಮ ವೈವಿಧ್ಯ, 4.30 ಝೇಂಕಾರ: ಮಕ್ಕಳ ಗೀತ ಗಾಯನ ಕಲಿಕಾ ಕಾರ್ಯಕ್ರಮ, ಕವಿ– ದಿವಾಕರ ಹೆಗಡೆ, ಸಂಗೀತ– ನಿತಿನ್ ರಾಜಾರಾಂ ಶಾಸ್ತ್ರಿ, ಚಾಮರಾಜ ನಗರ ನಾದಾಮೃತ ಸಂಗೀತ ವಿದ್ಯಾಲಯದ ಮಕ್ಕಳು, 5.30 ಚಾಮುಂಡಿಹಬ್ಬ: ಜನಪದ ನಾಲಗೆಯಲ್ಲಿ ಮೈಸೂರ ದೇವತೆ, ಲೇಖನ ಡಾ.ಪಿ.ಕೆ.ರಾಜಶೇಖರ್, ಪ್ರಸ್ತುತಿ– ಡಾ.ಮೈಸೂರು ಉಮೇಶ್, 6.50 ಕೃಷಿರಂಗ: "ತೋಟಗಾರಿಕೆ ಬೆಳೆಗಳಲ್ಲಿ ನೈಸರ್ಗಿಕ ಕೃಷಿ ಅನುಭವ" ಈ ವಿಚಾರವಾಗಿ ವರದರಾಜು ಅವರೊಡನೆ ಸಂದರ್ಶನ. **ರಾತ್ರಿ:** 9.30 ಭಾರತದ ಗೌರವಾನ್ವಿತ ರಾಷ್ಟ್ರಪತಿಗಳಾದ ಶ್ರೀಮತಿ ದ್ರೌಪದಿ ಮುರ್ಮು ಅವರು ಉದ್ಘಾಟಿಸಿದ 1) ಮೈಸೂರು ದಸರಾ ಮಹೋತ್ಸವದ ಬಾನುಲಿ ವರದಿ, 2) ಧಾರವಾಡದ I.I.I.T ಉದ್ಘಾಟನಾ ಸಮಾರಂಭದ ಬಾನುಲಿ ವರದಿ, 10.30 ಸವಿನೆನಪು.

■ **ಜಿಲ್ಲಾ ಕೈಗಾರಿಕಾ ಕೇಂದ್ರ,ಕರ್ನಾಟಕ ಕರಕುಶಲಕರ್ಮಿಗಳ ಕ್ಷೇಮಾಭಿವೃದ್ಧಿ ಸಂಘ:** ದಸರಾ ಕರಕುಶಲ ಮೇಳ ಉದ್ಘಾಟನೆ, ಉದ್ಘಾಟನೆ: ಶಾಸಕ ಎಲ್. ನಾಗೇಂದ್ರ, ಸ್ಥಳ: ಚಾಮರಾಜ ತಾಂತ್ರಿಕ ವಿದ್ಯಾಲಯ (ಸಿಟಿಐ ಕಟ್ಟಡ), ಸಯ್ಯಾಜಿರಾವ್ ರಸ್ತೆ, ಸಂಜೆ 4 ಗಂಟೆಗೆ.

ಶರನ್ನವರಾತ್ರಿ ಕಾರ್ಯಕ್ರಮ

■ **ಶ್ರೀ ಚಂದ್ರಮೌಳೀಶ್ವರ ಸ್ವಾಮಿ ದೇವಸ್ಥಾನಂ ಚಾರಿಟಬಲ್ ಟ್ರಸ್ಟ್:** ಸ್ವಸ್ತಿ ವಾಚನ, ಯಾಗ ಶಾಲಾ ಪ್ರವೇಶ, ಗಣಪತಿ ಪೂಜೆ, ದೇವತಾ ನಂದಿ, ಕಲಶ ಸ್ಥಾಪನೆ, ಸ್ಥಳ: ಶ್ರೀ ಚಂದ್ರಮೌಳೀಶ್ವರ ಸ್ವಾಮಿ ದೇವಸ್ಥಾನಂ, ವಾಣಿವಿಲಾಸ ಮೊಹಲ್ಲಾ, ಬೆಳಗ್ಗೆ 8 ಗಂಟೆಗೆ.

■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ:** ಶ್ರೀ ದೇವಿ ನವರಾತ್ರಿ ಉತ್ಸವಗಳು, ಸಾನ್ನಿಧ್ಯ: ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಮತ್ತು ಶ್ರೀ ದತ್ತ ವಿಜಯಾನಂದತೀರ್ಥ ಸ್ವಾಮೀಜಿ, ಮಂಗಳವಾದ್ಯ, ಸುಪ್ರಭಾತ, ಪ್ರಾರ್ಥನೆ, ಗಣಪತಿ ಹೋಮ, ಶ್ರೀದೇವಿ ಪಲ್ಲಕ್ಕಿ ಉತ್ಸವ, ಕುಮಾರಿ ಪೂಜೆ, ಶ್ರೀ ಚಕ್ರಪೂಜೆ, ಶ್ರೀದೇವಿ ಪಲ್ಲಕ್ಕಿ ಉತ್ಸವ, ಕುಮಾರಿ ಪೂಜೆ, ಶ್ರೀ ಚಕ್ರಪೂಜೆ, ನವಾರಣಪೂಜೆ, ಅನ್ನಾರ್ಚನೆ, ದೇವಿ ಪೂಜೆ, ಹೋಮ, ಪೂರ್ಣಾಹುತಿ, ಮಹಾಮಂಗಳಾರತಿ, ಡೋಲೋತ್ಸವ, ಸುವಾಸಿನಿ ಪೂಜೆ, ಶ್ರೀ ಸ್ವಾಮೀಜಿ ಅವರಿಂದ ದೇವಿ ಭಜನೆ, ಪ್ರವಚನ, ಸ್ಥಳ: ನಾದಮಂಟಪ, ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ, ಬೆಳಗ್ಗೆ 8 ಗಂಟೆಯಿಂದ.

■ **ಗೊಂಬೆಗಳ ಪ್ರದರ್ಶಣ:** ರಾಘವೇಂದ್ರ ಕೆ.ಎಸ್., ಅವರು ಕೈಯಿಂದ ಮಾಡಿರುವ 170 ಬೊಂಬೆಗಳ ಪ್ರದರ್ಶನ, ಉಪಸ್ಥಿತಿ: ವಾಗ್ಮಿ, ಗಾಯಕಿ ಶ್ರೀಮತಿ ದೀಪಿಕಾ ಪಾಂಡುರಂಗಿ, ಸೈಕಲ್ ಅಗರ್‌ಬತ್ತಿ ಪರಿಮಳ ವಿಭಾಗದ ಮುಖ್ಯಸ್ಥೆ ಶ್ರೀಮತಿ ಜಾಹ್ನವಿ ಮೂರ್ತಿ, ಸ್ಥಳ: ಇಂಚರ ಕಲಾಕ್ಷೇತ್ರ, ವಿಜಯನಗರ, ಬೆಳಗ್ಗೆ 10 ಗಂಟೆಯಿಂದ.

■ **ಸ್ವರ್ಣ ನೃಸಿಂಹ ದತ್ತ ಸಾಯಿ ಪೀಠಿಕ ಸೇವಾ ಟ್ರಸ್ಟ್:** ಶರನ್ನವರಾತ್ರಿ ಪೂಜಾ ಮಹೋತ್ಸವ, ಸಾನಿಧ್ಯ: ಶ್ರೀ ವೆಂಕಟಚಲ ಅವಧೂತ ಗುರು ಮಹಾರಾಜರು, ಉಪಸ್ಥಿತಿ: ಶ್ರೀ ಅರ್ಜುನ ಅವಧೂತ ಗುರು ಮಹಾರಾಜರು, ಶ್ರೀ ಮಹಾಗಣಪತಿ ಹೋಮ, ಶ್ರೀ ರುದ್ರ ಹೋಮ, ಸ್ಥಳ: ಶ್ರೀರಾಮ ಮಂದಿರ, ಜಯನಗರ, ಬೆಳಗ್ಗೆ 10 ಗಂಟೆಯಿಂದ.

■ **ತ್ರಯೀನ್ಯಾಸ್:** 26ನೇ ವರ್ಷದ ಶರನ್ನವರಾತ್ರಿ ಮಹೋತ್ಸವ, ಶ್ರೀ ಮಹಾಗಣಪತಿ ಪೂಜಾ, ಪುಣ್ಯಾಃ ವಾಚನ, ಮಹಾಸಂಕಲ್ಪ, ಅಂಕುರಾರ್ಪಣೆ, ನಾಂಧಿ ಕಲಶ ಸ್ಥಾಪನೆ, ಮಹಾಭಿಷೇಕ, ಶ್ರೀ ಶೈಲ ಪುತ್ರಿ, ಶ್ರೀ ವಿದ್ಯಾ ನವದುರ್ಗಾ ಪೂಜೆ, ಬೆಳಗ್ಗೆ 8.30ಕ್ಕೆ, ಶ್ರೀ ಮಹಾ ಮೃತ್ಯುಂಜಯ ಹೋಮ, ಸಂಜೆ 5.30ಕ್ಕೆ, ಸ್ಥಳ: ತ್ರಯೀನ್ಯಾಸ್, ಜಯಲಕ್ಷ್ಮೀಪುರಂ.

■ **ಶ್ರೀ ಶಾರದ ಪ್ರತಿಷ್ಠಾನ ಟ್ರಸ್ಟ್:** ಶರನ್ನವರಾತ್ರಿ ಸಂಗೀತೋತ್ಸವ: 2022–23, ವಿದ್ವಾನ್ ಮೈಸೂರು ಹರೀಶ್ ಪಾಂಡವ್ ಮತ್ತು ತಂಡದವರಿಂದ ಸ್ಯಾಕ್ಸೋಫೋನ್ ವಾದನ, ಸ್ಥಳ: ಶ್ರೀ ರಾಮ ಮಂದಿರ, ಸಂಜೆ 6 ಗಂಟೆಗೆ.

■ **ಜೆ.ಪಿ.ನಗರ ಬ್ರಾಹ್ಮಣ ಸಂಘ:** ಶರನ್ನವರಾತ್ರಿ, ಸಾಂಸ್ಕೃತಿಕ ಕಾರ್ಯಕ್ರಮ, ದೇವರನಾಮ: ಸಂಗೀತ ವಿದುಷಿ ಶ್ರೀಮತಿ ರಶ್ಮಿ ರಘುರಾಂ ಅವರಿಂದ, ಸ್ಥಳ: ಜೆ.ಪಿ.ನಗರ, ಎಫ್ ಬ್ಲಾಕ್, ಸಂಜೆ 6 ಗಂಟೆಯಿಂದ.

■ **ಶ್ರೀ ಮುಕ್ಕಣ್ಣೇಶ್ವರ ಸ್ವಾಮಿ ದೇವಸ್ಥಾನ:** ನವರಾತ್ರಿ ವೈಭವ, ಶ್ರೀ ರವಿಕಾಂತಾನಂದ ಸ್ವಾಮಿ ಅವರಿಂದ ಕಳಸ ಸ್ಥಾಪನೆ, ಬ್ರಾಹ್ಮೀ ಹಂಸವಾಹಿನೀ ಅಲಂಕಾರ, ಸ್ಥಳ: ದೇವಸ್ಥಾನದ ಆವರಣ, ಅಶೋಕ ರಸ್ತೆ, ಸಂಜೆ 6 ಗಂಟೆಯಿಂದ.

■ **ರಂಗಾಯಣ:** ರಾಜಋಷಿ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ನೆನಪಿನ ರಂಗೋತ್ಸವ–2022, ಸಮರ ಕಥಾ, ರಚನೆ, ನಿರ್ದೇಶನ: ನಂದಕುಮಾರ್ ಜಿ.ಕೆ., ಸ್ಥಳ: ಭೂಮಿಗೀತ, ಸಂಜೆ 6.30ಕ್ಕೆ.

■ **ಶ್ರೀ ಕಾಲ ಭೈರವೇಶ್ವರ ಸ್ವಾಮಿ ದೇವಸ್ಥಾನ:** ಶ್ರೀ ಪಾರ್ವತಿ ಅಮ್ಮನವರಿಗೆ ನವರಾತ್ರಿ ಪ್ರಯುಕ್ತ ವಿಶೇಷ ಅಲಂಕಾರ ಪೂಜಾ ಮಹೋತ್ಸವ, ರಜತ ಕವಚ ಅಲಂಕಾರ (ಅರಿಶಿಣ, ಕುಂಕುಮ), ಸಂಜೆ 7 ಗಂಟೆಗೆ.

ನಾಳೆಯಿಂದ ಮಹಿಳಾ ದಸರಾ

ಮೈಸೂರು, ಸೆ.25– ಮೈಸೂರು ದಸರಾ ಮಹೋತ್ಸವ, ಮಹಿಳಾ ಮತ್ತು ಮಕ್ಕಳ ದಸರಾ–2022 ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವತಿಯಿಂದ 2022ನೇ ಸಾಲಿನ ದಸರಾ ಮಹೋತ್ಸವದ ಅಂಗವಾಗಿ ಸೆ.27ರಿಂದ ಅ.1ರವರೆಗೆ ಮಹಿಳೆಯರಿಗಾಗಿ ಮಹಿಳಾ ದಸರಾ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಮಹಿಳಾ ದಸರಾ ಅಂಗವಾಗಿ ರಂಗೋಲಿ ಸ್ಪರ್ಧೆ ಏರ್ಪಡಿಸಲಾಗಿದ್ದು, ಸ್ಪರ್ಧೆಯಲ್ಲಿ ಭಾಗ ವಹಿಸಲು ಇಚ್ಛಿಸುವವರು ಸೆ.27ರಂದು ಬೆಳಗ್ಗೆ 7.30 ರಿಂದ 9.30 ಗಂಟೆಯವರೆಗೆ ಅಂಬಾ ವಿಲಾಸ ಅರಮನೆ ಮುಂಭಾಗ ರಂಗೋಲಿ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ. ಸ್ಪರ್ಧೆಯಲ್ಲಿ ಭಾಗವಹಿಸಲು ಇಚ್ಛಿಸುವವರು ಮಾಹಿತಿಗಾಗಿ ಮೊ. ಸಂಖ್ಯೆ (ಶಾಂತ–9380425 522), ಸೆ. 28ರಂದು 12ರಿಂದ 1 ಗಂಟೆವರೆಗೆ ಜೆ.ಕೆ.ಮೈದಾನದಲ್ಲಿ ವೇಷ ಭೂಷಣ ಸ್ಪರ್ಧೆ ಏರ್ಪಡಿಸಲಾಗಿದೆ ಮೊ. ಸಂಖ್ಯೆ: (ಮಂಜುಳ –9590027794).

ಸೆ.28ರಂದು 1 ರಿಂದ 2 ಗಂಟೆಯವರೆಗೆ ಜೆ.ಕೆ. ಮೈದಾನದಲ್ಲಿ ಓಲೆರಹಿತ ಅಡುಗೆ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ ದೂರವಾಣಿ ಸಂಖ್ಯೆ: (ಸರೋಜ ಮೇಲ್ವಿಚಾರಕರು–9880239482). ಸೆ.29ರಂದು ಮಧ್ಯಾಹ್ನ 2:30ರಿಂದ 3.30ರವರೆಗೆ ಜೆ.ಕೆ. ಮೈದಾನದಲ್ಲಿ ಕೇಶ ವಿನ್ಯಾಸ ಸ್ಪರ್ಧೆಯನ್ನು ಹಮ್ಮಿಕೊಳ್ಳಲಾಗಿದೆ. ಮೊ.ಸಂಖ್ಯೆ(ವಿದ್ಯಾ ಓಂಕಾರ ಗೌಡ ಹಿರಿಯ ಮೇಲ್ವಿಚಾರಕಿ–8073227321). ಸೆ.30ರಂದು ಸಂಜೆ 4ರಿಂದ 5 ಗಂಟೆವರೆಗೆ ಜೆ.ಕೆ.ಮೈದಾನದಲ್ಲಿ ವೆಜಿಟೇಬಲ್ ಕಾರ್ವಿಂಗ್ ಸ್ಪರ್ಧೆಯನ್ನು ಹಮ್ಮಿಕೊಳ್ಳಲಾಗಿದೆ. ಮೊ. ಸಂಖ್ಯೆ (ಸಹನ ಮೇಲ್ವಿಚಾರಕಿ–97415 331950) ಅನ್ನು ಸಂಪರ್ಕಿಸಿ ಎಂದು ಮಹಿಳಾ ಮತ್ತು ಮಕ್ಕಳ ದಸರಾ–2022 ಹಾಗೂ ಉಪ ಸಮಿತಿ ಹಾಗೂ ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಕಾರ್ಯಾಧ್ಯಕ್ಷರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಕ್ಕರೆ ಅದೇ ಸ್ವರ್ಗ

ಪತಿ : ಹಬ್ಬಕ್ಕೆ ಸೀರೆ ಬೇಕೋ ಅಥವಾ ಚೂಡಿದಾರ್ ಬೇಕೋ...

ಪತ್ನಿ : ನಿಮಗೆ ಒಗೆಂಯೋದಿಕ್ಕೆ ಯಾವುದು ಸುಲಭ, ಅದನ್ನು ತನ್ನಿ.

ಮೈಸೂರು ಮಿತ್ರ

ಸೋಮವಾರ, 26 ಸೆಪ್ಟೆಂಬರ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ಹೃದಯ ಸತ್ಯವನ್ನೇ ಶೋಧಿಸಿ ತೆಗೆಯಬಲ್ಲ ಭವಿಷ್ಯವಾದಿಯಾಗಿದೆ.

– ಕಾಲ್ಡೆರಸ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಧೂಪ ಹಾಕಿದರೆ ಪಾಪ ಹೋಗುತ್ತೇ?

ನಿಮ್ಮ ಪತ್ರಗಳು

ನಾಡಗೀತೆಗೆ ಸಮಯ ನಿಗದಿ: ಸಿಎಂಗೆ ಅಭಿನಂದನೆ

ಮಾನ್ಯರೆ,

ನಾಡಗೀತೆ ಗಾಯನಕ್ಕೆ ಶೈಲಿಯ ದಾಟಿ ಮತ್ತು 2.30 ನಿಮಿಷ ಕಾಲಮಿತಿಯನ್ನು ನಿಗದಿಪಡಿಸಿ ಮೈಸೂರು ಅನಂತಸ್ವಾಮಿ ರಾಗಸಂಯೋಜನೆಯನ್ನು ಅಧಿಕೃತಗೊಳಿಸಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಅನಂತ ಧನ್ಯವಾದಗಳು.

ಮೈಸೂರು ರಾಜ್ಯವಿದ್ದಾಗ ಬಸಪ್ಪಶಾಸ್ತ್ರಿಗಳು ರಚಿಸಿದ ಕಾಯೌ ಶ್ರೀ ಗೌರಿ ನಾಡಗೀತೆಯಾಗಿ ಎಲ್ಲೆಡೆ ಹಾಡಲಾಗುತ್ತಿತ್ತು, ನಂತರ ಕರ್ನಾಟಕ ರಾಜ್ಯ ರಚನೆಯಾದ ಬಳಿಕ ಕುವೆಂಪು ಅವರು ರಚಿಸಿದ "ಭಾರತ ಜನನೀಯ ತನುಜಾತೆ" ಹಾಡುತ್ತಿದ್ದಾದರೂ ಅದು ಅಧಿಕೃತವಾಗಿ ರಾಜ್ಯ ಸರ್ಕಾರ ನಾಡಗೀತೆ ಎಂದು ಘೋಷಿಸಿರಲಿಲ್ಲ.

ರಾಷ್ಟ್ರಕವಿ ಕುವೆಂಪುರವರು 1924ರಲ್ಲಿ ಭಾರತ ಜನನಿಯ ತನುಜಾತೆ ಗೀತೆಯನ್ನು 'ಕಿಶೋರ ಚಂದ್ರವಾಣಿ' ಎಂಬ ಕಾವ್ಯನಾಮದಡಿ ಬರೆದರು. ರಾಷ್ಟ್ರಕವಿ ಕುವೆಂಪು ಅವರು ರಚಿಸಿರುವ ಭಾರತಜನನಿಯ ತನುಜಾತೆ ಗೀತೆಯನ್ನು ಮೈಸೂರು ಅನಂತಸ್ವಾಮಿ ಅವರು ರಾಗಸಂಯೋಜಿಸಿ ರಾಜ್ಯದ ಎಲ್ಲೆಡೆ ಹಾಡುವ ಮೂಲಕ ಜನಸಮೂಹ ಹಾಡುವಂತೆ ಪ್ರೇರೇಪಿಸಿ ಜನಪ್ರಿಯಗೊಳಿಸಿದ್ದರು, 2004 ಫೆಬ್ರವರಿ 23ರಂದು ಕುವೆಂಪು ಅವರ ಜನ್ಮ ಶತಮಾನೋತ್ಸವದ ಸಮಯದಲ್ಲಿ ಕರ್ನಾಟಕ ಸರ್ಕಾರ ಭಾರತಜನನಿಯ ತನುಜಾತೆ ಗೀತೆಯನ್ನು ರಾಜ್ಯದ ಅಧಿಕೃತ ನಾಡಗೀತೆಯನ್ನಾಗಿ ಘೋಷಿಸಿತು.

ಇತ್ತೀಚಿನ ದಿನಗಳಲ್ಲಿ ಟ್ರಾಕ್ ಸಂಪ್ರದಾಯ ಬಂದ ಬಳಿಕ ನಾಡಗೀತೆಯನ್ನು ಯಾವ ಶೈಲಿಯ ರಾಗದಲ್ಲಿ ಹಾಡಬೇಕು, ದಾಟಿ ಮತ್ತು ಸಮಯವನ್ನು ರಾಜ್ಯ ಸರ್ಕಾರ ನಿಗಧಿಪಡಿಸಿರಲಿಲ್ಲ, ಇದೀಗ ಸಂಗೀತ ವಿದೂಷಿ ಎಚ್. ಆರ್ ಲೀಲಾವತಿ ಅವರ ಅಧ್ಯಕ್ಷತೆಯಲ್ಲಿ ಸಮಿತಿ ಶಿಫಾರಸು ಮಾಡಿದ ಪ್ರಕಾರ ಸರ್ಕಾರಿ ಕಾರ್ಯ ಕ್ರಮಗಳಲ್ಲಿ, ಸಾಂಸ್ಕೃತಿಕ ವೇದಿಕೆಗಳಲ್ಲಿ ಶಾಲಾ ಕಾಲೇಜುಗಳಲ್ಲಿ ಹಾಡುವಾಗ ಮೈಸೂರು ಅನಂತಸ್ವಾಮಿ ರಾಗ ಸಂಯೋಜನೆಯಲ್ಲಿ 2.30 ನಿಮಿಷದಲ್ಲಿ ನಾಡಗೀತೆಯನ್ನು ಹಾಡಬೇಕೆಂದು ಅಧಿಕೃತಗೊಳಿಸಿದೆ. ನಮ್ಮ ಮೈಸೂರಿನ ಸಾಂಸ್ಕೃತಿಕತೆಗೆ ಕಲಾವಿದರ ತವರೂರಿಗೆ ಸಂದ ಗೌರವವಾಗಿದೆ. ಮೈಸೂರು ಕಲಾವಿದರ ಬಹಳ ವರ್ಷದ ಮಹದಾಸೆ ಈಡೇರಿದೆ. ಈ ನಿರ್ಧಾರ ಕೈಗೊಂಡು ಅನುಮೋದನೆ ಮಾಡಿದ ರಾಜ್ಯ ಸರ್ಕಾರಕ್ಕೆ ಮತ್ತು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ರವರಿಗೆ ಅನಂತ ಧನ್ಯವಾದಗಳು.

– ಅಜಯ್ ಶಾಸ್ತ್ರಿ, ಮೈಸೂರು.

ರೈಲ್ವೆ ಕೆಳಸೇತುವೆಯ ರಸ್ತೆ ದುರಾವಸ್ಥೆ

ಮಾನ್ಯರೆ,

ಮೈಸೂರು ನಗರದ ಚಾಮರಾಜ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ವಾರ್ಡ್ ನಂಬರ್ 18ರ ಮೇದರ್ ಬ್ಲಾಕ್‌ನ ಬಂಬೂ ಬಜಾರ್–ಜಾವಾ ಫ್ಯಾಕ್ಟರಿ ರಸ್ತೆಯಲ್ಲಿರುವ ರೈಲ್ವೆ ಅಂಡರ್ ಬ್ರಿಡ್ಜ್ ಕೆಳಗಿನ ಎರಡೂ ಬದಿಯ ರಸ್ತೆ ಹಲವು ತಿಂಗಳಿಂದ ಹಾಳಾಗಿ ಡಾಂಬರು ಕಿತ್ತು ಗುಂಡಿ ಬಿದ್ದಿದೆ. ಈ ರಸ್ತೆ ಯಾದವಗಿರಿ ಕೈಗಾರಿಕಾ ಪ್ರದೇಶಕ್ಕೆ ಹಾಗೂ ರೈಲ್ವೆ ಗೂಡ್ಸ್ ಯಾರ್ಡ್‌ಗೆ ಸಂಪರ್ಕ ಕಲ್ಪಿಸುವ ಮುಖ್ಯ ರಸ್ತೆಯಾಗಿದ್ದು, ಸದರಿ ರಸ್ತೆ ಸದಾ ವಾಹನ ದಟ್ಟಣೆಯಿಂದ ಕೂಡಿರುತ್ತದೆ. ದ್ವಿಚಕ್ರ ವಾಹನ ಸವಾರರು ಈ ಮಾರ್ಗವಾಗಿ ಸಂಚರಿಸುವಾಗ ಸರ್ಕಸ್ ಮಾಡುವಂತಹ ಪರಿಸ್ಥಿತಿ ಇದೆ.

ಕೂಡಲೇ ಸ್ಥಳೀಯ ವಿಧಾನಸಭಾ ಕ್ಷೇತ್ರದ ಶಾಸಕರು ಹಾಗೂ ಮೈಸೂರು ಮಹಾನಗರ ಪಾಲಿಕೆ ಅವ್ಯವಸ್ಥೆಯಿಂದ ಕೂಡಿರುವ ಈ ರಸ್ತೆಗೆ ಡಾಂಬರೀಕರಣ ಮಾಡಿ ಸುಗಮ ವಾಹನ ಸಂಚಾರಕ್ಕೆ ಅನುವು ಮಾಡಿಕೊಡಲಿ ಎಂಬುದೇ ನಮ್ಮ ಮನವಿ.

– ಎಸ್. ರಾಜಗೋಪಾಲ್, ಮೈಸೂರು.

ಸರ್ಕಾರಿ ನೌಕರರ ವೇತನ ಪರಿಷ್ಕರಣೆ ಯಾವಾಗ?

ಮಾನ್ಯರೆ,

ರಾಜ್ಯ ಸರ್ಕಾರಿ ನೌಕರರ ವೇತನ ಪರಿಷ್ಕರಣೆ ಕಳೆದ ಜುಲೈನಿಂದಲೇ ಜಾರಿಯಾಗಬೇಕಾಗಿದ್ದುದು ಸರಿಯಷ್ಟೆ ಆದರೆ ಈ ಬಗ್ಗೆ ವೇತನ ಆಯೋಗ ಅಥವಾ ಸಮಿತಿಯಾಗಲೀ ಇನ್ನೂ ರಚನೆಯೇ ಆಗಿಲ್ಲ. ಮುಂದಿನ ತಿಂಗಳು ಆಯೋಗ ರಚನೆ ಮಾಡುವುದಾಗಿ ಸರ್ಕಾರ ಹೇಳಿದೆ. ಇದುವರೆಗೂ ಆಯೋಗ ರಚನೆ ಮಾಡಲು ಅಥವಾ ಈಗಲೂ ಮಾಡದಿರಲು ಅಡ್ಡಿಯೇನು ಎನ್ನುವುದು ತಿಳಿಯುತ್ತಿಲ್ಲ. ಮುಂದಿನ ತಿಂಗಳು ಆಯೋಗ ರಚನೆಯಾದರೂ ಅದರ ವರದಿ ಬರಲು 3–4 ತಿಂಗಳು ಬೇಕು. ಅನಂತರ ಆ ವರದಿಯನ್ನು ಸಂಪುಟ ಉಪ ಸಮಿತಿಗೋ ಅಥವಾ ಮತ್ತಾವುದೋ ಸಮಿತಿಗೆ ಪರಿಶೀಲಿಸಲು ಹೇಳಲಾಗುತ್ತದೆ. ಅಷ್ಟರಲ್ಲಿ ವಿಧಾನಸಭಾ ಚುನಾವಣಾ ನೀತಿ ಸಂಹಿತೆ ಅಡ್ಡ ಬರುತ್ತದೆ. ಅಲ್ಲಿಗೆ ಈ ಪ್ರಹಸನ ಮುಕ್ತಾಯವಾಗುತ್ತದೆ. ಹೊಸ ಸರ್ಕಾರ ಬಂದು ತನ್ನ ರಾಜಕೀಯ ಜಂಜಾಟಗಳನ್ನೆಲ್ಲಾ ಪರಿಹರಿಸಿಕೊಳ್ಳಲು ಆರೇಳು ತಿಂಗಳು ಬೇಕು. ಅಂದರೆ ಇನ್ನೂ ಒಂದು ವರ್ಷ ಪರಿಷ್ಕರಣೆಯ ಸಾಧ್ಯತೆಯಿಲ್ಲ.

ಪ್ರಸ್ತುತ ರಾಜ್ಯ ಸರ್ಕಾರಿ ನೌಕರರ ಸಂಘ ಮೌನ ವಹಿಸಿರುವುದು ಸರಿಯಲ್ಲ. ಪರಿಷ್ಕರಣೆ ಆಗುವವರೆಗೂ ತಾತ್ಕಾಲಿಕ ಪರಿಹಾರಕ್ಕಾದರೂ ಒತ್ತಾಯಿಸದೆ ಸರ್ಕಾರದ ಬಗ್ಗೆ ಮೃದು ನೀತಿ ತಾಳಿದೆ ಸರ್ಕಾರದ ವಿಳಂಬ ತಂತ್ರದ ಬಗ್ಗೆ ಅವರಿಗೆ ತಿಳಿದಿಲ್ಲವೇ? ಅಥವಾ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಬಾರದೆಂಬ ಲೆಕ್ಕಾಚಾರವೋ ತಿಳಿಯದು. ಪರಿಷ್ಕರಣೆ ವಿಳಂಬವಾದಷ್ಟೂ ಹೆಚ್ಚು ನಷ್ಟವಾಗುವುದು ನಿವೃತ್ತರಿಗೆ ಮತ್ತು ನಿವೃತ್ತಿಯ ಅಂಚಿನಲ್ಲಿರುವವರಿಗೆ. ಈ ಬಗ್ಗೆ ನಿವೃತ್ತ ನೌಕರರ ಸಂಘವೂ ಸರ್ಕಾರದ ಗಮನ ಸೆಳೆಯಬೇಕಿದೆ.

– ನಿರಂಜನ್, ನಿವೃತ್ತ ಸರ್ಕಾರಿ ನೌಕರ, ಮೈಸೂರು.

ಗುರ(ರು)ವೇ!

ಮಾನ್ಯರೆ,

ಪ್ರತಿವರ್ಷ ಸೆ. 5ರಂದು ಶಿಕ್ಷಕರ ದಿನಾಚರಣೆ; ಅಂದು (ಬೇರೆ ಸಂದರ್ಭಗಳಲ್ಲಿ ಕೂಡ) ಈ ಗುರುಸ್ತೋತ್ರ ಕೇಳಿ ಬರುತ್ತದೆ.

ಗುರುಬ್ರಹ್ಮಾ ಗುರು ವಿಷ್ಣುಃ ಗುರುರ್ದೇವೋ ಮಹೇಶ್ವರಃ

ಗುರುಸ್ಸಾಕ್ಷಾತ್ ಪರಬ್ರಹ್ಮ ತಸ್ಮೈ ಶ್ರೀ **ಗುರುವೇ** ನಮಃ

ಈ ಶ್ಲೋಕದ ಕಡೆಯ ಭಾಗ ಬಹುಮಂದಿಯ ಬಾಯಲ್ಲಿ, ಬರಹದಲ್ಲಿ 'ಗುರುವೇ' ಎಂದಾಗುತ್ತದೆ! ಅದು ಕನ್ನಡ ವಾಕ್ಯವಾಗಿದ್ದರೆ, ಸಾಧುವಾಗುತ್ತಿತ್ತು; ಆದರೆ ಅದು ಸಂಸ್ಕೃತ ವಾಕ್ಯವಾದ್ದರಿಂದ 'ಗುರುವೇ' (:ಗುರುವಿಗೆ: ಚತುರ್ಥೀ ವಿಭಕ್ತಿ ಸಂಶೋಧನೆಯಲ್ಲಿ) ಎಂಬುದು ಸರಿ; 'ಗುರುವೇ' ತಪ್ಪು! (ಇರಲಿ, ವ್ಯಾಕರಣಕ್ಕಿಂತ ಗುರು ದೊಡ್ಡವನು).

ಇನ್ನು, ಒಂದು ಹಾಸ್ಯೋಕ್ತಿ; ಇಂದಿನವರ ಹೇಳಿಕೆಯನ್ನು ತಿರುಚಿದ್ದು: 'ಗುರುವೇನ್ಮಹ(ಹಾ)?'

ಒಂದು ವೈಯಕ್ತಿಕ ಸಂಗತಿ. ನಾನು 'ಮಹಾ'ಗುರು ಕುವೆಂಪು ಅವರ ಶಿಷ್ಯನಾಗುವುದು ಸ್ವಲ್ಪದರಲ್ಲಿ ತಪ್ಪಿತು. (ನಾನು, ಅನೇಕರು ತಿಳಿದಿರುವಂತೆ ಅವರ ವಿದ್ಯಾರ್ಥಿಯಲ್ಲ). 1957ರಲ್ಲಿ ನಾನು ಮಹಾರಜಾ ಕಾಲೇಜು ಸೇರುವಷ್ಟರಲ್ಲಿ ಕುವೆಂಪು ಕುಲಪತಿಯಾಗಿ ಕ್ರಾಫರ್ಡ್ ಭವನ ಸೇರಿದ್ದರು! ಆದರೇನಂತೆ. ನಾನು ಅವರ ಪರೋಕ್ಷ ಶಿಷ್ಯನೇ, ಪ್ರಶಿಷ್ಯನೇ!

– ಸಿಪಿಕೆ, ಮೈಸೂರು.

ಮೋದಿ ಯುಗ ಉತ್ಸವ–2022 ಸಮಾರೋಪ ಸಮಾರಂಭ

ಕೆ.ಆರ್.ಕ್ಷೇತ್ರದಲ್ಲಿ ವಿಭಿನ್ನ ಅಭಿವೃದ್ಧಿ ಪರ್ವ ಆರಂಭ: ಸಿಎಂ

70 ಸಾವಿರ ಫಲಾನುಭವಿಗಳಿಗೆ ಸರ್ಕಾರದ ಯೋಜನೆಗಳನ್ನು ತಲುಪಿಸಿದ ರಾಮದಾಸ್



ಮೈಸೂರು, ಸೆ.25(ಎಂಕೆ)– ಸರ್ಕಾರಗಳು ರೂಪಿಸುವ ಹತ್ತು–ಹಲವು ಕಾರ್ಯಕ್ರಮಗಳನ್ನು ಫಲಾನುಭವಿಗಳವರೆಗೂ ತೆಗೆದುಕೊಂಡು ಹೋಗುವ ಕೆಲಸವನ್ನು ಜನಪ್ರತಿನಿಧಿಗಳು ಮಾಡಿದಾಗ ಅದ್ಭುತವಾದ ಫಲಿತಾಂಶದ ಜೊತೆಗೆ ದೇಶದ ಅಭಿವೃದ್ಧಿಯ ಪರ್ವ ಬಹಳ ಎತ್ತರಕ್ಕೆ ಬೆಳೆಯಲಿದೆ. ಈ ನಿಟ್ಟಿನಲ್ಲಿ ಕೆ.ಆರ್.ಕ್ಷೇತ್ರದ ಶಾಸಕ ಎಸ್.ಎ.ರಾಮದಾಸ್, ತಮ್ಮ ಕ್ಷೇತ್ರದ ಸುಮಾರು 70 ಸಾವಿರ ಫಲಾನುಭವಿಗಳಿಗೆ ಒಂದಲ್ಲ ಒಂದು ರೀತಿಯ ಯೋಜನೆಗಳನ್ನು ಸಮರ್ಪಕವಾಗಿ ತಲುಪಿಸಿದ್ದಾರೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮೆಚ್ಚುಗೆ ವ್ಯಕ್ತಪಡಿಸಿದರು.

ಮೋದಿ ಯುಗ ಉತ್ಸವ–2022 ಸಮಾರೋಪ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ಕೆ.ಆರ್.ಕ್ಷೇತ್ರದಲ್ಲಿ ವಿಭಿನ್ನವಾದ ಅಭಿವೃದ್ಧಿ ಪರ್ವ ಪ್ರಾರಂಭವಾಗಿದೆ. ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಸರ್ಕಾರದ ಹಲವು ಯೋಜನೆಗಳನ್ನು ಯಶ್ವಸಿಗೊಳಿಸುತ್ತಿದ್ದಾರೆ. ಸರ್ಕಾರದ ಸವಲತ್ತುಗಳನ್ನು ಕೊಡಿಸುವುದಾಗಿ ಜನರಿಂದ ಹಣ ವಸೂಲಿ ಮಾಡಿ ಮೋಸ ಮಾಡುವ ಮಧ್ಯವರ್ತಿಗಳನ್ನು ತೆಗೆದುಹಾಕಿ ನೇರವಾಗಿ ಜನರಿಗೆ ತಲುಪಿಸುವ ಕೆಲಸ ಈ ಕ್ಷೇತ್ರದಲ್ಲಾಗುತ್ತಿದೆ ಎಂದು ಪ್ರಶಂಸಿದರು.

ಸರ್ಕಾರದ ಸವಲತ್ತುಗಳು ಬಡವರಿಗೆ, ರೈತರಿಗೆ ತಲುಪಬೇಕಾದರೆ ಮಧ್ಯವರ್ತಿಗಳು ಇರಬಾರದು ಎಂಬ ಕಾರಣದಿಂದಲೇ ಪ್ರಧಾನಿ ಮೋದಿಯವರು ಡಿಜಿಟಲೀಕರಣಕ್ಕೆ ಹೆಚ್ಚಿನ ಆದ್ಯತೆ ನೀಡಿದ್ದಾರೆ. ಇದಕ್ಕಾಗಿಯೇ ಬಹಳ ದೊಡ್ಡಮಟ್ಟದ ಕೆಲಸಗಳು ನಡೆಯುತ್ತಿವೆ. ಪ್ರಧಾನಿಗಳೇ ಒಮ್ಮೆ ದೆಹಲಿಯಲ್ಲಿ ಕೊಟ್ಟಂತಹ 100 ರೂ., ಹಳ್ಳಿಗೆ ಮುಟ್ಟುವಷ್ಟರಲ್ಲಿ 15 ರೂ. ಆಗುತ್ತಿದೆ ಎಂದು ಅಂದಿನ ಪ್ರಸ್ಥಿತಿಯನ್ನು ಪ್ರಾಮಾಣಿಕವಾಗಿ ತಿಳಿಸಿದ್ದರು. ಅದಕ್ಕೆ ಕಾರಣ ದೇಶದಲ್ಲಿ ಮೊದಲಿದ್ದ ರಾಜಕೀಯ ಹಾಗೂ ಆಡಳಿತ ವ್ಯವಸ್ಥೆ. ಜನರಿಗೆ ನ್ಯಾಯವಾಗಿ ಸಿಗಬೇಕಾದನ್ನು ಮಧ್ಯವರ್ತಿಗಳು ಮತ್ತು ರಾಜಕಾರಣಿಗಳು ಸೇರಿ ಅದನ್ನು ಫಲಾನುಭವಿಗಳು ಮುಟ್ಟದಂತೆ ತಿಂದು ಹಾಕುವ ಸಂಸ್ಕೃತಿ ಇತ್ತು. ಇವತ್ತಿಗೂ ಕೂಡ ಮಧ್ಯವರ್ತಿಗಳ ಹಾವಳಿ ಇರುವಂತಹ ರಾಜಕೀಯ ವ್ಯವಸ್ಥೆ ಇದೆ. ರಾಜ್ಯ ಶಕ್ತಿ ಮತ್ತು ಜನಶಕ್ತಿ ಒಂದಕ್ಕೊಂದು ಪೂರಕವಾಗಿದ್ದರೆ ದೇಶ ಅಭಿವೃದ್ಧಿ ಯಾಗುತ್ತದೆ. ಇವತ್ತು ದೇಶದ ಜನರ ವಿಶ್ವಾಸವನ್ನು ತೆಗೆದುಕೊಂಡು ಪ್ರಧಾನಿಗಳು ಮಹತ್ವದ ಬದಲಾವಣೆಗಳನ್ನು ತರುತ್ತಿದ್ದಾರೆ ಎಂದರು.

ಜನ ಸಂಪರ್ಕವಿರುವ ರಾಜಕಾರಣವನ್ನು ಮಾಡಿದಾಗ ಜನರ ಉದ್ಧಾರವಾಗುತ್ತದೆ. ಸರ್ವರ ಅಭಿವೃದ್ಧಿಯಾಗಬೇಕು. ಆದ್ದರಿಂದಲೇ ಸ್ತ್ರೀ ಶಕ್ತಿ ಸಂಘಗಳಿಗೆ 5 ಲಕ್ಷ ರೂ. ವೆಚ್ಚದ ಸಾಲ–ಸೌಲಭ್ಯ ದೊರೆಯುವಂತೆ ಮಾಡಲಾಗಿದೆ. ಯುವಕರು ಮತ್ತು ಮಹಿಳೆಯರಿಗೆ ಶಕ್ತಿ ತುಂಬಿದರೆ ದೇಶಕ್ಕೆ ಶಕ್ತಿ ತುಂಬಿದಂತೆ. ಆರ್ಥಿಕವಾಗಿ ಸ್ವಾವಲಂಬಿಗಳಾದರೆ ರಾಜ್ಯದ ಆದಾಯವೂ ಹೆಚ್ಚಾಗುತ್ತದೆ. ದುಡಿಯುವ ವರ್ಗ ಆರ್ಥಿಕ ಬೆಂಬಲವನ್ನು ಕೊಟ್ಟು, ಅವರ ಆದಾಯವನ್ನು ಹೆಚ್ಚಿಸುವ ಕೆಲಸವನ್ನು ಮಾಡಿದಾಗ ದೇಶದ ಪ್ರತಿಯೊಂದು ಕುಟುಂಬದಲ್ಲಿಯೂ ಸುಖ–ಶಾಂತಿ ನೆಲೆಸುತ್ತದೆ ಎಂದು ಹೇಳಿದರು.

ಅಭಿವೃದ್ಧಿಯಲ್ಲಿ ಪೈಪೋಟಿ: ಭವ್ಯ ಪರಂಪರೆಯನ್ನು ಹೊಂದಿರುವ ಮೈಸೂರಿನಲ್ಲಿ ಶಾಸಕ ರಾಮದಾಸ್ ಹಾಗೂ ನಾಗೇಂದ್ರ ಪೈಪೋಟಿ ಮೇಲೆ ಅಭಿವೃದ್ಧಿ ಮಾಡುತ್ತಿದ್ದಾರೆ. ರಾಜಕಾರಣದಲ್ಲಿ ಪೈಪೋಟಿ ಇರಬೇಕು. ಆದರೆ ಅದು ಆರೋಗ್ಯಕರವಾಗಿರಬೇಕು. ಜನರಿಗೆ ಒಳ್ಳೆಯದನ್ನು ಮಾಡುವುದರಲ್ಲಿ, ಊರು, ಕ್ಷೇತ್ರವನ್ನು ಕಟ್ಟುವುದರಲ್ಲಿ ಪೈಪೋಟಿ ಇರಲಿ ಎಂದರು.


ಮೇಯರ್ ಶಿವಕುಮಾರ್, ಶಾಸಕ ಎಸ್.ಎ.ರಾಮದಾಸ್, ಸಂಸದ ಪ್ರತಾಪ್‌ಸಿಂಹ, ಉಪ ಮೇಯರ್ ಜಿ.ರೂಪ, ಜಿಲ್ಲಾಧಿಕಾರಿ ಬಗಾದಿ ಗೌತಮ್, ಪಾಲಿಕೆ ಆಯುಕ್ತ ಲಕ್ಷ್ಮಿಕಾಂತ್ ರೆಡ್ಡಿ ಮತ್ತಿತರರು ಉಪಸ್ಥಿತರಿದ್ದರು.

'ತಾಯಿ ಗರ್ಭದಿಂದ ಭೂ ಗರ್ಭದವರೆಗೆ' ಎಂಬ ಕಲ್ಪನೆ ಅದ್ಭುತ...

ತಾಯಿ ಗರ್ಭದಿಂದ ಭೂ ಗರ್ಭದವರೆಗೆ ಎಂಬ ಪರಿಕಲ್ಪನೆ ಅದ್ಭುತವಾಗಿದೆ. ಎರಡು ಗರ್ಭಗಳ ನಡುವೆ ನಮ್ಮ ಬದುಕಿದೆ. ಹುಟ್ಟು ಆಕಸ್ಮಿಕ. ಯಾರು ಅರ್ಜಿ ಕೊಟ್ಟು ಹುಟ್ಟುವುದಿಲ್ಲ. ನಾನಂತೂ ಅರ್ಜಿ ಕೊಟ್ಟು ಹುಟ್ಟಿಲ್ಲ ಎಂದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸಾವು ನಿಶ್ಚಿತ. ಯಾವಾಗ ಹೋಗುತ್ತೇವೆ ಎಂಬುದು ಗೊತ್ತಿಲ್ಲ. ಆದ್ದರಿಂದ ನಾವು ಯಾವಾಗ್ ಸಾಯ್‌ತಿವೋ, ನಮ್ಮ ಪ್ರತಿಸ್ಪರ್ಧಿ ಯಾವಾಗ ಸಾಯುತ್ತಾರೋ ಎಂಬುದರ ಬಗ್ಗೆಯೇ ಬಹಳ ಚಿಂತಿಸುತ್ತೇವೆ ಎಂದು ತಿಳಿಸಿದರು.

ಒಬ್ಬ ಜಮಿನ್ದಾರ ಮತ್ತು ಆತನಿಗೊಬ್ಬ ಬಡ ಮಿತ್ರನಿದ್ದ. ಜಮಿನ್ದಾರನಿಗೆ ಬಹಳಷ್ಟು ಜಮೀನು ಇದ್ದರೂ ಇನ್ನಷ್ಟು ಜಮೀನು ಮಾಡಬೇಕು ಎಂಬ ಬಹಳ ಹಂಬಲ. ಇನ್ನೊಬ್ಬ ಬಡ ಮಿತ್ರ, ಬಡವನಾಗಿದ್ದರೂ ಆಧ್ಯಾತ್ಮದ ವಿಚಾರಗಳನ್ನು ತಿಳಿದುಕೊಂಡಿದ್ದನು. ಸಾಕಷ್ಟು ಮಂದಿ ನಿನ್ನ ಬಳಿ ಬಹಳಷ್ಟು ಜಮೀನಿದೆ. ಇನ್ನೂ ಬೇಕೆ ಎಂದು ಹೇಳಿದರೂ ಜಮಿನ್ದಾರ ಕೇಳುತ್ತಿರಲಿಲ್ಲ. ಹೇಗಾದರೂ ಇವನಿಗೆ ಪಾಠ ಕಲಿಸಬೇಕು ಎನ್ನುತ್ತಾ ರಸ್ತೆಯಲ್ಲಿ ಹೋಗುವಾಗ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ ರೈತನನ್ನು ಕಂಡು ಅವನನ್ನು ನೋಡಿದರೆ ನಿನಗೆ ಏನು ಅನಿಸುತ್ತದೆ ಎಂದು ಕೇಳಿದ. ಅದಕ್ಕೆ ಉತ್ತರಿಸಿದ ಜಮಿನ್ದಾರ, ಇನ್ನೂ ಬೇಗ ಬೇಗ ಕೆಲಸ ಮಾಡಬೇಕು. ಇದಕ್ಕಿಂತ ನನಗೆ ಬೇರೇನೂ ಒಳಿಯೊದಿಲ್ಲ. ಜಮೀನು ಚೆನ್ನಾಗಿದೆ ಎಂದನು.

ಆಗ ಬಡ ಮಿತ್ರ ಹೇಳುತ್ತಾನೆ. ರೈತ ಹೊಡೆಯುವ ಪ್ರತಿಯೊಂದು ಗುದ್ದಲಿ ಏಟು ಮತ್ತು ಆತ ಈ ಭೂಮಿ ನನ್‌ದು, ಈ ಭೂಮಿ ನನ್‌ದು ಎಂದು ಕೊಂಡಿದ್ದಾರೆ ಎಂದು ತಿಳಿಸುತ್ತಾ ಇನ್ನೂ ಸ್ವಲ್ಪ ಮುಂದೆ ಹೋದಾಗ ಎದುರಾದ ಸ್ಮಶಾನ ಕಂಡು ಈ ಭೂಮಿ ನಿನಗೆ ಸಿಕ್ಕಿದ್ದರೆ ಏನೂ ಮಾಡುತ್ತಿದ್ದೆ ಎನ್ನುತ್ತಾನೆ. ಅದಕ್ಕೆ ಜಮಿನ್ದಾರ ಈ ಭೂಮಿ ಸಿಕ್ಕಿದ್ದರೆ ಮಟ್ಟ ಮಾಡಿ ಬಿಲ್ಡಿಂಗ್ ಕಟ್ಟುತ್ತಿದೆ ಎನ್ನುತ್ತಾನೆ. ಆವಾಗ ಬಡ ರೈತ ಹೇಳುತ್ತಾನೆ. ಅಲ್ಲಿ ರೈತ ಭೂಮಿ ನನ್ನದು ಎನ್ನುತ್ತಿದ್ದ. ಸ್ಮಶಾನದಲ್ಲಿ ಭೂಮಿ ಮನಷ್ಯ ನನ್ನವನು.. ಮನುಷ್ಯ ನನ್ನವನು... ಎನ್ನುತ್ತಿದೆ. ಇಷ್ಟೇ ಈ ಜೀವನ. ಯಾವುದು ನಮ್ಮದು ಎನ್ನುತ್ತೇವೆ ಅದು ನಮ್ಮದಾಗಲೂ ಸಾಧ್ಯವಿಲ್ಲ. ನಿಸರ್ಗ ಸೃಷ್ಟಿಕರ್ತನದು. ಇದೆಲ್ಲವನ್ನೂ ಅರ್ಥಮಾಡಿಕೊಂಡು ನಡೆದಾಗ ಜಗತ್ತು ಕಲ್ಯಾಣವಾಗುತ್ತದೆ ಎಂದು ಬದುಕಿನ ಅರ್ಥವನ್ನು ತಿಳಿಸಿಕೊಟ್ಟರು..



ಹುಟ್ಟುಹಬ್ಬ ಆಚರಿಸಿಕೊಂಡ ಮಾಜಿ ಮೇಯರ್ ಸಂದೇಶ್ ಸ್ವಾಮಿ ಅವರನ್ನು ನರಸಿಂಹರಾಜ ಕ್ಷೇತ್ರದ ಅಲ್ಪಸಂಖ್ಯಾತ ಮುಖಂಡರು ಅಭಿನಂದಿಸಿ ಶುಭಾಶಯ ತಿಳಿಸಿದರು.

ರಾಹುಲ್ ಗಾಂಧಿ ಬಂದ್ರೆ ಕಮಲ ಅರಳುತ್ತದೆ: ಸಿಎಂ

ರಾಹುಲ್ ಗಾಂಧಿ ಬಂದ್ರೆ ಕಮಲ ಅರಳುತ್ತದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವ್ಯಂಗ್ಯವಾಡಿದರು.

ನಾಡಹಬ್ಬ ಮೈಸೂರು ದಸರಾ–2022ರ ಹಿನ್ನೆಲೆ ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ಆಗಮಿಸಿದ ವೇಳೆ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ರಾಹುಲ್ ಗಾಂಧಿ ಅವರು ಬಂದು ಹೋದರೂ ನಮಗೇನು ತೊಂದರೆ ಇಲ್ಲ. ಅವರು, ಎಲ್ಲೆಲ್ಲಿಗೆ ಹೋಗಿ ಪ್ರಚಾರ ಮಾಡಿದ್ದಾರೋ ಅಲ್ಲೆಲ್ಲವೂ ಕಮಲ ಅರಳಿದೆ ಎಂದು ಕುಟುಕಿದರು.

ಪೇಸಿಎಂ ಅಭಿಯಾನ ಕುರಿತು ಪ್ರತಿಕ್ರಿಯಿಸಿ, ಕಾಂಗ್ರೆಸ್ ತಟ್ಟೆಯಲ್ಲೇ ಸಾಕಷ್ಟು ಸರಣಿ ಹಗರಣಗಳಿವೆ. ಅವರು ಈ ರೀತಿಯ ಪ್ರಚಾರಗಳನ್ನು ಮಾಡಿಕೊಂಡು, ಡರ್ಟಿ ಪಾಲಿಟಿಕ್ಸ್ ಮಾಡಿಕೊಂಡು ಹೋಗಲಿ. ಈ ಮೂಲಕ ಕಾಂಗ್ರೆಸ್ ಪತನದತ್ತ ಸಾಗುತ್ತಿದ್ದು, ರಾಜ್ಯದ ಮರ್ಯಾದೆಯನ್ನು ಹಾಳು ಮಾಡುತ್ತಿದೆ. ಇವತ್ತಿನ ಯುವ ಸಮೂಹಕ್ಕೆ ಸಾಮಾಜಿಕ ಜಾಲತಾಣದ ಮೂಲಕ ರಾಜ್ಯದ ಎಲ್ಲಾ ವಿಚಾರಗಳು ತಿಳಿಯುತ್ತಿದೆ. ಚುನಾವಣಾ ವರ್ಷವಾಗಿರುವುದರಿಂದ ಇದೆಲ್ಲವೂ ಸರ್ವೇ ಸಾಮಾನ್ಯ ವೈಯುಕ್ತಿಕ ಟೀಕೆಗಳಿಗೆ ಹೆದರುವುದಿಲ್ಲ ಎಂದರು.

ಟೀಕೆಗಳನ್ನು ಮೆಟ್ಟಿಲಾಗಿಸಿಕೊಂಡು ರಾಜ್ಯದ ಅಭಿವೃದ್ಧಿಗೆ ಶ್ರಮಿಸುತ್ತೇನೆ

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ



ಮೈಸೂರಿನ ಕರಾಮುವಿ ಘಟಿಕೋತ್ಸವ ಭವನದಲ್ಲಿ ಭಾನುವಾರ ನಡೆದ ಚಾಮರಾಜ ಕ್ಷೇತ್ರ ವ್ಯಾಪ್ತಿಯ ಫಲಾನುಭವಿಗಳಿಗೆ ಸರ್ಕಾರದ ಸವಲತ್ತು ವಿತರಣಾ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಪುರಸ್ಕರಿಸಿದರು.

ಮೈಸೂರು, ಸೆ.25(ಎಸ್‌ಬಿಡಿ)– ಟೀಕೆಗಳನ್ನು ಯಶಸ್ಸಿನ ಮೆಟ್ಟಿಲು ಮಾಡಿಕೊಂಡು ರಾಜ್ಯದ ಶ್ರೇಯೋಭಿವೃದ್ಧಿಗೆ ಹಗಲಿರುಳು ಶ್ರಮಿಸಿ ಮತ್ತೆ ಜನಪರ ಸರ್ಕಾರ ಸ್ಥಾಪನೆಯ ಗುರಿ ಸಾಧಿಸುತ್ತೇವೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ತಮ್ಮ ಟೀಕಾ ಕಾರರಿಗೆ ತಿರುಗೇಟು ನೀಡಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರ ಹುಟ್ಟುಹಬ್ಬದ ಪ್ರಯುಕ್ತ ಹಮ್ಮಿಕೊಂಡಿರುವ ಸೇವಾ ಪಾಕ್ಷಿಕ ಅಭಿಯಾನದ ಭಾಗವಾಗಿ ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿವಿ ಘಟಿಕೋತ್ಸವ ಭವನದಲ್ಲಿ ಭಾನುವಾರ ಶಾಸಕ ಎಲ್.ನಾಗೇಂದ್ರ ನೇತೃತ್ವದಲ್ಲಿ ನಡೆದ ಚಾಮರಾಜ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಅರ್ಹ ಫಲಾನುಭವಿಗಳಿಗೆ ವಿವಿಧ ಇಲಾಖೆಗಳಿಂದ ಸರ್ಕಾರಿ ಸವಲತ್ತು ವಿತರಿಸುವ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕಾಂಗ್ರೆಸ್ ನಾಯಕರು 'ಪೇಸಿಎಂ' ಪೋಸ್ಟರ್‌ಗಳನ್ನು ಗೋಡೆಗಳಿಗೆ ಅಂಟಿಸುವ ಅಭಿಯಾನ ನಡೆಸಿದ್ದನ್ನು ಪ್ರಸ್ತಾಪಿಸದೆ ಟೀಕೆಗಳಿಗೆ ಕಿವಿಗೊಡುವ ಅಗತ್ಯವಿಲ್ಲ ಎಂದ ಮುಖ್ಯಮಂತ್ರಿಗಳು, ನೀನು ವೀರ, ಶೂರ, ನೀನಿಟ್ಟ ಗುರಿ ತಪ್ಪೋದಿಲ್ಲ ಎಂದು ಹೊಗಳಿದಾಗ ಅರ್ಜುನ ಬಾಣ ಹೂಡುತ್ತಾನೆ. ಆದರೆ ಕರ್ಣನಿಗೆ ಈ ರೀತಿಯ ಹೊಗಳಿಕೆ ನಾಟುವುದಿಲ್ಲ. ನಿನ್ನ ಕೈಯಲ್ಲಿ ಆಗುವುದಿಲ್ಲ, ನಿನಗೆ ಗುರಿ ಇಡಲು ಸಾಧ್ಯವಿಲ್ಲ ಎಂದಾಗ ಕರ್ಣ ಮೈಕೊಡವಿ ಎದ್ದು ನಿಂತು ಅರ್ಜುನನಿಗಿಂತ ನಿಖರವಾಗಿ ಗುರಿ ಇಟ್ಟು ಹೊಡೆಯುತ್ತಾನೆ. ಸಮಾಜದಲ್ಲಿ ಹೀಗೆ ಎರಡು ರೀತಿಯ ವ್ಯಕ್ತಿತ್ವಗಳಿವೆ. ಇದರಲ್ಲಿ ನಾನು ಎರಡನೇ ಪಂಥಕ್ಕೆ ಸೇರಿದವನು ಎಂದು ವಿಶಿಷ್ಟವಾಗಿ ಪ್ರತ್ಯುತ್ತರ ನೀಡಿದರು.

ನೀವೆಷ್ಟು ಟೀಕೆ, ಅವಮಾನ, ಅಪಮಾನ ಮಾಡಿದರೂ ನನ್ನ ಮನೋಬಲ ಕುಗ್ಗುವುದಿಲ್ಲ. ಬದಲಾಗಿ ನನ್ನಲ್ಲಿರುವ ಆತ್ಮವಿಶ್ವಾಸ ಹೆಚ್ಚುತ್ತದೆ. ನಿಮ್ಮ ಟೀಕೆಗಳು ನನ್ನ ಸಂಕಲ್ಪವನ್ನು ಮತ್ತಷ್ಟು ದೃಢ ಮಾಡುತ್ತದೆ. ನನ್ನ ಶಕ್ತಿ ಹೆಚ್ಚಿಸುತ್ತದೆ. ನಿಮ್ಮ ಟೀಕೆಗಳನ್ನು ಸವಾಲಾಗಿ ಸ್ವೀಕರಿಸಿ, ಅವುಗಳನ್ನೇ ಮೆಟ್ಟಿಲುಗಳನ್ನಾಗಿ ಮಾಡಿಕೊಂಡು ಈ ರಾಜ್ಯದ ಜನರ ಶ್ರೇಯೋಭಿವೃದ್ಧಿಗೆ ಹಗಲಿರುಳು ಕೆಲಸ ಮಾಡಿ ಜನರ ಹೃದಯ ಗೆಲ್ಲುತ್ತೇವೆ. ಆ ಮೂಲಕ ನಾವು ಮತ್ತೊಮ್ಮೆ ಈ ರಾಜ್ಯದಲ್ಲಿ ಜನಪರ ಸರ್ಕಾರದ ಸ್ಥಾಪನೆ ಮಾಡೇ ಮಾಡುತ್ತೇವೆ. ಟೀಕಾಕಾರರು ನಿನ್ನೆ ಬೆಂಗಳೂರಿನಲ್ಲಿ ಯಾವ ಸ್ಥಳದಲ್ಲಿದ್ದರೋ ಆ ಸ್ಥಳವನ್ನೇ ಖಾಯಂ ಮಾಡುತ್ತೇವೆ ಎಂದು ಗುಡುಗಿದರು.

ಭಾಗ್ಯಗಳಿಗೆ ಫಲವಿಲ್ಲ: ದಿನಕ್ಕೊಂದು ಭಾಗ್ಯ ನೀಡಿ ಕೊನೆಗೆ ರಾಜ್ಯವನ್ನೇ ದೌರ್ಭಾಗ್ಯಕ್ಕೆ ದೂಡಿದರು. ಆದರೆ ಆ ಭಾಗ್ಯಗಳು ಹಾಗೂ ಅವುಗಳನ್ನು ಜಾರಿ ಮಾಡಿದವರಿಗೆ ಮತ್ತೆ ಜನ ಬೆಂಬಲ ಸಿಗಲಿಲ್ಲ. ಕೆಲವರನ್ನು ಕೆಲ ಸಮಯ ಮೋಸ ಮಾಡಬಹುದೇ ಹೊರತು ಎಲ್ಲರನ್ನೂ ಯಾವಾಗಲೂ ಮೋಸ ಮಾಡಲು ಸಾಧ್ಯವಿಲ್ಲ. ಜನ ಜಾಗೃತರಾಗಿದ್ದಾರೆ. ತಮ್ಮ ಹಕ್ಕಿನ ಬಗ್ಗೆ ಅವರಿಗೆ ಅರಿವಿದೆ. ಆಡಳಿತ ಮಾಡುವವರು ಯಾವ ರೀತಿ ಇದ್ದಾರೆ ಎನ್ನುವುದನ್ನು ಸೂಕ್ಷ್ಮವಾಗಿ ಗಮನಿಸುತ್ತಾರೆ. ಸುಳ್ಳು ಕತೆಗಳು, ಮತ್ತೊಬ್ಬರ ಬಗ್ಗೆ ಅಪಪ್ರಚಾರ ಮಾಡುವ ಮೂಲಕ ಜನರ ಮನಸ್ಸನ್ನು ಗೆಲ್ಲಲು ಸಾಧ್ಯವಿಲ್ಲ ಎಂದರು.

ಮೈಸೂರು ಅಭಿವೃದ್ಧಿಗೆ ಕಟಿಬದ್ಧ: ಪಾರಂಪರಿಕ ಇತಿಹಾಸವಿರುವ ಮೈಸೂರಿನ ಸಮಗ್ರ ಅಭಿವೃದ್ಧಿಗೆ ಹಲವು ನಿರ್ಣಯಗಳನ್ನು ಮಾಡಿದ್ದೇನೆ. ನಾಲ್ಕು ದಿಕ್ಕುನಲ್ಲಿ ಅಭಿವೃದ್ಧಿಗೆ ಶ್ರಮವಹಿಸುತ್ತೇವೆ. ಮಾರು ಕಟ್ಟೆ ಬಗ್ಗೆ ಹೇಳಿದ್ದಾನೆ. ಖಂಡಿತ ಸಕಾರಾತ್ಮಕ ನಿರ್ಧಾರ ತೆಗೆದುಕೊಳ್ಳುತ್ತೇವೆ. ಅಭಿವೃದ್ಧಿಗೆ ಕಂಕಣಬದ್ಧರಾಗಿದ್ದೇವೆ. ಕಾರ್ಮಿಕರ ಶ್ರಮದಲ್ಲಿ, ರೈತರ ಬೆವರಿನಲ್ಲಿ ದೇವರಿದ್ದಾನೆ. ದುಡ್ಡೇ ದೊಡ್ಡಪ್ಪ ಅಲ್ಲ ಈಗ ದುಡಿಮೆಯೇ ದೊಡ್ಡಪ್ಪ. ಇದರ ಆಧಾರದ ಮೇಲೆ ಸರ್ಕಾರ ನಡೆಯುತ್ತಿದೆ. ದುಡಿಯುವ ವರ್ಗಕ್ಕೆ ಅವಕಾಶ ನೀಡುವುದು ಸರ್ಕಾರದ ಜವಾಬ್ದಾರಿಯಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಸಂಸದ ಪ್ರತಾಪ್ ಸಿಂಹ, ಶಾಸಕ ಎಲ್.ನಾಗೇಂದ್ರ, ಮೇಯರ್ ಎಂ.ಶಿವಕುಮಾರ್, ಉಪ ಮೇಯರ್ ಜಿ.ರೂಪಾ, ಜಿಲ್ಲಾಧಿಕಾರಿ ಡಾ. ಬಗಾದಿ ಗೌತಮ್, ಬಿಜೆಪಿ ರಾಜ್ಯ ಹಾಗೂ ಸ್ಥಳೀಯ ಪದಾಧಿಕಾರಿಗಳು, ಮುಖಂಡರು, ಅಧಿಕಾರಿಗಳು ಉಪಸ್ಥಿತರಿದ್ದರು.

> ಜನತೆಗೆ ನಾಡಹಬ್ಬ ದಸರಾದ ಶುಭಾಷಯಗಳು. ಕಳೆದ ಎರಡು ವರ್ಷ ಕೋವಿಡ್ ಕಾರಣದಿಂದ ಅದ್ಧೂರಿಯಾಗಿ ಆಚರಣೆ ಮಾಡಿರಲಿಲ್ಲ. ಈ ಬಾರಿ ಪಾರಂಪರಿಕ ವೈಭವ ಮರುಕಳಿಸುವಂತೆ ಅತ್ಯಂತ ಅದ್ಧೂರಿಯಾಗಿ ಆಚರಿಸುತ್ತಿದ್ದೇವೆ. ನಾಡಿನ ಜನತೆ ದಸರೆಗೆ ಬಂದು ಯಶಸ್ವಿಗೊಳಿಸುವುದರೊಂದಿಗೆ ತಾಯಿ ಚಾಮುಂಡೇಶ್ವರಿ ದೇವಿಯ ಆಶೀರ್ವಾದ ಕ್ಕೆ ಪಾತ್ರರಾಗಬೇಕು.
>
> -ಸಿಎಂ ಬಸವರಾಜ ಬೊಮ್ಮಾಯಿ

> **ಬೊಮ್ಮಾಯಿ ಕೊಡುವ ಸಿಎಂ**
>
> ಬಸವರಾಜ್ ಬೊಮ್ಮಾಯಿ ಅವರು ಕೊಟ್ಟಂತಹ ಕಾರ್ಯಕ್ರಮಗಳನ್ನು ಯಾವ ಮುಖ್ಯಮಂತ್ರಿಯೂ ಕೊಟ್ಟಿಲ್ಲ. ಸಾಲದ ವಸೂಲಿಗೆ ರೈತರ ಮನೆ, ಜಮೀನು, ಆಸ್ತಿಯನ್ನು ಜಪ್ತಿ ಮಾಡದಂತೆ ಘೋಷಣೆ ಮಾಡಿದ್ದಾರೆ. ಇದಕ್ಕೆ ಬದ್ಧತೆ, ತಾಕತ್ತು ಇರಬೇಕು. 3 ಲಕ್ಷ ಹೊಸ ರೈತರು ಸೇರಿ 33 ಲಕ್ಷ ರೈತರಿಗೆ 24 ಸಾವಿರ ಕೋಟಿ ರೂ. ಸಾಲವನ್ನು ಶೂನ್ಯ ಬಡ್ಡಿದರದಲ್ಲಿ ವಿತರಿಸಲು ಬಜೆಟ್‌ನಲ್ಲಿ ಘೋಷಣೆ ಮಾಡಿದ್ದಾರೆ. ರೈತ ಪರ ಅಂತ ಹಸಿರು ಶಾಲು ಹಾಕಿಕೊಂಡು ಓಡಾಡುವವರು ಹದಿನೈದು ವರ್ಷದಲ್ಲಿ ಎಷ್ಟು ನೀಡಿದ್ದೀರಿ?. ನಿಮ್ಮ ಸರ್ಕಾರದ ಸಾಧನೆಯನ್ನು ಹೇಳಿ?. ಬಸವರಾಜ್ ಬೊಮ್ಮಾಯಿ ಅವರು ಕೊಡುವ ಮುಖ್ಯಮಂತ್ರಿಗಳೇ ವಿನಃ ತೆಗೆದುಕೊಳ್ಳುವ ಮುಖ್ಯಮಂತ್ರಿಗಳಲ್ಲ. ಬೊಮ್ಮಾಯಿ ಅವರು ಮೃಧು ಸ್ವಭಾವದವರು. ಅವರು ಮಾತನಾಡಲು ಶುರು ಮಾಡಿದರೆ ಕಾಂಗ್ರೆಸ್ ಕತೆ ಬಟಾಬಯಲಾಗುತ್ತದೆ.
>
> -ಎಸ್.ಟಿ.ಸೋಮಶೇಖರ್, ಸಚಿವ

> **ಮತ್ತೆ ನೀವೇ ಸಿಎಂ ಆಗುತ್ತೀರಿ**
>
> ಈ ಸಂಭ್ರಮದ ಸಮಾರಂಭಕ್ಕೆ ಮುಖ್ಯಮಂತ್ರಿಗಳೇ ಕಾರಣ. ಕಿದ್ವಾಯ್ ಕ್ಯಾನ್ಸರ್ ಆಸ್ಪತ್ರೆ ಘಟಕ ಆರಂಭಕ್ಕೆ ಬಜೆಟ್‌ನಲ್ಲಿ 50 ಕೋಟಿ ರೂ. ಮೀಸಲಿಟ್ಟಿದ್ದಾರೆ. ವಿದ್ಯಾರ್ಥಿನಿಲಯಗಳ ನಿರ್ಮಾಣಕ್ಕೆ ಅನುಮೋದನೆ ನೀಡಿದ್ದಾರೆ. ಕೆ.ಆರ್.ಆಸ್ಪತ್ರೆ ನವೀಕರಣಕ್ಕೆ ಈವರೆಗೆ ಯಾರಿಗೂ 5 ಕೋಟಿ ರೂ. ನೀಡಲು ಸಾಧ್ಯವಾಗಿರಲಿಲ್ಲ. ಆದರೆ ಬೊಮ್ಮಾಯಿ ಅವರು 89.95 ಕೋಟಿ ರೂ. ಮಂಜೂರು ಮಾಡಿದ್ದಾರೆ. ಸೂಪರ್‌ಸ್ಪೆಷಾಲಿಟಿ ಆಸ್ಪತ್ರೆ ಸೌಲಭ್ಯಕ್ಕೆ 86 ಕೋಟಿಗಳನ್ನು ಹಿಂದಿನ ಸಿಎಂ ಬಿಎಸ್‌ವೈ ನೀಡಿದ್ದರು. ಬೊಮ್ಮಾಯಿ ಅವರು ಸಿಎಂ ಆಗಿ 2 ತಿಂಗಳಲ್ಲೇ ಚಾಮರಾಜ ಕ್ಷೇತ್ರಕ್ಕೆ 50 ಕೋಟಿ ರೂ. ನೀಡಿದರು. ನಂತರದಲ್ಲಿ ಎಲ್ಲಾ ಶಾಸಕರಿಗೆ ಅನುದಾನ ನೀಡುವಾಗಲೂ ನನಗೆ 50 ಕೋಟಿ ರೂ. ನೀಡಿದರು. ದೇವಸ್ಥಾನಗಳ ಅಭಿವೃದ್ಧಿಗೆ ವಿಶೇಷವಾಗಿ 2 ಕೋಟಿ ರೂ. ಹಂಚ್ಯಾದಲ್ಲಿ 23 ಎಕರೆ ಜಾಗದಲ್ಲಿ 2 ಸಾವಿರಕ್ಕೂ ಹೆಚ್ಚು ಮನೆ ನಿರ್ಮಾಣಕ್ಕೆ ಅನುವು ಮಾಡಿಕೊಟ್ಟರು.
>
> -ಶಾಸಕ ಎಲ್.ನಾಗೇಂದ್ರ

> **ಮೈಸೂರಿಗೆ ಉದಾರ ಅನುದಾನ**
>
> ಬಸವರಾಜ ಬೊಮ್ಮಾಯಿ ಅವರು ನಿಜವಾದ ಭೂತಾಯಿ ಮಗ. ಹಾಗಾಗಿ ರಾಜ್ಯದೆಲ್ಲೆಡೆ ಉತ್ತಮ ಮಳೆಯಾಗಿ ಕೆರೆ–ಕಟ್ಟೆಗಳೆಲ್ಲಾ ಭರ್ತಿಯಾಗಿವೆ. ಇವರು ಯಾವುದೋ ಮದುವೆ, ಬೀಗರದೌತಣಕ್ಕೆ ಬಂದಿಲ್ಲ. ಮೈಸೂರಿನ ಸಾಕಷ್ಟು ಅಭಿವೃದ್ಧಿ ಕಾರ್ಯಗಳಿಗೆ ಉದಾರವಾಗಿ ಅನುದಾನ ನೀಡಿ, ಫಲಾನುಭವಿಗಳಿಗೆ ಸವಲತ್ತು ವಿತರಿಸುವ ಸತ್ಕಾರ್ಯಕ್ಕೆ ಬಂದಿದ್ದಾರೆ. ಮುಂದಿನ ಬಾರಿಯೂ ಬಸವರಾಜ ಬೊಮ್ಮಾಯಿ ಅವರೇ ಮುಖ್ಯಮಂತ್ರಿಯಾಗಬೇಕು. ಎಲ್.ನಾಗೇಂದ್ರ ಅವರೇ ಶಾಸಕರಾಗಿ ಪುನರಾಯ್ಕೆಯಾಗಬೇಕು.
>
> -ಸಂಸದ ಪ್ರತಾಪ್ ಸಿಂಹ

ಶಾಸಕ ನಾಗೇಂದ್ರ ಕಾರ್ಯ ವೈಖರಿಗೆ ಸಿಎಂ ಶ್ಲಾಘನೆ

ಮೈಸೂರು: ಮುಖ್ಯಮಂತ್ರಿ ಬಸವರಾಜು ಬೊಮ್ಮಾಯಿ ಅವರು ಚಾಮರಾಜ ಕ್ಷೇತ್ರದ ಶಾಸಕ ಎಲ್.ನಾಗೇಂದ್ರ ಅವರನ್ನು ಆತ್ಮೀಯ ಸೋದರನೆಂದು ಸಂಬೋಧಿಸಿ, ಅವರ ಕಾರ್ಯ ವೈಖರಿಯನ್ನು ಬಣ್ಣಿಸಿದರು.

ಚಾಮರಾಜ ವಿಧಾನಸಭಾ ಕ್ಷೇತ್ರ ಅತ್ಯಂತ ವೇಗದಲ್ಲಿ ಅಭಿವೃದ್ಧಿ ಪಥದಲ್ಲಿ ಸಾಗಲು ನನ್ನ ಆತ್ಮೀಯ ಸಹೋದರ ಎಲ್.ನಾಗೇಂದ್ರ ಕಾರಣೀಭೂತರು. ಈ ಕ್ಷೇತ್ರವನ್ನು ಅತ್ಯಂತ ದಕ್ಷತೆಯಿಂದ ಸಮರ್ಥವಾಗಿ ಜನಪರ ಕಾಳಜಿಯಿಂದ ಮುನ್ನಡೆಸುತ್ತಿದ್ದಾರೆ. ದಸರಾ ಹಬ್ಬದ ಕೊಡುಗೆಯನ್ನು ಕ್ಷೇತ್ರದ ಜನರಿಗೆ ನೀಡುತ್ತಿದ್ದಾರೆ. ಒಬ್ಬ ಜನಪ್ರತಿನಿಧಿ ಮನಸ್ಸು ಮಾಡಿದರೆ ಕ್ಷೇತ್ರದ ಜನರಿಗೆ ಯಾವ ರೀತಿ ನ್ಯಾಯ ಕೊಡಬಹುದು ಎನ್ನುವುದಕ್ಕೆ ಈ ಸಮಾರಂಭ ಸಾಕ್ಷಿಯಾಗಿದೆ. ನಮ್ಮ ನಾಗೇಂದ್ರ ಬಿಗಿಯಾಗಿ ಹಿಡಿದುಕೊಳ್ಳುವ ಉಡ ಇದ್ದ ಹಾಗೆ. ಹಿಡಿದ ಕೆಲಸವನ್ನು ಉಡದ ರೀತಿ ಬಿಡದೆ ಸಾಧಿಸುವ ಛಲಗಾರ. ಯಾವಾಗ ನನ್ನ ಹತ್ತಿರ ಬಂದು ಸಹಿ ಪಡೆದುಕೊಳ್ಳುತ್ತಾನೆ ಎನ್ನುವುದೇ ತಿಳಿಯುವುದಿಲ್ಲ. ಪಾದರಸದಂತೆ, ಅತ್ಯಂತ ಪ್ರೀತಿ ವಿಶ್ವಾಸದಿಂದ ಕೆಲಸ ಮಾಡುವ ಅಪರೂಪದ ವ್ಯಕ್ತಿ. ಇಂತಹ ಜನಪ್ರತಿನಿಧಿಯನ್ನು ಪಡೆದಿರುವ ನಾವೆಲ್ಲರೂ ಪುಣ್ಯವಂತರು ಎಂದು ಏಕವಚನದಲ್ಲೇ ಆತ್ಮೀಯವಾಗಿ ಪ್ರಶಂಸಿಸಿದರು.

ಮತ್ತೆ ಶಾಸಕರಾಗಲಿ: ಸಚಿವ ಎಸ್.ಟಿ.ಸೋಮಶೇಖರ್ ಹಾಗೂ ಸಂಸದ ಪ್ರತಾಪ್ ಸಿಂಹ, ಶಾಸಕ ಎಲ್.ನಾಗೇಂದ್ರ ಅವರ ಅಭಿವೃದ್ಧಿ ಕಾರ್ಯಕ್ರಮಗಳನ್ನು ಬಣ್ಣಿಸಿ, ಶಾಸಕರಾಗಿ ಪುನರಾಯ್ಕೆಯಾಗಲಿ ಎಂದು ಆಶಿಸಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ದಸರಾ ಅಂಗವಾಗಿ ವಾಹನ ಸಂಚಾರ, ನಿಲುಗಡೆ ವ್ಯವಸ್ಥೆ ನಿರ್ಬಂಧ

ಈ ಬಾರಿಯ ದಸರಾ ಮಹೋತ್ಸವ ಸೆ.26 ರಿಂದ ಅ.5ರವರೆಗೆ ನಡೆಯಲಿದ್ದು, ಈ ಸಂದರ್ಭದಲ್ಲಿ ಮೈಸೂರು ನಗರದಲ್ಲಿ ಸುಗಮ ಸಂಚಾರದ ವ್ಯವಸ್ಥೆಯನ್ನು ಕಲ್ಪಿಸುವ ಸಲುವಾಗಿ ವಾಹನಗಳ ಸಂಚಾರ ಮತ್ತು ವಾಹನಗಳ ನಿಲುಗಡೆ ವ್ಯವಸ್ಥೆಯಲ್ಲಿ ಕೆಲವೊಂದು ನಿರ್ಬಂಧಗಳನ್ನು ವಿಧಿಸಿ, ನಗರ ಪೊಲೀಸ್ ಆಯುಕ್ತ ಡಾ. ಚಂದ್ರಗುಪ್ತ ಆದೇಶ ಹೊರಡಿಸಿದ್ದಾರೆ.

ಸೆ.26 ರಿಂದ ಅ.5ರವರೆಗೆ ಪ್ರತಿ ದಿನ ಸಂಜೆ 4 ರಿಂದ 11 ಗಂಟೆಯವರೆಗೆ ಏಕಮುಖ ಸಂಚಾರ



● **ಅರಮನೆಯ ಸುತ್ತಲಿನ ರಸ್ತೆಗಳಲ್ಲಿ:** ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ – ಕುಸ್ತಿ ಅಖಾಡ ಜಂಕ್ಷನ್ – ಬಿ.ಎನ್.ರಸ್ತೆ – ಜಯಚಾಮರಾಜ ಒಡೆಯರ್ ವೃತ್ತ – ಆಲ್ಬರ್ಟ್ ವಿಕ್ಟರ್ ರಸ್ತೆ – ಚಾಮರಾಜ ಒಡೆಯರ್ ವೃತ್ತ – ನಾಲ್ವಡಿ ಕೃಷ್ಣರಾಜ ಒಡೆಯರ್ ವೃತ್ತ – ನ್ಯೂ ಸಯ್ಯಾಜಿರಾವ್ ರಸ್ತೆ – ಬಸವೇಶ್ವರ ವೃತ್ತ – ಚಾಮರಾಜ ಜೋಡಿ ರಸ್ತೆ – ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ. ಈ ರಸ್ತೆಗಳಲ್ಲಿ ಅರಮನೆಯನ್ನು ಮಧ್ಯ ಬಿಂದುವನ್ನಾಗಿ ಪರಿಗಣಿಸಿ ಗಡಿಯಾರದ ಮುಳ್ಳು ಸುತ್ತುವ ದಿಕ್ಕಿಗೆ ವಿರುದ್ಧ ದಿಕ್ಕಿನಲ್ಲಿ (ಆಂಟಿ ಕ್ಲಾಕ್ ವೈಸ್) ವಾಹನಗಳು ಸಂಚರಿಸಲು ಅವಕಾಶ ನೀಡಲಾಗಿದೆ. ಈ ರಸ್ತೆಗಳಲ್ಲಿ ಗಡಿಯಾರದ ಮುಳ್ಳು ಸುತ್ತುವ ದಿಕ್ಕಿನಲ್ಲಿ (ಕ್ಲಾಕ್ ವೈಸ್) ವಾಹನಗಳ ಸಂಚಾರವನ್ನು ನಿರ್ಬಂಧಿಸಲಾಗಿದೆ. (ಬಸವೇಶ್ವರ ವೃತ್ತದಿಂದ ಪೂರ್ವಕ್ಕೆ ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತದ ವರೆಗಿನ ರಸ್ತೆ ಹೊರತುಪಡಿಸಿ)

● **ನ್ಯೂ ಸಯ್ಯಾಜಿರಾವ್ ರಸ್ತೆ ನಾಲ್ವಡಿ ಕೃಷ್ಣರಾಜ ಒಡೆಯರ್ ವೃತ್ತದಿಂದ ವಿಶ್ವೇಶ್ವರಯ್ಯ ವೃತ್ತ:** ನಾಲ್ವಡಿ ಕೃಷ್ಣರಾಜ ಒಡೆಯರ್ ವೃತ್ತದಿಂದ ನ್ಯೂ ಸಯ್ಯಾಜಿರಾವ್ ರಸ್ತೆಯಲ್ಲಿ ಬರುವಂತಹ ವಾಹನಗಳು – ಬಾಟಾ ಜಂಕ್ಷನ್ – ವಿಶ್ವೇಶ್ವರಯ್ಯ ವೃತ್ತ – ಇರ್ವಿನ್ ರಸ್ತೆ – ನೆಹರು ವೃತ್ತ – ಅಶೋಕ ರಸ್ತೆ – ಮಹಾವೀರ ವೃತ್ತ – ಚಾಮರಾಜ ಒಡೆಯರ್ ವೃತ್ತ – ನಾಲ್ವಡಿ ಕೃಷ್ಣರಾಜ ಒಡೆಯರ್ ವೃತ್ತ ಈ ರಸ್ತೆಗಳ ಮಧ್ಯ ಇರುವ ಪ್ರದೇಶವನ್ನು ಮಧ್ಯ ಬಿಂದುವನ್ನಾಗಿ ಪರಿಗಣಿಸಿ ಗಡಿಯಾರದ ಮುಳ್ಳು ಸುತ್ತುವ ದಿಕ್ಕಿಗೆ (ಕ್ಲಾಕ್ ವೈಸ್) ವಾಹನಗಳು ಸಂಚರಿಸಲು ಅವಕಾಶ ನೀಡಿರುತ್ತದೆ. ಗಡಿಯಾರದ ಮುಳ್ಳು ಸುತ್ತುವ ವಿರುದ್ಧ ದಿಕ್ಕಿನಲ್ಲಿ (ಆಂಟಿ ಕ್ಲಾಕ್ ವೈಸ್) ವಾಹನಗಳು ಸಂಚರಿಸದಂತೆ ನಿರ್ಬಂಧಿಸಲಾಗಿದೆ.

● **ಅಶೋಕ ರಸ್ತೆ:** ದಾವೂದ್‌ಖಾನ್ ರಸ್ತೆ ಜಂಕ್ಷನ್ (ಗಾಂಧಿ ಮೆಡಿಕಲ್ಸ್) ನಿಂದ ನೆಹರು ಸರ್ಕಲ್‌ವರೆಗೆ ದಕ್ಷಿಣಕ್ಕೆ ವಾಹನಗಳ ಏಕಮುಖ ಸಂಚಾರಕ್ಕೆ ಅವಕಾಶ ನೀಡಲಾಗಿದೆ. ಅಶೋಕ ರಸ್ತೆಯಲ್ಲಿ ನೆಹರು ಸರ್ಕಲ್‌ನಿಂದ ದಾವೂದ್‌ಖಾನ್ ರಸ್ತೆ ಜಂಕ್ಷನ್‌ವರೆಗೆ ವಾಹನಗಳ ಸಂಚಾರವನ್ನು ನಿರ್ಬಂಧಿಸಲಾಗಿದೆ.

● **ಬನುಮಯ್ಯ ರಸ್ತೆಯಲ್ಲಿ ಚಾಮರಾಜ ಜೋಡಿ ರಸ್ತೆ ಜಂಕ್ಷನ್‌ನಿಂದ ಬನುಮಯ್ಯ ಚೌಕದವರೆಗೆ:** ಚಾಮರಾಜ ಜೋಡಿ ರಸ್ತೆಯಿಂದ ಬನುಮಯ್ಯ ಚೌಕದವರೆಗೆ ಉತ್ತರಕ್ಕೆ ವಾಹನಗಳ ಏಕಮುಖ ಸಂಚಾರಕ್ಕೆ ಅವಕಾಶ ನೀಡಲಾಗಿದೆ. ಬನುಮಯ್ಯ ಚೌಕದಿಂದ ಚಾಮರಾಜ ಜೋಡಿ ರಸ್ತೆವರೆಗೆ ಉತ್ತರದಿಂದ ದಕ್ಷಿಣಕ್ಕೆ ವಾಹನಗಳ ಸಂಚಾರವನ್ನು ನಿರ್ಬಂಧಿಸಲಾಗಿದೆ.

● **ತ್ಯಾಗರಾಜ ರಸ್ತೆಯಲ್ಲಿ ಎನ್.ಮಾಧವರಾವ್ ವೃತ್ತ (ಅಗ್ರಹಾರ ವೃತ್ತ) ದಿಂದ ಚಾಮರಾಜ ಜೋಡಿ ರಸ್ತೆ ಜಂಕ್ಷನ್‌ವರೆಗೆ:** ಎನ್.ಮಾಧವರಾವ್‌ವೃತ್ತ (ಅಗ್ರಹಾರ ವೃತ್ತ) ದಿಂದ ಉತ್ತರಕ್ಕೆ ತ್ಯಾಗರಾಜ ರಸ್ತೆಯಲ್ಲಿ ಚಾಮರಾಜ ಜೋಡಿ ರಸ್ತೆಯವರೆಗೆ ವಾಹನಗಳ ಏಕಮುಖ ಸಂಚಾರಕ್ಕೆ ಅವಕಾಶ ನೀಡಲಾಗಿದೆ. ಚಾಮರಾಜ ಜೋಡಿ ರಸ್ತೆಯಿಂದ ತ್ಯಾಗರಾಜ ರಸ್ತೆಯಲ್ಲಿ ಎನ್.ಮಾಧವರಾವ್ ವೃತ್ತ (ಅಗ್ರಹಾರ ವೃತ್ತ) ದವರೆಗೆ ದಕ್ಷಿಣಕ್ಕೆ ವಾಹನಗಳ ಸಂಚಾರವನ್ನು ನಿರ್ಬಂಧಿಸಲಾಗಿದೆ.

● **ಲೋಕರಂಜನ್ ರಸ್ತೆಯಲ್ಲಿ ಹಾರ್ಡಿಂಜ್ ವೃತ್ತದಿಂದ ಪೂರ್ವಕ್ಕೆ ಕಾರಂಜಿಕೆರೆ ರಸ್ತೆ ಜಂಕ್ಷನ್ (ಸರ್ಕಸ್ ಮೈದಾನದ ಜಂಕ್ಷನ್) ವರೆಗೆ:** ಹಾರ್ಡಿಂಜ್ ವೃತ್ತದಿಂದ ಲೋಕರಂಜನ್ ರಸ್ತೆಯಲ್ಲಿ ಪೂರ್ವಕ್ಕೆ ಸರ್ಕಸ್ ಮೈದಾನದವರೆಗೆ ವಾಹನಗಳ ಸಂಚಾರವನ್ನು ನಿರ್ಬಂಧಿಸಲಾಗಿದೆ. ಸರ್ಕಸ್ ಮೈದಾನದ ಜಂಕ್ಷನ್‌ನಿಂದ ಪೂರ್ವದಿಂದ ಪಶ್ಚಿಮಕ್ಕೆ ಹಾರ್ಡಿಂಜ್ ವೃತ್ತದವರೆಗೆ ವಾಹನಗಳ ಏಕಮುಖ ಸಂಚಾರಕ್ಕೆ ಅವಕಾಶ ನೀಡಲಾಗಿದೆ

● **ಚಂದ್ರಗುಪ್ತ ರಸ್ತೆಯಲ್ಲಿ ಬಿ.ಎನ್.ರಸ್ತೆ ಜಂಕ್ಷನ್‌ನಿಂದ ಅಶೋಕ ರಸ್ತೆ ಜಂಕ್ಷನ್‌ವರೆಗೆ:** ಚಂದ್ರಗುಪ್ತ ರಸ್ತೆಯಲ್ಲಿ ಬಿ.ಎನ್.ರಸ್ತೆ ಜಂಕ್ಷನ್‌ನಿಂದ ಅಶೋಕ ರಸ್ತೆ ಜಂಕ್ಷನ್‌ವರೆಗೆ ಏಕಮುಖ ಸಂಚಾರ ವ್ಯವಸ್ಥೆ ಹಾಲಿ ಜಾರಿಯಲ್ಲಿದ್ದು, ಸೆ.26 ರಿಂದ ಅ.5ರವರೆಗೆ ಏಕಮುಖ ಸಂಚಾರ ವ್ಯವಸ್ಥೆಯನ್ನು ತಾತ್ಕಾಲಿಕವಾಗಿ ರದ್ದುಗೊಳಿಸಿ ಅಶೋಕ ರಸ್ತೆಯಿಂದ ಬಿ.ಎನ್.ರಸ್ತೆ ಜಂಕ್ಷನ್‌ವರೆಗೆ ಪಶ್ಚಿಮದಿಂದ ಪೂರ್ವ ದಿಕ್ಕಿಗೆ ಏಕಮುಖ ಸಂಚಾರ ವ್ಯವಸ್ಥೆಯನ್ನು ಜಾರಿಗೊಳಿಸಲಾಗಿದೆ.

● **ಮೃಗಾಲಯ ರಸ್ತೆಯಲ್ಲಿ ಚಿರಾಗ್ ಹೋಟೆಲ್ ಜಂಕ್ಷನ್‌ನಿಂದ ಎಫ್.ಕೆ.ಇರಾನಿ ವೃತ್ತದವರೆಗೆ:** ಎಫ್.ಕೆ.ಇರಾನಿ ವೃತ್ತದಿಂದ ಚಿರಾಗ್ ಹೋಟೆಲ್ ಜಂಕ್ಷನ್‌ವರೆಗೆ ಉತ್ತರದಿಂದ ದಕ್ಷಿಣಕ್ಕೆ ವಾಹನಗಳ ಸಂಚಾರವನ್ನು ನಿರ್ಬಂಧಿಸಲಾಗಿದೆ. ಚಿರಾಗ್ ಹೋಟೆಲ್ ಜಂಕ್ಷನ್‌ನಿಂದ ಎಫ್.ಕೆ.ಇರಾನಿ ವೃತ್ತದವರೆಗೆ ದಕ್ಷಿಣದಿಂದ ಉತ್ತರಕ್ಕೆ ವಾಹನಗಳ ಏಕಮುಖ ಸಂಚಾರಕ್ಕೆ ಅವಕಾಶ ನೀಡಲಾಗಿದೆ.

ವಾಹನ ನಿಲುಗಡೆಗೆ ನಿಷೇಧ: ಸೆ.26 ರಿಂದ ಅ.5ರವರೆಗೆ



● ಮೈಸೂರು ಅರಮನೆಯ ಸುತ್ತಲಿನ ರಸ್ತೆಗಳಾದ ಬಿ.ಎನ್.ರಸ್ತೆ, ಎ.ವಿ.ರಸ್ತೆ, ಸಯ್ಯಾಜಿರಾವ್ ರಸ್ತೆ, ಪುರಂದರ ರಸ್ತೆಗಳಲ್ಲಿ ರಸ್ತೆಯ ಎರಡೂ ಬದಿಗಳಲ್ಲಿ ಎಲ್ಲಾ ಮಾದರಿಯ ವಾಹನಗಳ ನಿಲುಗಡೆಯನ್ನು ನಿಷೇಧಿಸಲಾಗಿದೆ.

● ರಮಾವಿಲಾಸ ರಸ್ತೆಯಲ್ಲಿ ಮುಡಾ ಜಂಕ್ಷನ್‌ನಿಂದ ಬನುಮಯ್ಯ ಕಾಲೇಜು ಜಂಕ್ಷನ್‌ವರೆಗೆ ರಸ್ತೆಯ ಎರಡೂ ಬದಿಗಳಲ್ಲಿ ಎಲ್ಲಾ ಮಾದರಿಯ ವಾಹನಗಳ ನಿಲುಗಡೆಯನ್ನು ನಿಷೇಧಿಸಲಾಗಿದೆ (ಕೆಎಸ್.ಆರ್.ಟಿ.ಸಿ ಬಸ್‌ಗಳನ್ನು ಹೊರತುಪಡಿಸಿ)

● ನ್ಯೂ ಸಯ್ಯಾಜಿರಾವ್ ರಸ್ತೆಯಲ್ಲಿ ಬಸವೇಶ್ವರ ವೃತ್ತದಿಂದ ಅಗ್ರಹಾರ ವೃತ್ತದವರೆಗೆ ರಸ್ತೆಯ ಎರಡೂ ಬದಿಗಳಲ್ಲಿ ಎಲ್ಲಾ ಮಾದರಿಯ ವಾಹನಗಳ ನಿಲುಗಡೆಯನ್ನು ನಿಷೇಧಿಸಲಾಗಿದೆ

● ಅಗ್ರಹಾರ ವೃತ್ತದಿಂದ ಸಿದ್ದಪ್ಪ ಚೌಕದವರೆಗೆ ರಸ್ತೆಯ ಎಡಭಾಗದಲ್ಲಿ ಎಲ್ಲಾ ಮಾದರಿಯ ವಾಹನಗಳ ನಿಲುಗಡೆಯನ್ನು ನಿಷೇಧಿಸಲಾಗಿದೆ.

● ಜೆ.ಎಲ್.ಬಿ ರಸ್ತೆಯಲ್ಲಿ ಶ್ರೀನಿವಾಸ ವೃತ್ತದಿಂದ ಎಲೆತೋಟ ಜಂಕ್ಷನ್‌ವರೆಗೆ ರಸ್ತೆಯ ಎರಡೂ ಬದಿಗಳಲ್ಲಿ ಎಲ್ಲಾ ಮಾದರಿಯ ವಾಹನಗಳ ನಿಲುಗಡೆಯನ್ನು ನಿಷೇಧಿಸಲಾಗಿದೆ.

● ರಾಮಸ್ವಾಮಿ ವೃತ್ತದಿಂದ ಸರಸ್ವತಿಪುರಂ ಅಗ್ನಿಶಾಮಕ ಠಾಣೆ ಜಂಕ್ಷನ್‌ವರೆಗಿನ ರಸ್ತೆಯ ಎರಡೂ ಬದಿಗಳಲ್ಲಿ ಎಲ್ಲಾ ಮಾದರಿಯ ವಾಹನಗಳ ನಿಲುಗಡೆಯನ್ನು ನಿಷೇಧಿಸಲಾಗಿದೆ

● ಅಶೋಕ ರಸ್ತೆಯಲ್ಲಿ ಮಿಲಾದ್ ಪಾರ್ಕ್ ಜಂಕ್ಷನ್‌ನಿಂದ ಹರ್ಷ ರಸ್ತೆ ಜಂಕ್ಷನ್‌ವರೆಗೆ ಹಾಗೂ ಗಾಂಧಿಚೌಕದ ಸುತ್ತಲಿನಲ್ಲಿ ರಸ್ತೆಯ ಎರಡೂ ಬದಿಗಳಲ್ಲಿ ಎಲ್ಲಾ ಮಾದರಿಯ ವಾಹನಗಳ ನಿಲುಗಡೆಯನ್ನು ನಿಷೇಧಿಸಲಾಗಿದೆ. (ಕೆಎಸ್‌ಆರ್‌ಟಿಸಿ ಬಸ್‌ಗಳನ್ನು ಹೊರತುಪಡಿಸಿ)

● ಓಲ್ಡ್ ಬ್ಯಾಂಕ್ ರಸ್ತೆಯಲ್ಲಿ ಗಾಂಧಿಚೌಕದಿಂದ ಸಯ್ಯಾಜಿರಾವ್ ರಸ್ತೆ ಜಂಕ್ಷನ್‌ವರೆಗೆ ರಸ್ತೆಯ ಎರಡೂ ಬದಿಗಳಲ್ಲಿ ಎಲ್ಲಾ ಮಾದರಿಯ ವಾಹನಗಳ ನಿಲುಗಡೆಯನ್ನು ನಿಷೇಧಿಸಲಾಗಿದೆ.

● ಚಂದ್ರಗುಪ್ತ ರಸ್ತೆಯಲ್ಲಿ ಅಶೋಕ ರಸ್ತೆ ಜಂಕ್ಷನ್‌ನಿಂದ ಬಿ.ಎನ್ ರಸ್ತೆ ಜಂಕ್ಷನ್‌ವರೆಗೆ ರಸ್ತೆಯ ಎರಡೂ ಬದಿಗಳಲ್ಲಿ ಎಲ್ಲಾ ಮಾದರಿಯ ವಾಹನಗಳ ನಿಲುಗಡೆಯನ್ನು ನಿಷೇಧಿಸಲಾಗಿದೆ.

● ನೆಹರು ವೃತ್ತದಿಂದ (ಮಿನಿ ವಿಧಾನಸೌಧ ರಸ್ತೆ ಮೂಲಕ) ನೇಮಿನಾಥ ಸ್ಟೀಲ್ ಜಂಕ್ಷನ್‌ವರೆಗೆ ರಸ್ತೆಯ ಎರಡೂ ಬದಿಗಳಲ್ಲಿ ಎಲ್ಲಾ ಮಾದರಿಯ ವಾಹನಗಳ ನಿಲುಗಡೆಯನ್ನು ನಿಷೇಧಿಸಲಾಗಿದೆ.

● ಬಿ.ಎನ್ ರಸ್ತೆ, ಹೈದರಾಲಿ ಖಾನ್ ವೃತ್ತ (ಫೈವ್‌ಲೈಟ್ ಸರ್ಕಲ್) ದಿಂದ ಸೆಂಟ್ರಲ್ ಮಾಲ್ (ಛತ್ರಿ ಮರ) ಜಂಕ್ಷನ್‌ವರೆಗೆ ರಸ್ತೆಯ ಎರಡೂ ಬದಿಗಳಲ್ಲಿ ಎಲ್ಲಾ ಮಾದರಿಯ ವಾಹನಗಳ ನಿಲುಗಡೆಯನ್ನು ನಿಷೇಧಿಸಲಾಗಿದೆ.

● ಜೆಕೆಗ್ರೌಂಡ್ ಜಂಕ್ಷನ್‌ನಿಂದ ಟಿ.ಎನ್.ನರಸಿಂಹಮೂರ್ತಿ ವೃತ್ತದವರೆಗೆ ರಸ್ತೆಯ ಎರಡೂ ಬದಿಗಳಲ್ಲಿ ಎಲ್ಲಾ ಮಾದರಿಯ ವಾಹನಗಳ ನಿಲುಗಡೆಯನ್ನು ನಿಷೇಧಿಸಲಾಗಿದೆ

● ಡಾ|| ರಾಜಕುಮಾರ್ ವೃತ್ತ (ಫೌಂಟನ್ ವೃತ್ತ) ದಿಂದ ಬನ್ನಿಮಂಟಪ ರಸ್ತೆ ಮಾರ್ಗವಾಗಿ ನಾಡಪ್ರಭು ಕೆಂಪೇಗೌಡ ವೃತ್ತದವರೆಗೆ ರಸ್ತೆಯ ಎರಡೂ ಬದಿಗಳಲ್ಲಿ ಎಲ್ಲಾ ಮಾದರಿಯ ವಾಹನಗಳ ನಿಲುಗಡೆಯನ್ನು ನಿಷೇಧಿಸಲಾಗಿದೆ

● ಸರ್ಕಾರಿ ಭವನದ ರಸ್ತೆಯಲ್ಲಿ, ಸರ್ಕಾರಿ ಭವನದ ದಕ್ಷಿಣ ದ್ವಾರದ ಜಂಕ್ಷನ್‌ನಿಂದ ದಕ್ಷಿಣಕ್ಕೆ ಜಯಚಾಮರಾಜೇಂದ್ರ ಒಡೆಯರ್ ವೃತ್ತದವರೆಗೆ ರಸ್ತೆಯ ಎರಡೂ ಬದಿಗಳಲ್ಲಿ ಎಲ್ಲಾ ಮಾದರಿಯ ವಾಹನಗಳ ನಿಲುಗಡೆಯನ್ನು ನಿಷೇಧಿಸಲಾಗಿದೆ

● ಲೋಕರಂಜನ್ ರಸ್ತೆಯಲ್ಲಿ ಸರ್ಕಸ್ ಗ್ರೌಂಡ್ ಜಂಕ್ಷನ್‌ನಿಂದ ಹಾರ್ಡಿಂಜ್ ವೃತ್ತದವರೆಗೆ ರಸ್ತೆಯ ಎರಡೂ ಬದಿಗಳಲ್ಲಿ ಎಲ್ಲಾ ಮಾದರಿಯ ವಾಹನಗಳ ನಿಲುಗಡೆಯನ್ನು ನಿಷೇಧಿಸಲಾಗಿದೆ.

● ಹರಿಕೃಷ್ಣ ವೃತ್ತ (ಎಸ್.ಪಿ.ಕಚೇರಿ) ದಿಂದ ಹಳೆ ಬಿಜೆಪಿ ಕಛೇರಿ ಜಂಕ್ಷನ್‌ವರೆಗೆ ರಸ್ತೆಯ ಎರಡೂ ಬದಿಗಳಲ್ಲಿ ಎಲ್ಲಾ ಮಾದರಿಯ ವಾಹನಗಳ ನಿಲುಗಡೆಯನ್ನು ನಿಷೇಧಿಸಲಾಗಿದೆ

● ವಸ್ತು ಪ್ರದರ್ಶನ ಮೈದಾನದ ಮುಂಭಾಗದ ಟ್ಯಾಂಕ್ ಬಂಡ್ ರಸ್ತೆಯಲ್ಲಿ ಬಿ.ಎನ್.ರಸ್ತೆ ಜಂಕ್ಷನ್‌ನಿಂದ ಶಾಲಿವಾಹನ (ಮೃಗಾಲಯದ ರಸ್ತೆ) ರಸ್ತೆ ಜಂಕ್ಷನ್‌ವರೆಗೆ ರಸ್ತೆಯ ಎರಡೂ ಬದಿಗಳಲ್ಲಿ ಎಲ್ಲಾ ಮಾದರಿಯ ವಾಹನಗಳ ನಿಲುಗಡೆಯನ್ನು ನಿಷೇಧಿಸಲಾಗಿದೆ.

● ಇಟ್ಟಿಗೆಗೂಡಿನ 5ನೇ ಕ್ರಾಸ್ ರಸ್ತೆಯಲ್ಲಿ ಶಾಲಿವಾಹನ (ಮೃಗಾಲಯದ ರಸ್ತೆ) ರಸ್ತೆ ಜಂಕ್ಷನ್‌ನಿಂದ ವಸ್ತು ಪ್ರದರ್ಶನ ಮೈದಾನದ ಪೂರ್ವ ದ್ವಾರದವರೆಗೆ ರಸ್ತೆಯ ಎರಡೂ ಬದಿಗಳಲ್ಲಿ ಎಲ್ಲಾ ಮಾದರಿಯ ವಾಹನಗಳ ನಿಲುಗಡೆಯನ್ನು ನಿಷೇಧಿಸಲಾಗಿದೆ.

● ಮಾನಸರ ರಸ್ತೆಯಲ್ಲಿ ಎಂ.ಜಿ.ರಸ್ತೆ ಜಂಕ್ಷನ್‌ನಿಂದ (ಮಾಲ್ ಆಫ್ ಮೈಸೂರು) ಲೋಕರಂಜನ್ ರಸ್ತೆ ಜಂಕ್ಷನ್‌ವರೆಗೆ ರಸ್ತೆಯ ಎರಡೂ ಬದಿಗಳಲ್ಲಿ ಎಲ್ಲಾ ಮಾದರಿಯ ನಿಲುಗಡೆಯನ್ನು ನಿಷೇಧಿಸಲಾಗಿದೆ

● ಮಲೈಮಹದೇಶ್ವರ ರಸ್ತೆಯಲ್ಲಿ ಬಿ.ಎನ್.ರಸ್ತೆ ಜಂಕ್ಷನ್‌ನಿಂದ (ಛತ್ರಿ ಮರ) ಪೂರ್ವಕ್ಕೆ ಚನ್ನಯ್ಯ ವೃತ್ತದವರೆಗೆ ರಸ್ತೆಯ ಎರಡೂ ಬದಿಗಳಲ್ಲಿ ಎಲ್ಲಾ ಮಾದರಿಯ ವಾಹನಗಳ ನಿಲುಗಡೆಯನ್ನು ನಿಷೇಧಿಸಲಾಗಿದೆ.

ವಾಹನ ಸಂಚಾರ ನಿರ್ಬಂಧಿಸಿರುವ ರಸ್ತೆಗಳು

● ಸೆ.26 ರಿಂದ ಅ.3 ರವರೆಗೆ ಮಹಾರಾಜ ಕಾಲೇಜು ಮೈದಾನದಲ್ಲಿ ಯುವ ದಸರಾ ಕಾರ್ಯಕ್ರಮಗಳು ನಡೆಯುವ ಸಮಯದಲ್ಲಿ ಸಂಜೆ 4 ಗಂಟೆಯಿಂದ ರಾತ್ರಿ 11 ಗಂಟೆವರೆಗೆ ಮಹಾರಾಜ ಕಾಲೇಜು ಮೈದಾನದ ಮುಂಭಾಗದಲ್ಲಿರುವ ಕೃಷ್ಣರಾಜ ಬುಲೆವಾರ್ಡ್ ರಸ್ತೆಯಲ್ಲಿ ಏಕಲವ್ಯ ವೃತ್ತದಿಂದ ಕೌಟಿಲ್ಯ ವೃತ್ತದವರೆಗೆ ಎಲ್ಲಾ ಮಾದರಿಯ ವಾಹನಗಳ ಸಂಚಾರವನ್ನು ನಿರ್ಬಂಧಿಸಲಾಗಿದೆ.

ಬದಲಿ ಮಾರ್ಗ: ಕೃಷ್ಣರಾಜ ಬುಲೆವಾರ್ಡ್ ರಸ್ತೆಯಲ್ಲಿ ಏಕಲವ್ಯ ವೃತ್ತದ ಕಡೆಯಿಂದ ಹುಣಸೂರು ರಸ್ತೆಗೆ ಹೋಗುವ ಪ್ರಯಾಣಿಕರು ಸರಸ್ವತಿಪುರಂ ಅಗ್ನಿಶಾಮಕ ಠಾಣೆ, ಸರ್ಕಾರಿ ಮುದ್ರಾಲಯ ಜಂಕ್ಷನ್, ಕಲಾಮಂದಿರ ಜಂಕ್ಷನ್ ಮೂಲಕ ಹುಣಸೂರು ರಸ್ತೆಗೆ ತೆರಳುವುದು.

ಹುಣಸೂರು ರಸ್ತೆಯಿಂದ ಸರಸ್ವತಿಪುರಂ ಕಡೆಗೆ ತೆರಳುವವರು ಕಲಾಮಂದಿರ ಜಂಕ್ಷನ್, ಸರ್ಕಾರಿ ಮುದ್ರಾಲಯ ಜಂಕ್ಷನ್, ಸರಸ್ವತಿಪುರಂ ಅಗ್ನಿಶಾಮಕ ಠಾಣೆ ಮೂಲಕ ತೆರಳುವುದು.

ಸೆ. 26 ರಿಂದ ಅ.3 ರವರೆಗೆ ಪ್ರತಿ ದಿನ ಸಂಜೆ 4 ಗಂಟೆಯಿಂದ ರಾತ್ರಿ 11 ಗಂಟೆಯವರೆಗೆ ಖಾಸಗಿ ಬಸ್‌ಗಳ ಸಂಚಾರದ ಮೇಲಿನ ನಿರ್ಬಂಧ


● **ಟಿ.ನರಸೀಪುರ ಬನ್ನೂರು ಕಡೆಗಳಿಂದ ಮೈಸೂರು ನಗರಕ್ಕೆ ಬರುವ ಖಾಸಗಿ ಬಸ್‌ಗಳು:** ಆರ್.ಮಹದೇವಪ್ಪ ವೃತ್ತ – ರಾಜಕುಮಾರ್ ರಸ್ತೆ – ಉದಯಗಿರಿ ಕೆ.ಇ.ಬಿ ಜಂಕ್ಷನ್ – ಬಲ ತಿರುವು – ಮಹದೇವಪುರ ರಸ್ತೆ – ಮಹದೇವಪುರ ಚೆಕ್‌ಪೋಸ್ಟ್ – ಎಡ ತಿರುವು – ರಿಂಗ್ ರಸ್ತೆ – ಪುಷ್ಪಾಶ್ರಮ ಜಂಕ್ಷನ್ – ನಾಡಪ್ರಭು ಕೆಂಪೇಗೌಡ ವೃತ್ತ – ಎಡ ತಿರುವು – ಬೆಂಗಳೂರು ಮೈಸೂರು ರಸ್ತೆ – ದಂಡಿನ ಮಾರಮ್ಮ ದೇವಸ್ಥಾನ ಜಂಕ್ಷನ್ – ಲಿಂಕ್ ರಸ್ತೆ ಜಂಕ್ಷನ್ – ಬಲ ತಿರುವು – ಟಿ.ಎನ್.ನರಸಿಂಹ ಮೂರ್ತಿ ವೃತ್ತ – ನೆಲ್ಸನ್ ಮಂಡೇಲಾ ರಸ್ತೆ – ಅಬ್ದುಲ್ ಕಲಾಂ ಆಜಾದ್ ವೃತ್ತ – ಸಯ್ಯಾಜಿರಾವ್ ರಸ್ತೆ – ಸುಭಾಷ್‌ಚಂದ್ರ ಬೋಸ್ ವೃತ್ತ – ಖಾಸಗಿ ಬಸ್ ನಿಲ್ದಾಣ.



ನಿರ್ಗಮನ: ಖಾಸಗಿ ಬಸ್ ನಿಲ್ದಾಣ – ಸಯ್ಯಾಜಿರಾವ್ ರಸ್ತೆ – ಸುಭಾಷ್‌ಚಂದ್ರ ಬೋಸ್ ವೃತ್ತ – ಅಬ್ದುಲ್ ಕಲಾಂ ಆಜಾದ್ ವೃತ್ತ – ನೆಲ್ಸನ್ ಮಂಡೇಲಾ ರಸ್ತೆ – ಟಿ.ಎನ್. ನರಸಿಂಹಮೂರ್ತಿ ವೃತ್ತ – ಎಡ ತಿರುವು – ಬೆಂಗಳೂರು ಮೈಸೂರು ರಸ್ತೆ – ಜೆ.ಎಸ್.ಎಸ್ ಡೆಂಟಲ್ ಕಾಲೇಜು ಜಂಕ್ಷನ್ – ನಂದಿ ಬಸಪ್ಪ ಗೋರಿ ಜಂಕ್ಷನ್ – ಟೋಲ್ ಗೇಟ್ ಜಂಕ್ಷನ್ ಎಡ ತಿರುವು – ನಾಡಪ್ರಭು ಕೆಂಪೇಗೌಡ ವೃತ್ತ – ಬಲ ತಿರುವು – ರಿಂಗ್ ರಸ್ತೆ – ಪುಷ್ಪಾಶ್ರಮ ಜಂಕ್ಷನ್ – ಮಹದೇವಪುರ ಚೆಕ್‌ಪೋಸ್ಟ್ ಜಂಕ್ಷನ್ – ಬಲ ತಿರುವು – ಮಹದೇವಪುರ ರಸ್ತೆ – ಉದಯಗಿರಿ ಕೆ.ಇ.ಬಿ ಜಂಕ್ಷನ್ – ಎಡ ತಿರುವು – ರಾಜಕುಮಾರ್ ರಸ್ತೆ – ಆರ್.ಮಹದೇವಪ್ಪ ವೃತ್ತದ ಮೂಲಕ ಮುಂದೆ ಸಾಗುವುದು.

● **ಕೆ.ಆರ್.ಎಸ್.ನಿಂದ ನಗರಕ್ಕೆ ಬರುವ ಮತ್ತು ಹೋಗುವ ಖಾಸಗಿ ಬಸ್‌ಗಳು:** ಕೆಆರ್‌ಎಸ್ ರಸ್ತೆ – ಬಿ.ಸಿ.ಲಿಂಗಯ್ಯ ವೃತ್ತ – ತ.ರಾ.ಸು ವೃತ್ತ – ದಾಸಪ್ಪ ವೃತ್ತ ಮಾರ್ಗವಾಗಿ ಧನ್ವಂತ್ರಿ ರಸ್ತೆ ಪ್ರವೇಶಿಸಿ ಗಾಯತ್ರಿ ಭವನ್ ಜಂಕ್ಷನ್‌ನಲ್ಲಿ ಪ್ರಯಾಣಿಕರನ್ನು ಇಳಿಸುವುದು ಹಾಗೂ ಹತ್ತಿಸಿಕೊಂಡು ಎಡ ತಿರುವು ಜೆ.ಕೆ ಗ್ರೌಂಡ್ ಜಂಕ್ಷನ್‌ನಲ್ಲಿ ಎಡ ತಿರುವು – ಬಾಬು ಜಗಜೀವನರಾಂ ವೃತ್ತ – ಎಡ ತಿರುವು – ಜೆಎಲ್‌ಬಿ ರಸ್ತೆ – ದಾಸಪ್ಪ ವೃತ್ತದಲ್ಲಿ ಬಲ ತಿರುವು ಪಡೆದು ಕೆ.ಆರ್.ಎಸ್. ರಸ್ತೆ ಮೂಲಕ ಮುಂದೆ ಸಾಗುವುದು.

ಜಂಬೂಸವಾರಿಯಂದು ವಾಹನಗಳ ಸಂಚಾರವನ್ನು ನಿರ್ಬಂಧಿಸಿರುವ ರಸ್ತೆಗಳು



● ಅ.5 ರಂದು ಬೆಳಗ್ಗೆ 6 ಗಂಟೆಯಿಂದ ರಾತ್ರಿ 8 ಗಂಟೆವರೆಗೆ ದಸರಾ ಜಂಬೂಸವಾರಿ ಮೆರವಣಿಗೆಯು ಸಾಗುವ ಮಾರ್ಗವಾದ ಅರಮನೆಯ ಬಲರಾಮ ದ್ವಾರ, ಆಲ್ಬರ್ಟ್ ವಿಕ್ಟರ್ ರಸ್ತೆ ಕೆ.ಆರ್.ವೃತ್ತ, ಸಯ್ಯಾಜಿರಾವ್ ರಸ್ತೆ, ಹೈವೇ ವೃತ್ತ, ನೆಲ್ಸನ್ ಮಂಡೇಲಾ ರಸ್ತೆ, ಬನ್ನಿಮಂಟಪದ ಮುಖ್ಯದ್ವಾರದವರೆಗೆ ಎಲ್ಲಾ ಮಾದರಿಯ ವಾಹನಗಳ ಸಂಚಾರವನ್ನು ನಿರ್ಬಂಧಿಸಲಾಗಿದೆ.

● ಬನ್ನಿಮಂಟಪ ಕವಾಯಿತು ಮೈದಾನದ ಉತ್ತರ ಭಾಗದ ರಸ್ತೆಯಲ್ಲಿ ಹನುಮಂತನಗರ ರಸ್ತೆ ಜಂಕ್ಷನ್‌ನಿಂದ ಬೆಂಗಳೂರು ರಸ್ತೆ ಟೋಲ್ ಗೇಟ್ ಜಂಕ್ಷನ್‌ವರೆಗೆ ಎಲ್ಲಾ ಮಾದರಿಯ ವಾಹನಗಳ ಸಂಚಾರವನ್ನು ನಿರ್ಬಂಧಿಸಲಾಗಿದೆ.

● ನಂಜನಗೂಡು ರಸ್ತೆ ಮತ್ತು ಬೆಂಗಳೂರು ರಸ್ತೆ ಮೂಲಕ ಮೈಸೂರು ನಗರಕ್ಕೆ ಆಗಮಿಸಿ ಹೊರ ಹೋಗುವ ಭಾರಿ ಮತ್ತು ಲಘು ಸರಕು ಸಾಗಾಣಿಕೆ ವಾಹನಗಳು ನಗರಕ್ಕೆ ಪ್ರವೇಶಿಸದಂತೆ ನಿರ್ಬಂಧಿಸಲಾಗಿದೆ.

ಅ.4 ಮತ್ತು 5ರಂದು ವಾಹನ ನಿಲುಗಡೆ ನಿಷೇಧ

ಮಹದೇವಪುರ ರಸ್ತೆಯಲ್ಲಿ ಉದಯಗಿರಿ ಜಂಕ್ಷನ್‌ನಿಂದ ನೆಕ್ಸಸ್ ಸೆಂಟರ್ ಸಿಟಿ ಮಾಲ್ ಜಂಕ್ಷನ್ ಮತ್ತು ನೆಕ್ಸಸ್ ಸೆಂಟರ್ ಸಿಟಿ ಮಾಲ್ ಜಂಕ್ಷನ್‌ನಿಂದ ಕಾಳಿಕಾಂಭ ದೇವಸ್ಥಾನ ಜಂಕ್ಷನ್‌ವರೆಗೆ ರಸ್ತೆಯ ಎರಡೂ ಬದಿಗಳಲ್ಲಿ ಎಲ್ಲಾ ಮಾದರಿಯ ವಾಹನಗಳ ನಿಲುಗಡೆಯನ್ನು ನಿಷೇಧಿಸಲಾಗಿದೆ

ಅ.4 ಮತ್ತು 5ರಂದು ಖಾಸಗಿ ಬಸ್‌ಗಳ ಸಂಚಾರದ ಮೇಲಿನ ನಿರ್ಬಂಧ

● **ಟಿ.ನರಸೀಪುರ ಮತ್ತು ಬನ್ನೂರು ಕಡೆಗಳಿಂದ ಮೈಸೂರು ನಗರಕ್ಕೆ ಆಗಮಿಸುವ ಮತ್ತು ನಿರ್ಗಮಿಸುವ ಖಾಸಗಿ ಬಸ್‌ಗಳು:** ಟಿ.ನರಸೀಪುರ ರಸ್ತೆ – ಲಲಿತಮಹಲ್ ರಸ್ತೆ ಜಂಕ್ಷನ್ ಮೂಲಕ ಲಲಿತಮಹಲ್ ರಸ್ತೆ ಪ್ರವೇಶಿಸಿ ಹೋಟೆಲ್ ಲಲಿತಮಹಲ್‌ಗೆ ಹೊಂದಿಕೊಂಡಿರುವ ಮೈದಾನದಲ್ಲಿ ನಿಲುಗಡೆ ಮಾಡಿ ಪ್ರಯಾಣಿಕರನ್ನು ಇಳಿಸಿ / ಹತ್ತಿಸಿಕೊಂಡು ಟಿ.ನರಸೀಪುರ ರಸ್ತೆ– ಲಲಿತಮಹಲ್ ರಸ್ತೆ ಜಂಕ್ಷನ್ – ಮೂಲಕ ಮುಂದೆ ಸಾಗಬೇಕು. (ನಗರದ ಕಡೆಗೆ ಪ್ರವೇಶಿಸುವಂತಿಲ್ಲ.)

● **ಕೆಆರ್‌ಎಸ್‌ನಿಂದ ನಗರಕ್ಕೆ ಬರುವ ಮತ್ತು ಹೋಗುವ ಖಾಸಗಿ ಬಸ್‌ಗಳು:** ಖಾಸಗಿ ಬಸ್‌ಗಳು ದಾಸಪ್ಪ ವೃತ್ತದ ಬಳಿ ಎಡತಿರುವು ಪಡೆದು ಬಾಬು ಜಗಜೀವನ್ ರಾಂ ವೃತ್ತದಲ್ಲಿ ತಿರುವು ಪಡೆದು ದಾಸಪ್ಪ ವೃತ್ತದ ಬಳಿ ನಿಲುಗಡೆ ಮಾಡಿ ಪ್ರಯಾಣಿಕರನ್ನು ಇಳಿಸಿ / ಹತ್ತಿಸಿಕೊಂಡು ಮೆಟ್ರೋಪೋಲ್ ವೃತ್ತದ ಬಳಿ ಬಲ ತಿರುವು ಪಡೆದು ಹುಣಸೂರು ರಸ್ತೆ ಮೂಲಕ ಮುಂದೆ ಸಾಗಬೇಕು.

ಅ.4 ಮತ್ತು 5 ರಂದು ಏಕಮುಖ ವಾಹನ ಸಂಚಾರ ವ್ಯವಸ್ಥೆ

● **ಹಳೆ ಮೈಸೂರು–ಬೆಂಗಳೂರು ರಸ್ತೆಯ ಲಿಂಕ್ ರಸ್ತೆ ಜಂಕ್ಷನ್‌ನಿಂದ ರಾಜೇಂದ್ರನಗರ ರಸ್ತೆ ಶಿವಾಜಿ ರಸ್ತೆ ಮಾರ್ಗವಾಗಿ ಡಾ|| ರಾಜಕುಮಾರ್ ವೃತ್ತ (ಫೌಂಟನ್ ವೃತ್ತ) ದವರೆಗೆ:** ಹಳೆ ಬೆಂಗಳೂರು–ಮೈಸೂರು ರಸ್ತೆ ಮಾರ್ಗವಾಗಿ ಬರುವ ವಾಹನಗಳು ಲಿಂಕ್ ರಸ್ತೆ ಜಂಕ್ಷನ್‌ನಲ್ಲಿ ಎಡ ತಿರುವು ಪಡೆದು ಮೌಲಾನಾ ಅಬ್ದುಲ್ ಕಲಾಂ ಆಜಾದ್ ವೃತ್ತ – ರಾಜೇಂದ್ರನಗರ ಮುಖ್ಯ ರಸ್ತೆ– ರಿಲಯನ್ಸ್ ಫ್ರೆಷ್ ಜಂಕ್ಷನ್ – ಶಿವಾಜಿ ರಸ್ತೆ – ಡಾ|| ರಾಜಕುಮಾರ್ ವೃತ್ತದವರೆಗೆ ವಾಹನಗಳ ಏಕಮುಖ ಸಂಚಾರಕ್ಕೆ ಅವಕಾಶ ನೀಡಲಾಗಿದೆ ಹಾಗೂ ಸದರಿ ಮಾರ್ಗದಲ್ಲಿ ವಿರುದ್ಧ ದಿಕ್ಕಿನಲ್ಲಿ ಬರುವ ಎಲ್ಲಾ ವಾಹನಗಳ ಸಂಚಾರವನ್ನು ನಿರ್ಬಂಧಿಸಲಾಗಿದೆ.



● **ಡಾ|| ರಾಜಕುಮಾರ್ ವೃತ್ತ (ಫೌಂಟನ್ ವೃತ್ತ) ದಿಂದ ಹಳೆ ಮೈಸೂರು–ಬೆಂಗಳೂರು ರಸ್ತೆಯ ಲಿಂಕ್ ರಸ್ತೆ ಜಂಕ್ಷನ್‌ವರೆಗೆ :** ಡಾ|| ರಾಜಕುಮಾರ್ ವೃತ್ತದಿಂದ ಬೆಂಗಳೂರು ರಸ್ತೆ ಕಡೆಗೆ ಸಾಗುವ ವಾಹನಗಳಿಗೆ ಟಿಪ್ಪು ವೃತ್ತದ ಕಡೆಯಿಂದ ಹಳೆ ಮೈಸೂರು–ಬೆಂಗಳೂರು ರಸ್ತೆಯ ಲಿಂಕ್ ರಸ್ತೆ ಜಂಕ್ಷನ್‌ವರೆಗೆ ವಾಹನಗಳ ಏಕಮುಖ ಸಂಚಾರಕ್ಕೆ ಅವಕಾಶ ನೀಡಲಾಗಿದೆ. ಈ ಮಾರ್ಗದಲ್ಲಿ ವಿರುದ್ಧ ದಿಕ್ಕಿನಲ್ಲಿ ಬರುವ ಎಲ್ಲಾ ವಾಹನಗಳ ಸಂಚಾರವನ್ನು ನಿರ್ಬಂಧಿಸಲಾಗಿದೆ.

● **ಟಿ.ಎನ್.ನರಸಿಂಹಮೂರ್ತಿ ವೃತ್ತ (ಎಲ್.ಐ.ಸಿ ವೃತ್ತ) ದಿಂದ ಹಳೇ ಮೈಸೂರು –ಬೆಂಗಳೂರು ರಸ್ತೆಯ ಲಿಂಕ್ ರಸ್ತೆ ಜಂಕ್ಷನ್‌ವರೆಗೆ:** ಟಿ.ಎನ್.ನರಸಿಂಹಮೂರ್ತಿ ವೃತ್ತದಿಂದ ಹಳೆ ಮೈಸೂರು–ಬೆಂಗಳೂರು ರಸ್ತೆಯ ಲಿಂಕ್ ರಸ್ತೆ ಜಂಕ್ಷನ್ ಕಡೆಗೆ ಪೂರ್ವದಿಂದ ಪಶ್ಚಿಮಕ್ಕೆ ವಾಹನಗಳ ಸಂಚಾರವನ್ನು ನಿರ್ಬಂಧಿಸಲಾಗಿದೆ. ಟಿ.ಎನ್.ನರಸಿಂಹಮೂರ್ತಿ ವೃತ್ತ (ಎಲ್.ಐ.ಸಿ ವೃತ್ತ) ದಿಂದ ಲಿಂಕ್ ರಸ್ತೆಯಲ್ಲಿ ಪಶ್ಚಿಮದಿಂದ ಪೂರ್ವಕ್ಕೆ ವಾಹನಗಳ ಏಕಮುಖ ಸಂಚಾರಕ್ಕೆ ಅವಕಾಶ ನೀಡಲಾಗಿದೆ.

ಮೈಸೂರು ದಸರಾ ಮಹೋತ್ಸವದ ಪ್ರಯುಕ್ತ ಸೆ.26ರಿಂದ ಅ.5ವರೆಗೆ ಮೈಸೂರು ನಗರದಲ್ಲಿ ಹೆಚ್ಚುವ ವಾಹನಗಳ ಸಂಚಾರದ ಹಿನ್ನೆಲೆಯಲ್ಲಿ ಸುಗಮ ಸಂಚಾರ ವ್ಯವಸ್ಥೆಯನ್ನು ಕಲ್ಪಿಸುವ ಸಲುವಾಗಿ ಕೆಎಸ್‌ಆರ್‌ಟಿಸಿ, ನಗರ ಸಾರಿಗೆ ಹಾಗೂ ಖಾಸಗಿ ಬಸ್‌ಗಳ ಸಂಚಾರ ಮತ್ತು ವಾಹನಗಳ ನಿಲುಗಡೆ ವ್ಯವಸ್ಥೆಯಲ್ಲಿ ಕೆಲವೊಂದು ನಿರ್ಬಂಧಗಳನ್ನು ವಿಧಿಸಿ ನಗರ ಪೊಲೀಸ್ ಆಯುಕ್ತ ಡಾ.ಚಂದ್ರಗುಪ್ತ ಆದೇಶ ಹೊರಡಿಸಿದ್ದಾರೆ.

ಸೆ.26 ರಿಂದ ಅ.3 ರವರೆಗೆ ಪ್ರತಿದಿನ ಸಂಜೆ 4ರಿಂದ ರಾತ್ರಿ 11 ಗಂಟೆಯವರೆಗೆ

● **ಮೈಸೂರು–ಬೆಂಗಳೂರು ರಸ್ತೆ ಮೂಲಕ ನಗರಕ್ಕೆ ಆಗಮಿಸುವ ಮತ್ತು ನಿರ್ಗಮಿಸುವ ಬಸ್‌ಗಳ ಮಾರ್ಗ:** ಬೆಂಗಳೂರು ರಸ್ತೆ – ನಾಡಪ್ರಭು ಕೆಂಪೇಗೌಡ ವೃತ್ತ– ಎಡ ತಿರುವು – ರಿಂಗ್ ರಸ್ತೆ ಮೂಲಕ ಮಹದೇವಪುರ ರಿಂಗ್ ರಸ್ತೆ ಜಂಕ್ಷನ್ (ಸಾತಗಳ್ಳಿ ಬಸ್ ಡಿಪೋ) – ಮಹದೇವಪುರ ರಸ್ತೆ – ನೆಕ್ಸಸ್ ಸೆಂಟರ್ ಸಿಟಿ ಮಾಲ್ ಜಂಕ್ಷನ್ – ಕಾಳಿಕಾಂಭ ದೇವಸ್ಥಾನ ರಸ್ತೆ ಜಂಕ್ಷನ್ – ಸರ್ಕಾರಿ ಭವನದ ಉತ್ತರ ದ್ವಾರದ ಜಂಕ್ಷನ್– ನವಾಬ್ ಹೈದರಾಲಿ ಖಾನ್ ವೃತ್ತ (ಫೈವ್‌ಲೈಟ್ ಸರ್ಕಲ್) – ಬಿಎನ್ ರಸ್ತೆ– ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣ.



(ಸಿದ್ದಲಿಂಗಪುರ ಬಳಿ ಎಡ ಭಾಗದ ಸರ್ವೀಸ್ ರಸ್ತೆಯಲ್ಲಿ ಏಟ್ರಿಯಂ ಹೋಟೆಲ್ ಮುಂಭಾಗ ಬಂದು ನಾಡಪ್ರಭು ಕೆಂಪೇಗೌಡ ಜಂಕ್ಷನ್‌ನಲ್ಲಿ Free Left Turn ಪಡೆಯುವುದು)

ನಿರ್ಗಮನ: ಕೆಎಸ್.ಆರ್.ಟಿ.ಸಿ ಬಸ್ ನಿಲ್ದಾಣ – ನವಾಬ್ ಹೈದರಾಲಿ ಖಾನ್ ವೃತ್ತ (ಫೈವ್‌ಲೈಟ್ ಸರ್ಕಲ್)– ಸರ್ಕಾರಿ ಭವನದ ಉತ್ತರ ದ್ವಾರದ ಜಂಕ್ಷನ್– ಡಾ|| ಬಿ.ಆರ್.ಅಂಬೇಡ್ಕರ್ ವೃತ್ತ (ಎಫ್.ಟಿ.ಎಸ್)– ಡಾ|| ರಾಜಕುಮಾರ್ ವೃತ್ತ (ಫೌಂಟೆನ್ ಸರ್ಕಲ್)– ಟಿ.ಎನ್.ನರಸಿಂಹಮೂರ್ತಿ ವೃತ್ತ (ಎಲ್.ಐ.ಸಿ ವೃತ್ತ) – ಬನ್ನಿಮಂಟಪ ರಸ್ತೆ– ನಂದಿ ಬಸಪ್ಪ ಗೋರಿ ಜಂಕ್ಷನ್– ಟೋಲ್‌ಗೇಟ್– ನಾಡಪ್ರಭು ಕೆಂಪೇಗೌಡ ವೃತ್ತ– ಬೆಂಗಳೂರು ರಸ್ತೆ ಮೂಲಕ ಮುಂದೆ ಸಾಗುವುದು.

● **ಮಡಿಕೇರಿ, ಹಾಸನ ಕಡೆಯಿಂದ ಹುಣಸೂರು ರಸ್ತೆ ಮೂಲಕ ಮೈಸೂರು ನಗರಕ್ಕೆ ಆಗಮಿಸುವ ಮತ್ತು ನಿರ್ಗಮಿಸುವ ಬಸ್‌ಗಳ ಮಾರ್ಗ:** ಹುಣಸೂರು ರಸ್ತೆ – ಫೀಲ್ಡ್ ಮಾರ್ಷಲ್ ಕಾರ್ಯಪ್ಪ ವೃತ್ತ (ಮೆಟ್ರೋಪೋಲ್ ವೃತ್ತ)– ದಾಸಪ್ಪ ವೃತ್ತ – ಬಾಬು ಜಗಜೀವನರಾಂ ವೃತ್ತ (ರೈಲ್ವೇ ನಿಲ್ದಾಣ ವೃತ್ತ) – ಪುಟ್ಟು ಗೋಪಾಲಕೃಷ್ಣ ಶೆಟ್ಟಿ ವೃತ್ತ (ಜೆ.ಕೆ.ಗ್ರೌಂಡ್) – ಶೇಷಾದ್ರಿ ಅಯ್ಯರ್ ರಸ್ತೆ – ಸುಭಾಷ್‌ಚಂದ್ರ ಭೋಸ್ ವೃತ್ತ (ಆರ್.ಎಂ.ಸಿ) ಅಬ್ದುಲ್ ಕಲಾಂ ಆಜಾದ್ ವೃತ್ತ (ಹೈವೇ ಸರ್ಕಲ್) – ನೆಲ್ಸನ್ ಮಂಡೇಲಾ ವೃತ್ತ– ಟಿ.ಎನ್.ನರಸಿಂಹಮೂರ್ತಿ ವೃತ್ತ (ಎಲ್.ಐ.ಸಿ ವೃತ್ತ) – ಲಿಂಕ್ ರಸ್ತೆ – ಟಿಪ್ಪು ವೃತ್ತ – ಡಾ|| ರಾಜಕುಮಾರ್ ವೃತ್ತ (ಫೌಂಟೆನ್ ವೃತ್ತ) – ಸರ್ಕಾರಿ ಭವನದ ಉತ್ತರ ದ್ವಾರದ ಜಂಕ್ಷನ್ – ನವಾಬ್ ಹೈದರಾಲಿ ಖಾನ್ ವೃತ್ತ (ಫೈವ್‌ಲೈಟ್ ವೃತ್ತ) – ಬಿ.ಎನ್.ರಸ್ತೆ – ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣ

● **ಹೆಚ್.ಡಿ. ಕೋಟೆ ರಸ್ತೆ ಮೂಲಕ ನಗರಕ್ಕೆ ಆಗಮಿಸುವ ಬಸ್‌ಗಳ ಮಾರ್ಗ:** ಮಾನಂದವಾಡಿ ರಸ್ತೆ – ಶ್ರೀನಿವಾಸ ವೃತ್ತ – ಜೆ.ಎಲ್.ಬಿ ರಸ್ತೆ – ಕಂಸಾಳೆ ಮಹದೇವಯ್ಯ ವೃತ್ತ – ಶ್ರೀ ಗಣಪತಿ ಸಚ್ಚಿದಾನಂದ ವೃತ್ತ (ಎಲೆ ತೋಟ) – ರಾಜಹಂಸ ಜಂಕ್ಷನ್ – ಟ್ರಕ್ ಟರ್ಮಿನಲ್ – ಸೋಮಸುಂದರಂ ವೃತ್ತ (ಎಂ.ಆರ್.ಸಿ) – ಮಹಾರಾಣ ಪ್ರತಾಪ ಸಿಂಹ ವೃತ್ತ – ಟ್ಯಾಂಕ್ ಬಂಡ್ ರಸ್ತೆ – ಸರ್ಕಸ್ ಮೈದಾನ ಜಂಕ್ಷನ್– ಲೋಕರಂಜನ್ ರಸ್ತೆ– ಎಸ್.ಲಿಂಗಣ್ಣ ವೃತ್ತ (ಚಿರಾಗ್ ಹೋಟೆಲ್) – ಜಯಚಾಮರಾಜೇಂದ್ರ ಒಡೆಯರ್ ವೃತ್ತ (ಹಾರ್ಡಿಂಜ್ ವೃತ್ತ)– ಬಿ.ಎನ್.ರಸ್ತೆ – ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣ.

ನಿರ್ಗಮನ: ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣ – ನವಾಬ್ ಹೈದರಾಲಿ ಖಾನ್ ವೃತ್ತ (ಫೈವ್ ಲೈಟ್ ವೃತ್ತ)– ಸರ್ಕಾರಿ ಭವನದ ಉತ್ತರ ದ್ವಾರದ ಜಂಕ್ಷನ್– ಕಾಳಿಕಾಂಭ ದೇವಸ್ಥಾನದ ಜಂಕ್ಷನ್ – ಹರಿಕೃಷ್ಣ ವೃತ್ತ (ಎಸ್.ಪಿ.ಕಚೇರಿ ವೃತ್ತ)– ಶಾಂತವೇರಿ ಗೋಪಾಲಗೌಡ ವೃತ್ತ – ಜಿಂಜರ್ ಹೋಟೆಲ್ ಜಂಕ್ಷನ್ – ಟ್ಯಾಂಕ್ ಬಂಡ್ ರಸ್ತೆ – ಮಹಾರಾಣ ಪ್ರತಾಪ ಸಿಂಹ ವೃತ್ತ– ಮಹಾರಾಣ ಪ್ರತಾಪ ಸಿಂಹ ರಸ್ತೆ – ಸಿ.ಎ.ಆರ್ ಕೇಂದ್ರ ಸ್ಥಾನ "ವೈ" ಜಂಕ್ಷನ್ – ಚಾಮಪ್ಪಾಜಿ ರಸ್ತೆ (ರೇಸ್‌ಕೋರ್ಸ್ ಹಿಂಭಾಗದ ರಸ್ತೆ) – ಟ್ರಕ್ ಟರ್ಮಿನಲ್ ರಸ್ತೆ ಜಂಕ್ಷನ್ – ಸತ್ಯ ಹರಿಶ್ಚಂದ್ರ ರಸ್ತೆ – ಶ್ರೀ ಗಣಪತಿ ಸಚ್ಚಿದಾನಂದ ವೃತ್ತ (ಎಲೆ ತೋಟ) – ಎಡ ತಿರುವು– ನಂಜನಗೂಡು ರಸ್ತೆ– ಬಲತಿರುವು–ಜೆ.ಪಿ.ನಗರ ಲಿಂಕ್ ರಸ್ತೆ–ಎಡ ತಿರುವು–ಮಾನಂದವಾಡಿ ರಸ್ತೆ ಮೂಲಕ ಮುಂದೆ ಸಾಗುವುದು.

● **ನಂಜನಗೂಡು, ಚಾಮರಾಜನಗರ ಮತ್ತು ಗುಂಡ್ಲುಪೇಟೆ ಕಡೆಯಿಂದ ನಂಜನಗೂಡು ರಸ್ತೆ ಮೂಲಕ ನಗರಕ್ಕೆ ಆಗಮಿಸುವ ಮತ್ತು ನಿರ್ಗಮಿಸುವ ಬಸ್‌ಗಳ ಮಾರ್ಗ:** ಶ್ರೀ ಗಣಪತಿ ಸಚ್ಚಿದಾನಂದ ವೃತ್ತ (ಎಲೆ ತೋಟ) – ರಾಜಹಂಸ ಜಂಕ್ಷನ್ – ಟ್ರಕ್ ಟರ್ಮಿನಲ್– ಸೋಮಸುಂದರಂ ವೃತ್ತ (ಎಂ.ಆರ್.ಸಿ) – ಮಹಾರಾಣ ಪ್ರತಾಪ ಸಿಂಹ ವೃತ್ತ – ಟ್ಯಾಂಕ್ ಬಂಡ್ ರಸ್ತೆ – ಸರ್ಕಸ್ ಮೈದಾನ ಜಂಕ್ಷನ್ – ಲೋಕರಂಜನ್ ರಸ್ತೆ – ಎಸ್.ಲಿಂಗಣ್ಣ ವೃತ್ತ (ಚಿರಾಗ್) – ಜಯಚಾಮರಾಜೇಂದ್ರ ಒಡೆಯರ್ ವೃತ್ತ (ಹಾರ್ಡಿಂಜ್ ವೃತ್ತ) – ಬಿ.ಎನ್.ರಸ್ತೆ – ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣ.

ನಿರ್ಗಮನ: ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣ– ನವಾಬ್ ಹೈದರಾಲಿ ಖಾನ್ ವೃತ್ತ (ಫೈವ್‌ಲೈಟ್ ವೃತ್ತ)– ಸರ್ಕಾರಿ ಭವನದ ಉತ್ತರ ದ್ವಾರದ ಜಂಕ್ಷನ್– ಕಾಳಿಕಾಂಭ ದೇವಸ್ಥಾನದ ಜಂಕ್ಷನ್– ಹರಿಕೃಷ್ಣ ವೃತ್ತ (ಎಸ್.ಪಿ.ಕಚೇರಿ ವೃತ್ತ)– ಶಾಂತವೇರಿ ಗೋಪಾಲಗೌಡ ವೃತ್ತ– ಜಿಂಜರ್ ಹೋಟೆಲ್ ಜಂಕ್ಷನ್– ಟ್ಯಾಂಕ್ ಬಂಡ್ ರಸ್ತೆ– ಮಹಾರಾಣ ಪ್ರತಾಪ ಸಿಂಹ ವೃತ್ತ– ಮಹಾರಾಣ ಪ್ರತಾಪ ಸಿಂಹ ರಸ್ತೆ– ಸಿ.ಎ.ಆರ್ ಕೇಂದ್ರ ಸ್ಥಾನ "ವೈ" ಜಂಕ್ಷನ್– ಚಾಮಪ್ಪಾಜಿ ರಸ್ತೆ (ರೇಸ್ ಕೋರ್ಸ್ ಹಿಂಭಾಗದ ರಸ್ತೆ)– ಟ್ರಕ್ ಟರ್ಮಿನಲ್ ರಸ್ತೆ ಜಂಕ್ಷನ್– ಸತ್ಯ ಹರಿಶ್ಚಂದ್ರ ರಸ್ತೆ– ಶ್ರೀ ಗಣಪತಿ ಸಚ್ಚಿದಾನಂದ ವೃತ್ತ (ಎಲೆ ತೋಟ)– ನಂಜನಗೂಡು ರಸ್ತೆ– ಮೂಲಕ ಮುಂದೆ ಸಾಗುವುದು.

● **ಟಿ.ನರಸೀಪುರ ರಸ್ತೆ ಕಡೆಯಿಂದ ನಗರಕ್ಕೆ ಆಗಮಿಸುವ ಬಸ್‌ಗಳ ಮಾರ್ಗ:** ಟಿ.ನರಸೀಪುರ ರಸ್ತೆ 'ಟಿ' ಜಂಕ್ಷನ್ – ಲಲಿತಮಹಲ್ ರಸ್ತೆ – ಸಂಗೊಳ್ಳಿ ರಾಯಣ್ಣ ವೃತ್ತ – ಮಹಾರಾಣ ಪ್ರತಾಪ ಸಿಂಹ ವೃತ್ತ – ಟ್ಯಾಂಕ್ ಬಂಡ್ ರಸ್ತೆ – ಸರ್ಕಸ್ ಮೈದಾನ ಜಂಕ್ಷನ್ – ಲೋಕರಂಜನ್ ರಸ್ತೆ – ಎಸ್.ಲಿಂಗಣ್ಣ ವೃತ್ತ (ಚಿರಾಗ್ ಹೋಟೆಲ್) – ಜಯಚಾಮರಾಜೇಂದ್ರ ಒಡೆಯರ್ ವೃತ್ತ (ಹಾರ್ಡಿಂಜ್ ವೃತ್ತ) – ಬಲ ತಿರುವು – ಬಿ.ಎನ್.ರಸ್ತೆ – ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣ.

ನಿರ್ಗಮನ: ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣ – ನವಾಬ್ ಹೈದರಾಲಿ ಖಾನ್ ವೃತ್ತ (ಫೈವ್ ಲೈಟ್) – ಸರ್ಕಾರಿ ಭವನದ ಉತ್ತರದ್ವಾರ – ಕಾಳಿಕಾಂಭ ದೇವಸ್ಥಾನದ ಜಂಕ್ಷನ್ – ಹರಿಕೃಷ್ಣ ವೃತ್ತ (ಎಸ್.ಪಿ.ಕಚೇರಿ ವೃತ್ತ) – ಶಾಂತವೇರಿ ಗೋಪಾಲಗೌಡ ವೃತ್ತ – ಮಲೆ ಮಹದೇಶ್ವರ ರಸ್ತೆ – ಡೈರಿ ಜಂಕ್ಷನ್ – ಆರ್.ಮಹದೇವಪ್ಪ ವೃತ್ತ (ಟೆರಿಷಿಯನ್ ಕಾಲೇಜು) ದಿಂದ ಬಲ ತಿರುವು ಪಡೆದು ಮುಂದೆ ಸಾಗುವುದು.

● **ಬನ್ನೂರು ಮತ್ತು ಮಳವಳ್ಳಿ ರಸ್ತೆ ಕಡೆಯಿಂದ ನಗರಕ್ಕೆ ಆಗಮಿಸುವ ಬಸ್‌ಗಳ ಮಾರ್ಗ:** ಬನ್ನೂರು ಮತ್ತು ಮಳವಳ್ಳಿ ಮೂಲಕ ಆಗಮಿಸುವ ಬಸ್‌ಗಳು ಆರ್.ಮಹದೇವಪ್ಪ ವೃತ್ತ (ಟೆರಿಷಿಯನ್ ಕಾಲೇಜು) – ರಾಜಕುಮಾರ್ ರಸ್ತೆ– ಉದಯಗಿರಿ ಕೆ.ಇ.ಬಿ ಜಂಕ್ಷನ್ – ಮಹದೇವಪುರ ರಸ್ತೆ– ನೆಕ್ಸಸ್ ಸೆಂಟರ್ ಸಿಟಿ ಮಾಲ್ ಜಂಕ್ಷನ್ – ಕಾಳಿಕಾಂಭ ದೇವಸ್ಥಾನ ಜಂಕ್ಷನ್ – ಸರ್ಕಾರಿ ಭವನದ ಉತ್ತರ ದ್ವಾರದ ಜಂಕ್ಷನ್– ನವಾಬ್ ಹೈದರಾಲಿ ಖಾನ್ ವೃತ್ತ (ಫೈವ್ ಲೈಟ್ ವೃತ್ತ) – ಬಿ.ಎನ್.ರಸ್ತೆ – ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣ.

ನಿರ್ಗಮನ ಕೆಎಸ್.ಆರ್‌ಟಿಸಿ ಬಸ್ ನಿಲ್ದಾಣ – ನವಾಬ್ ಹೈದರಾಲಿ ಖಾನ್ ವೃತ್ತ(ಫೈವ್ ಲೈಟ್)– ಸರ್ಕಾರಿ ಭವನದ ಉತ್ತರದ್ವಾರ– ಕಾಳಿಕಾಂಭದೇವಸ್ಥಾನದ ಜಂಕ್ಷನ್ – ನೆಕ್ಸಸ್ ಸೆಂಟರ್ ಸಿಟಿ ಮಾಲ್ ಜಂಕ್ಷನ್– ಮಹದೇವಪುರ ರಸ್ತೆ (ಟೆರಿಷಿಯನ್) – ಉದಯಗಿರಿ ಕೆ.ಇ.ಬಿ ಜಂಕ್ಷನ್– ರಾಜಕುಮಾರ್ ರಸ್ತೆ– ಆರ್.ಮಹದೇವಪ್ಪ ವೃತ್ತದ ಮೂಲಕ ಬನ್ನೂರು ಮತ್ತು ಮಳವಳ್ಳಿ ಕಡೆಗೆ ಸಾಗುವುದು.

ಸೆ.26ರಿಂದ ಅ.4ರವರೆಗೆ ಸಂಜೆ 4ರಿಂದ ರಾತ್ರಿ 11ರವರೆಗೆ ನಗರ ಸಾರಿಗೆ ಬಸ್‌ಗಳು ಸಂಚರಿಸುವ ಮಾರ್ಗ

● **ರಾಮಸ್ವಾಮಿ ವೃತ್ತದ ಕಡೆಯಿಂದ ನಗರ ಬಸ್ ನಿಲ್ದಾಣಕ್ಕೆ ಆಗಮಿಸುವ ಬಸ್‌ಗಳು :** (ಕುವೆಂಪುನಗರ, ಸರಸ್ವತಿಪುರಂ, ರಾಮಕೃಷ್ಣನಗರ, ಬೋಗಾದಿ) ರಾಮಸ್ವಾಮಿ ವೃತ್ತ– ಎಂ.ಎನ್.ಜೋಯಿಸ್ ವೃತ್ತ (ಮುಡಾ) – ರಮಾವಿಲಾಸ ರಸ್ತೆ – ಬನುಮಯ್ಯ ಕಾಲೇಜು ಹತ್ತಿರ ಪ್ರಯಾಣಿಕರನ್ನು ಇಳಿಸಿ/ಹತ್ತಿಸಿಕೊಂಡು ಬಿ.ರಾಚಯ್ಯ ವೃತ್ತ (ಕಾರ್ಪೋರೇಷನ್) – ಬಸವೇಶ್ವರ ವೃತ್ತ– ಎನ್.ಮಾಧವರಾವ್ ವೃತ್ತ (ಅಗ್ರಹಾರ ವೃತ್ತ) – ವಾಣಿವಿಲಾಸ ರಸ್ತೆಯಲ್ಲಿ ಮುಂದುವರೆಯುವುದು.

● **ಕೆ.ಆರ್.ಎಸ್ ರಸ್ತೆ ಕಡೆಯಿಂದ ನಗರ ಬಸ್ ನಿಲ್ದಾಣಕ್ಕೆ ಆಗಮಿಸುವ ಬಸ್‌ಗಳು:** (ಕೆಆರ್.ಎಸ್, ಇಲವಾಲ, ಬೆಳವಾಡಿ, ಕೂರ್ಗಳ್ಳಿ, ಹೂಟಗಳ್ಳಿ) ಕೆ.ಆರ್.ಎಸ್.ರಸ್ತೆ – ದಾಸಪ್ಪ ವೃತ್ತ – ಬಾಬು ಜಗಜೀವನರಾಂ ವೃತ್ತ (ರೈಲ್ವೇ ನಿಲ್ದಾಣ) – ಪುಟ್ಟು ಗೋಪಾಲಕೃಷ್ಣ ಶೆಟ್ಟಿ ವೃತ್ತ (ಜೆ.ಕೆ.ಗ್ರೌಂಡ್) – ಸರ್.ಎಂ.ವಿಶ್ವೇಶ್ವರಯ್ಯ ವೃತ್ತ (ಆಯುರ್ವೇದಿಕ್ ವೃತ್ತ) – ಇರ್ವಿನ್ ರಸ್ತೆ – ನೆಹರು ವೃತ್ತ– ಅಶೋಕ ರಸ್ತೆ – ಮಹಾವೀರ ವೃತ್ತ (ದೊಡ್ಡ ಗಡಿಯಾರ) – ಗಾಂಧಿ ವೃತ್ತದ ಬಳಿ ಪ್ರಯಾಣಿಕರನ್ನು ಇಳಿಸಿ/ಹತ್ತಿಸಿಕೊಂಡು– ಓಲ್ಡ್ ಬ್ಯಾಂಕ್ ರಸ್ತೆ – ಎಸ್.ಆರ್. ರಸ್ತೆ ಜಂಕ್ಷನ್ – ಸರ್.ಎಂ.ವಿಶ್ವೇಶ್ವರಯ್ಯ ವೃತ್ತ (ಆಯುರ್ವೇದಿಕ್ ವೃತ್ತ) – ಎಡ ತಿರುವು ಪಡೆದು ಮುಂದೆ ಸಾಗುವುದು.

● **ನವಾಬ್ ಹೈದರಾಲಿ ಖಾನ್ ವೃತ್ತ (ಫೈವ್ ಲೈಟ್ ಸರ್ಕಲ್) ಕಡೆಯಿಂದ ನಗರ ಬಸ್ ನಿಲ್ದಾಣಕ್ಕೆ ಆಗಮಿಸುವ ಬಸ್‌ಗಳು:** (ಶ್ರೀರಂಗಪಟ್ಟಣ, ಸಿದ್ದಲಿಂಗಪುರ, ಎನ್.ಆರ್.ಮೊಹಲ್ಲಾ, ಉದಯಗಿರಿ, ಕೆಸರೆ, ನಾಯ್ಡುನಗರ) ಸರ್ಕಾರಿ ಭವನ ಉತ್ತರ ದ್ವಾರ – ನವಾಬ್ ಹೈದರಾಲಿ ಖಾನ್ ವೃತ್ತ(ಫೈವ್ ಲೈಟ್) – ದಾವೂದ್ ಖಾನ್ ರಸ್ತೆ– ಅಶೋಕ ರಸ್ತೆ– ನೆಹರು ವೃತ್ತ– ಅಶೋಕ ರಸ್ತೆ– ಮಹಾವೀರ ವೃತ್ತ (ದೊಡ್ಡ ಗಡಿಯಾರ) ಗಾಂಧಿ ವೃತ್ತದ ಬಳಿ ಪ್ರಯಾಣಿಕರನ್ನು ಇಳಿಸಿ/ಹತ್ತಿಸಿಕೊಂಡು ಮಹಾವೀರ ವೃತ್ತ (ದೊಡ್ಡ ಗಡಿಯಾರ) – ಚಂದ್ರಗುಪ್ತ ರಸ್ತೆ – ಬಿ.ಎನ್.ರಸ್ತೆ – ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣ – ನವಾಬ್ ಹೈದರಾಲಿ ಖಾನ್ ವೃತ್ತದ ಕಡೆಯಿಂದ ಮುಂದುವರೆಯುವುದು.

● **ಸಿದ್ದಾರ್ಥನಗರ ಕಡೆಯಿಂದ ಲೋಕರಂಜನ್ ರಸ್ತೆ ಮಾರ್ಗವಾಗಿ ನಗರ ಬಸ್ ನಿಲ್ದಾಣಕ್ಕೆ ಆಗಮಿಸುವ ಬಸ್‌ಗಳು:** (ಚಾಮುಂಡಿ ಬೆಟ್ಟ, ಸಿದ್ದಾರ್ಥ ನಗರ, ಆಲನಹಳ್ಳಿ) ಲೋಕರಂಜನ್ ರಸ್ತೆ– ಎಸ್.ಲಿಂಗಣ್ಣ (ಚಿರಾಗ್ ಹೋಟೆಲ್) ವೃತ್ತ– ಲೋಕರಂಜನ್ ರಸ್ತೆ ಅಂತ್ಯದಲ್ಲಿಯೇ Free Right Turn ಪಡೆದು ಮಿರ್ಜಾ ರಸ್ತೆಯ ಎಡ ಬದಿಯಲ್ಲಿ ಪ್ರಯಾಣಿಕರನ್ನು ಇಳಿಸಿ/ಹತ್ತಿಸಿಕೊಂಡು ಎಫ್.ಕೆ.ಇರಾನಿ ವೃತ್ತ–ಜಿಂಜರ್ ಹೋಟೆಲ್ ಜಂಕ್ಷನ್ ಮೂಲಕ ಮುಂದೆ ಸಾಗುವುದು. (ಜಯಚಾಮರಾಜೇಂದ್ರ ಒಡೆಯರ್ (ಹಾರ್ಡಿಂಜ್) ವೃತ್ತದ ಕಡೆ ಬರುವಂತಿಲ್ಲ)

● **ನಂಜನಗೂಡು ರಸ್ತೆ ಮಾರ್ಗವಾಗಿ ನಗರ ಬಸ್ ನಿಲ್ದಾಣಕ್ಕೆ ಆಗಮಿಸುವ ಬಸ್‌ಗಳು:** (ನಂಜನಗೂಡು, ಕಡಕೊಳ) ನಂಜನಗೂಡು ರಸ್ತೆ – ಜೆಪಿ.ನಗರ ಲಿಂಕ್ ರಸ್ತೆ – ಮಾನಂದವಾಡಿ ರಸ್ತೆ – ಶ್ರೀನಿವಾಸ ವೃತ್ತ – ವೇದಾಂತ ಹೆಮ್ಮಿಗೆ ವೃತ್ತ – ಆರ್.ಟಿ.ಓ ವೃತ್ತ – ರಾಮಸ್ವಾಮಿ ವೃತ್ತ – ಎಂ.ಎನ್. ಜೋಯಿಸ್ ವೃತ್ತ (ಮುಡಾ) – ರಮಾವಿಲಾಸ ರಸ್ತೆ– ಬನುಮಯ್ಯ ಕಾಲೇಜು ಹತ್ತಿರ ಪ್ರಯಾಣಿಕರನ್ನು ಇಳಿಸಿ/ಹತ್ತಿಸಿಕೊಂಡು ಬಿ.ರಾಚಯ್ಯ ವೃತ್ತ (ಕಾರ್ಪೋರೇಷನ್) – ಬಸವೇಶ್ವರ ವೃತ್ತ – ಎನ್.ಮಾಧವರಾವ್ ವೃತ್ತ (ಅಗ್ರಹಾರ ವೃತ್ತ) – ಸಿದ್ದಪ್ಪ ಚೌಕ ಮೂಲಕ ಮುಂದುವರೆಯುವುದು.

ಅ.5 ರಂದು ಬೆಳಗ್ಗೆ 7 ಗಂಟೆಯಿಂದ ರಾತ್ರಿ 9.00 ಗಂಟೆಯವರೆಗೆ ನಗರ ವ್ಯಾಪ್ತಿಯಲ್ಲಿ ನಗರ ಸಾರಿಗೆ ಬಸ್‌ಗಳು ಸಂಚರಿಸುವ ಮಾರ್ಗ ಮತ್ತು ನಿಲುಗಡೆಯ ಸ್ಥಳಗಳು

● ಕುವೆಂಪುನಗರ, ರಾಮಕೃಷ್ಣನಗರ ಹಾಗೂ ಸರಸ್ವತಿಪುರಂ ಕಡೆಯಿಂದ ನಗರಕ್ಕೆ ಆಗಮಿಸುವ / ನಿರ್ಗಮಿಸುವ ನಗರ ಸಾರಿಗೆ ಬಸ್‌ಗಳು ರಾಮಸ್ವಾಮಿ ವೃತ್ತದ ಬಳಿ ನಿಲುಗಡೆ ಮಾಡಿ ಪ್ರಯಾಣಿಕರನ್ನು ಇಳಿಸಿ ಮತ್ತು ಹತ್ತಿಸಿಕೊಂಡು ಮುಂದೆ ಸಾಗಬೇಕು.



● ಜೆ.ಪಿ ನಗರ, ವಿದ್ಯಾರಣ್ಯಪುರಂ, ಶ್ರೀರಾಂಪುರ ಕಡೆಯಿಂದ ನಗರಕ್ಕೆ ಆಗಮಿಸುವ / ನಿರ್ಗಮಿಸುವ ನಗರ ಸಾರಿಗೆ ಬಸ್‌ಗಳು ಎನ್.ಮಾಧವರಾವ್ ವೃತ್ತದ ಬಳಿ ನಿಲುಗಡೆ ಮಾಡಿ ಪ್ರಯಾಣಿಕರನ್ನು ಇಳಿಸಿ ಮತ್ತು ಹತ್ತಿಸಿಕೊಂಡು ಮುಂದೆ ಸಾಗಬೇಕು.

● ಕೆ.ಆರ್.ಎಸ್, ಇಲವಾಲ, ಕೂರ್ಗಳ್ಳಿ ಕಡೆಯಿಂದ ನಗರಕ್ಕೆ ಆಗಮಿಸುವ / ನಿರ್ಗಮಿಸುವ ನಗರ ಸಾರಿಗೆ ಬಸ್‌ಗಳು ದಾಸಪ್ಪ ವೃತ್ತದ ಬಳಿ ನಿಲುಗಡೆ ಮಾಡಿ ಪ್ರಯಾಣಿಕರನ್ನು ಇಳಿಸಿ ಮತ್ತು ಹತ್ತಿಸಿಕೊಂಡು ಮೆಟ್ರೋಪೋಲ್ ವೃತ್ತ, ಹುಣಸೂರು ರಸ್ತೆ ಮೂಲಕ ಮುಂದೆ ಸಾಗಬೇಕು.

● ಎನ್.ಆರ್ ಮೊಹಲ್ಲಾ, ಕೆಸರೆ ಮತ್ತು ಉದಯಗಿರಿ ಕಡೆಯಿಂದ ನಗರಕ್ಕೆ ಆಗಮಿಸುವ / ನಿರ್ಗಮಿಸುವ ನಗರ ಸಾರಿಗೆ ಬಸ್‌ಗಳು ನವಾಬ್ ಹೈದರಾಲಿ ಖಾನ್ ವೃತ್ತದ ಬಳಿ ನಿಲುಗಡೆ ಮಾಡಿ ಪ್ರಯಾಣಿಕರನ್ನು ಇಳಿಸಿ ಮತ್ತು ಹತ್ತಿಸಿಕೊಂಡು ಮುಂದೆ ಸಾಗಬೇಕು.

● ಆಲನಹಳ್ಳಿ, ಪೊಲೀಸ್ ಲೇಔಟ್ ಮತ್ತು ಲಲಿತಾದ್ರಿಪುರ ಕಡೆಯಿಂದ ನಗರಕ್ಕೆ ಆಗಮಿಸುವ / ನಿರ್ಗಮಿಸುವ ನಗರ ಸಾರಿಗೆ ಬಸ್‌ಗಳು ಡೈರಿ ಸರ್ಕಲ್‌ನಲ್ಲಿ ಎಡ ತಿರುವು ಪಡೆದು ವಾಯುವಿಹಾರ ಮಾರ್ಗದಲ್ಲಿ ನಿಲುಗಡೆ ಮಾಡಿ ಪ್ರಯಾಣಿಕರನ್ನು ಇಳಿಸಿ ಮತ್ತು ಹತ್ತಿಸಿಕೊಂಡು ಮುಂದೆ ಸಾಗಬೇಕು.

● ಚಾಮುಂಡಿ ಬೆಟ್ಟದಿಂದ ನಗರಕ್ಕೆ ಆಗಮಿಸುವ / ನಿರ್ಗಮಿಸುವ ನಗರ ಸಾರಿಗೆ ಬಸ್‌ಗಳು ಮಹಾರಾಣಾ ಪ್ರತಾಪ ಸಿಂಹ ವೃತ್ತದ ಬಳಿ ನಿಲುಗಡೆ ಮಾಡಿ ಪ್ರಯಾಣಿಕರನ್ನು ಇಳಿಸಿ ಮತ್ತು ಹತ್ತಿಸಿಕೊಂಡು 'ಯು' ತಿರುವು ಪಡೆದು ಸಂಗೊಳ್ಳಿ ರಾಯಣ್ಣ ವೃತ್ತದ ಕಡೆ ಮುಂದೆ ಸಾಗಬೇಕು.



ಮೈಸೂರಿನ ರಾಮಕೃಷ್ಣ ಆಶ್ರಮಕ್ಕೆ ಭಾನುವಾರ ಭೇಟಿ ನೀಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಆಶ್ರಮದ ಅಧ್ಯಕ್ಷ ಸ್ವಾಮಿ ಮುಕ್ತಿದಾನಂದ ಮಹಾರಾಜ್ ಅವರು ಶಾಲು ಹೊದಿಸಿ, ಆಶೀರ್ವಾದ ಮಾಡಿದರು. ಚಿತ್ರದಲ್ಲಿ ಸಂಸದ ಪ್ರತಾಪ್ ಸಿಂಹ ಇನ್ನಿತರರಿದ್ದಾರೆ.

ದಸರಾ ಕಾರ್ಯಕ್ರಮಗಳ ಪಟ್ಟಿ

26-09-2022 ಸೋಮವಾರ






ಸಮಯ	ಕಾರ್ಯಕ್ರಮ	ಸ್ಥಳ
ಮಧ್ಯಾಹ್ನ 12	ಕೈಗಾರಿಕಾ ವಿಚಾರ ಸಂಕಿರಣ	ವಿಜ್ಞಾನ ಭವನ, ಮೈಸೂರು.
12.30	ಚಲನಚಿತ್ರೋತ್ಸವ	ಕರ್ನಾಟಕ ಕಲಾಮಂದಿರ.
12.30	ಫಲಪುಷ್ಪ ಪ್ರದರ್ಶನ	ಕುಪ್ಪಣ್ಣ ಪಾರ್ಕ್
1 ಗಂಟೆ	ಆಹಾರ ಮೇಳ	ಭಾರತ್ ಸ್ಕೌಟ್ ಮತ್ತು ಗೈಡ್ಸ್ ಮೈದಾನ
3.30	ದಸರಾ ಕುಸ್ತಿ ಪಂದ್ಯಾವಳಿ	ಶ್ರೀ ದೇವರಾಜ ಅರಸು ವಿವಿಧೋದ್ದೇಶ ಕ್ರೀಡಾಂಗಣ
ಸಂಜೆ 4 ಗಂಟೆ	ವಸ್ತುಪ್ರದರ್ಶನ	ವಸ್ತುಪ್ರದರ್ಶನ ಪ್ರಾಧಿಕಾರದ ಆವರಣ
ಸಂಜೆ 5 ಗಂಟೆ	ಯೋಗ ದಸರಾ ನೃತ್ಯ ರೂಪಕ	ಓವಲ್ ಮೈದಾನ
5.30	ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಫಲಪುಷ್ಪ ಪ್ರದರ್ಶನ	ಅರಮನೆ ಆವರಣ
5.30	ರಾಜ್ಯ ಮಟ್ಟದ ಶಿಲ್ಪ ಚಿತ್ರಕಲೆ ಪ್ರದರ್ಶನ	ಕರ್ನಾಟಕ ಕಲಾಮಂದಿರ
6.30	ವಿದ್ಯುತ್ ದೀಪಾಲಂಕಾರ	ಹಸಿರು ಮಂಟಪ, ನ್ಯೂ ಸಯ್ಯಾಜಿರಾವ್ ರಸ್ತೆ

27-09-2022 ಮಂಗಳವಾರ



ಬೆಳಗ್ಗೆ 7.30	ರಂಗೋಲಿ ಚಿತ್ತಾರ	ಅಂಬಾವಿಲಾಸ ಅರಮನೆ ಮುಂಭಾಗ.
8 ಗಂಟೆ	ಯೋಗ ವಾಹಿನಿ	ಜವರೇಗೌಡ ಪಾರ್ಕ್, ಸರಸ್ವತಿಪುರಂ
10 ಗಂಟೆ	ಪುನೀತ್ ಚಲನಚಿತ್ರೋತ್ಸವ	ಐನಾಕ್ಸ್, ಮಾಲ್ ಆಫ್ ಮೈಸೂರ್
11 ಗಂಟೆ	ಮಹಿಳಾ ಉದ್ಯಮಿಗಳು ತಯಾರಿಸಿರುವ ವಸ್ತುಪ್ರದರ್ಶನ	ಜೆ.ಕೆ. ಗ್ರೌಂಡ್ಸ್.
11 ಗಂಟೆ	ವೈದ್ಯಕೀಯ ವಸ್ತುಪ್ರದರ್ಶನ	ಮೈಸೂರು ಮೆಡಿಕಲ್ ಕಾಲೇಜ್
ಸಂಜೆ 6 ಗಂಟೆ	ಯುವ ದಸರಾ	ಮಹಾರಾಜ ಕಾಲೇಜು ಮೈದಾನ.

28-09-2022 ಬುಧವಾರ

ಬೆಳಗ್ಗೆ 6 ಗಂಟೆ	ಯೋಗ ಸಂಭ್ರಮ	ಅರಮನೆ ಆವರಣ.
9.30	ದಸರಾ ದರ್ಶನ	ಕೋಟೆ ಆಂಜನೇಯಸ್ವಾಮಿ ದೇವಸ್ಥಾನ.
11.30	ಕವಿ ಗೋಷ್ಠಿ	ಕರ್ನಾಟಕ ಕಲಾಮಂದಿರ.

29-09-2022 ಗುರುವಾರ

ಬೆಳಗ್ಗೆ 7 ಗಂಟೆ	ಪಾರಂಪರಿಕ ಸೈಕಲ್ ಸವಾರಿ	ಮೈಸೂರು ಪುರಭವನ.
9 ಗಂಟೆ	ಯೋಗಾಸನ ಸ್ಪರ್ಧೆ	ಪಿ. ಕಾಳಿಂಗರಾವ್ ಸಭಾಂಗಣ, ವಸ್ತುಪ್ರದರ್ಶನ ಆವರಣ.
ಬೆಳಗ್ಗೆ 11.30	ಮಕ್ಕಳ ದಸರಾ	ಜಗನ್ಮೋಹನ ಅರಮನೆ.
ಸಂಜೆ 7 ಗಂಟೆ	ಉರ್ದು ಕವಿಗೋಷ್ಠಿ	ಕ್ಲಾಸಿಕ್ ಕನ್ವೆನ್ಷನ್ ಹಾಲ್, ಬೆಂ-ಮೈಸೂರು ರಸ್ತೆ.

30-09-2022 ಶುಕ್ರವಾರ



ಬೆಳಗ್ಗೆ 6 ಗಂಟೆ	ಯೋಗ ಸರಪಳಿ	ಅರಮನೆ ಆವರಣ.
7 ಗಂಟೆಗೆ	ಪಾರಂಪರಿಕ ಟಾಂಗಾ ಸವಾರಿ	ಮೈಸೂರು ಪುರಭವನ.
9 ಗಂಟೆ	ರೈತ ದಸರಾ ಮೆರವಣಿಗೆ	ಕೋಟೆ ಆಂಜನೇಯಸ್ವಾಮಿ ದೇವಸ್ಥಾನ ಆವರಣ.
10.30	ಕೃಷಿ ವಸ್ತುಪ್ರದರ್ಶನ	ಜೆ.ಕೆ. ಗ್ರೌಂಡ್ಸ್.
10.30	ಯುವ ಕವಿಗೋಷ್ಠಿ	ರಾಣಿ ಬಹದ್ದೂರ್ ಸಭಾಂಗಣ
11 ಗಂಟೆ	ರೈತ ದಸರಾ ಸಂವಾದ ಹಾಗೂ ಸನ್ಮಾನ	ಜೆ.ಕೆ. ಅಲ್ಯೂಮಿನಿಯಂ ಅಸೋಸಿಯೇಷನ್ ಸಭಾಭವನ.
ಸಂಜೆ 4ಕ್ಕೆ	ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿ	ಅರಮನೆ ಆವರಣ,

1-10-2022 ಶನಿವಾರ





ಬೆಳಗ್ಗೆ 6 ಗಂಟೆ	ಗ್ರಾಮೀಣ ಯೋಗ	ಶ್ರೀ ನಂಜುಂಡೇಶ್ವರಸ್ವಾಮಿ ದೇವಸ್ಥಾನ, ನಂಜನಗೂಡು.
7 ಗಂಟೆ	ಪಾರಂಪರಿಕ ನಡಿಗೆ	ಮೈಸೂರು ಪುರಭವನ.
10 ಗಂಟೆ	ರೈತದಸರಾ ಕ್ರೀಡಾಕೂಟ	ಓವಲ್ ಗ್ರೌಂಡ್ಸ್.
10.30	ಪ್ರಾದೇಶಿಕ ಕವಿಗೋಷ್ಠಿ	ರಾಣಿ ಬಹದ್ದೂರ್ ಸಭಾಂಗಣ
11 ಗಂಟೆ	ಕರಕುಶಲ ಪ್ರಾತ್ಯಕ್ಷಿಕೆ, ಮಕ್ಕಳ ಚಿತ್ರಕಲಾ ಸ್ಪರ್ಧೆ	ಕರ್ನಾಟಕ ಕಲಾಮಂದಿರ
11 ಗಂಟೆ	ಹಾಲು ಕರೆಯುವ ಸ್ಪರ್ಧೆ	ಜೆ.ಕೆ. ಗ್ರೌಂಡ್.
ಮಧ್ಯಾಹ್ನ 2.30	ಚಿಗುರು ಕವಿಗೋಷ್ಠಿ	ರಾಣಿ ಬಹದ್ದೂರ್ ಸಭಾಂಗಣ.
ಸಂಜೆ 7 ಗಂಟೆ	ಪೊಲೀಸ್ ಸಮೂಹ ವಾದ್ಯವೃಂದ	ಅರಮನೆ ಆವರಣ.

2-10-2022 ಭಾನುವಾರ



ಬೆಳಗ್ಗೆ 10 ಗಂಟೆ	ಮುದ್ದು ಸಾಕುಪ್ರಾಣಿಗಳ ಪ್ರದರ್ಶನ ಸ್ಪರ್ಧೆ	ವಿಶ್ವವಿದ್ಯಾನಿಲಯದ ಹಾಕಿ ಗ್ರೌಂಡ್.

3-10-2022 ಸೋಮವಾರ

ಬೆಳಗ್ಗೆ 6 ಗಂಟೆ	ಯೋಗ ಚಾರಣ	ಚಾಮುಂಡಿಬೆಟ್ಟದ ತಪ್ಪಲು ಮತ್ತು ಚಾಮುಂಡಿಬೆಟ್ಟದ ದೇವಸ್ಥಾನ ಆವರಣ.
ಬೆಳಗ್ಗೆ 10.30	ಪ್ರಧಾನ ಕವಿಗೋಷ್ಠಿ	ಸೆನೆಟ್ ಸಭಾಂಗಣ ಮಾನಸ ಗಂಗೋತ್ರಿ.

ಅರಮನೆ ವೇದಿಕೆಯಲ್ಲಿ ನಡೆಯುವ ಸಾಂಸ್ಕೃತಿಕ ಕಾರ್ಯಕ್ರಮಗಳು







ದಿನಾಂಕ	ಕಾರ್ಯಕ್ರಮ	ಕಲಾವಿದರು
26-09-2022	ನಾದಸ್ವರ	ಯದುನಾಥ್ ಮತ್ತು ಗುರುರಾಜ್ ತಂಡ.
	ವೀರಭದ್ರ ಕುಣಿತ	ಕಿರಾಳು ಮಹೇಶ.
	ನೃತ್ಯರೂಪಕ ಅಮೃತ ಭಾರತಿಗೆ ಕನ್ನಡಾರತಿ	ಸಪ್ತಸ್ವರ ಆರ್ಟ್ಸ್ ಅಂಡ್ ಕ್ರಿಯೇಷನ್ಸ್, ಬೆಂಗಳೂರು.
	ಸುಗಮ ಸಂಗೀತ	ಹೆಚ್.ಆರ್. ಲೀಲಾವತಿ, ಮೈಸೂರು.
27-09-2022	ಕಂಸಾಳೆ	ಕಂಸಾಳೆ ಮಹೇಶ್ ಮತ್ತು ತಂಡ.
	ಭಕ್ತಿ ಸಂಗೀತ	ಇಂದೂ ನಾಗರಾಜ್ ಮತ್ತು ಲಕ್ಷ್ಮೀ ನಾಗರಾಜು ತಂಡ, ಮೈಸೂರು.
	ನೃತ್ಯರೂಪಕ	ಲಲಿತಾರ್ಣವ ಲಯಾಭಿನಯ ಕಲ್ಚರಲ್ ಫೌಂಡೇಷನ್, ಬೆಂಗಳೂರು.
	ಕರ್ನಾಟಕ ಸಂಗೀತ	ವಿದ್ವಾನ್ ಸಂದೀಪ್ ನಾರಾಯಣ್, ಚೆನ್ನೈ.
28-09-2022	ಹಾರ್ಮೋನಿಯಂ	ಕರ್ನಾಟಕ ಕಲಾಶ್ರೀ ವಿದ್ವಾನ್ ಸಿ. ರಾಮದಾಸ್, ಬೆಂಗಳೂರು.
	ದಾಸರ ಪದ	ಪಂಡಿತ್ ಗಣಪತಿ ಭಟ್ ಹಾಸಣಗಿ, ಯಲ್ಲಾಪುರ.
	ಭರತನಾಟ್ಯ	ಕರ್ನಾಟಕ ಕಲಾಶ್ರೀ ಸತ್ಯನಾರಾಯಣರಾಜು ಮತ್ತು ತಂಡ, ಬೆಂಗಳೂರು.
	ತಬಲಾ ವಾದನ	ಉಸ್ತಾದ್ ಫಜಲ್ ಖುರೇಷಿ, ಮುಂಬೈ.
29-09-2022	ಪೊಲೀಸ್ ಬ್ಯಾಂಡ್	ಕರ್ನಾಟಕ್ ಮತ್ತು ಇಂಗ್ಲಿಷ್ ಬ್ಯಾಂಡ್.
	ವಚನ ಗಾಯನ	ಪಂಡಿತ್ ವೆಂಕಟೇಶ್‌ಕುಮಾರ್, ದಾರವಾಡ.
	ಒಡಿಸ್ಸಿ ನೃತ್ಯ	ಮಧುಲಿತ ಮಹೋಪಾತ್ರ ಮತ್ತು ತಂಡ, ಬೆಂಗಳೂರು.
	ವಿಶ್ವ ಸಂಗೀತ (ಕರ್ನಾಟಕ ವಾದ್ಯ ಸಂಗೀತಗಳ ಸಮ್ಮಿಲನ)	ಚಕ್ರ ಫೋನಿಕ್ಸ್ ತಂಡ, ಪಂಡಿತ್ ಪ್ರವೀಣ ಡಿ. ರಾವ್
30-09-2022	ಭಕ್ತಿ ಸಂಗೀತ	ಜ್ಞಾನಮೂರ್ತಿ ಮತ್ತು ತಂಡ, ಕೋಲಾರ.
	ವಾದ್ಯಗಳಲ್ಲಿ ಒಡೆಯರ್ ಕೃತಿಗಳು	ಡಾ. ಸುಕನ್ಯಾ ಪ್ರಭಾಕರ್ ಮತ್ತು ತಂಡ.
	ಕೂಚುಪುಡಿ ನೃತ್ಯ	ಕರ್ನಾಟಕ ಕಲಾಶ್ರೀ ರೂಪಾ ರಾಜೇಶ್ ಮತ್ತು ತಂಡ, ಬೆಂಗಳೂರು.
	ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ	ವಿದುಷಿ ಕೌಶಿಕಿ ಚಕ್ರವರ್ತಿ, ಕೊಲ್ಕತ್ತಾ.
01-10-2022	ಜಾನಪದ ಗಾಯನ	ಪನ್ನಗ ವಿಜಯಕುಮಾರ್, ವೇದವ್ಯಾಸ ಸೇವಾ ಟ್ರಸ್ಟ್, ಮೈಸೂರು.
	ರಂಗ ಗೀತೆಗಳು.	ಟಿ.ಸಿ. ನಾಗಾಭರಣ ಬೆನಕ ತಂಡ, ಬೆಂಗಳೂರು.
	ಪೊಲೀಸ್ ಬ್ಯಾಂಡ್	ಮಾಸ್ ಬ್ಯಾಂಡ್.
	ಸಿತಾರ್ ಸಿಂಫೋನಿ	ಮನೋ ಮ್ಯೂಸಿಕ್ ಲೈನ್ಸ್, ಬೆಂಗಳೂರು.

ದಸರಾ ರಂಗೋತ್ಸವಕ್ಕೆ ಚಾಲನೆ

● 10 ದಿನಗಳ ಕಾಲ ನಡೆಯಲಿರುವ ರಂಗೋತ್ಸವ ● ರಂಗಾಯಣದ ಮೂಲಕ 'ಮೈಸೂರು ರಂಗಭೂಮಿ' ವಿಶ್ವಮಟ್ಟದಲ್ಲಿ ಗುರುತಿಸಿಕೊಂಡಿದೆ

ಮೈಸೂರು, ಸೆ.25(ಎಸ್‌ಪಿಎನ್)– 'ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್' ಅವರ ನೆನಪಿನಾರ್ಥ ಆಯೋಜಿಸಿರುವ 10 ದಿನಗಳ 'ದಸರಾ ರಂಗೋತ್ಸವ'ಕ್ಕೆ ನಾಲ್ವಡಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ, ಭಾನುವಾರ ಅರ್ಥಪೂರ್ಣವಾಗಿ ಚಾಲನೆ ನೀಡಲಾಯಿತು.

ಮೈಸೂರು ರಂಗಾಯಣದ ಭೂಮಿಗೀತಾದಲ್ಲಿ ರಂಗಾಯಣ ವತಿಯಿಂದ ಭಾನುವಾರದಿಂದ ಅ.4ರವರೆಗೆ ನಡೆಯಲಿರುವ ದಸರಾ ರಂಗೋತ್ಸವಕ್ಕೆ ಮೈಸೂರು ಜಿಲ್ಲಾ ಹವ್ಯಾಸಿ ರಂಗಕರ್ಮಿಗಳ ವೇದಿಕೆಯ ಅಧ್ಯಕ್ಷ ಸುರೇಶ್ ಬಾಬು, ರಂಗ ಸಮಾಜದ ಸದಸ್ಯ ಡಾ.ಶೀನ ನಡೋಳಿ, ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ನೇತೃತ್ವದಲ್ಲಿ ಚಾಲನೆ ದೊರಕಿತು.

ನಂತರ ಮೈಸೂರು ಜಿಲ್ಲಾ ಹವ್ಯಾಸಿ ರಂಗಕರ್ಮಿಗಳ ವೇದಿಕೆಯ ಅಧ್ಯಕ್ಷ ಸುರೇಶ್ ಬಾಬು ಮಾತನಾಡಿ, ಮೈಸೂರು ಸಾಂಸ್ಕೃತಿಕ ನಗರಿಯಾಗಿ ಬೆಳೆಯುವುದರ ಜೊತೆಗೆ ಇತರೆ ಕ್ಷೇತ್ರಗಳಲ್ಲೂ ಅಭಿವೃದ್ಧಿ ಹೊಂದಿ ದೇಶಮಟ್ಟದಲ್ಲಿ ಹೆಸರುವಾಸಿಯಾಗಿದೆ. ಟಿವಿ ಮತ್ತು ಚಲನಚಿತ್ರಗಳ ನಡುವೆ ರಂಗಭೂಮಿ ಇಂದಿಗೂ ಪ್ರಸ್ತುತ ಎಂದು ಸಾಬೀತು ಪಡಿಸಿದೆ. ರಂಗಭೂಮಿ ಕೇವಲ ಮಾಧ್ಯಮವಾಗಿ ಉಳಿಯದೇ ಸಮಾಜದ ನೋವು–ನಲಿವು, ಸುಖ–ದುಃಖಗಳನ್ನೊಳಗೊಂಡ ದೃಶ್ಯಾವಳಿಗಳನ್ನು ತನ್ನಲ್ಲಿ ಬಚ್ಚಿಟ್ಟುಕೊಂಡು ರಂಗಾಯಣ ವಿಶ್ವ ರೂಪವಾಗಿ ಬೆಳೆದಿದೆ ಎಂದು ತಿಳಿಸಿದರು.

ಇತ್ತೀಚಿನ ಚಲನಚಿತ್ರಗಳು ಬಿಡುಗಡೆಯಾಗಿ 2–3 ವಾರಗಳು ತೆರೆ ಮೇಲೆ ಕಂಡು ಹಾಗೆ ಮಾಯವಾಗಿ ಬಿಡುತ್ತವೆ. ಆದರೆ, ರಂಗಭೂಮಿಯಲ್ಲಿ 30 ವರ್ಷಗಳ ಹಿಂದಿನ ನಾಟಕ ಇಂದಿಗೂ ಪ್ರಸ್ತುತ. ಇಂದು ಪ್ರದರ್ಶನ ವಾಗುತ್ತಿರುವ ಕೃಷ್ಣೇಗೌಡರ ಆನೆ 30 ವರ್ಷಗಳ ಹಿಂದಿನದು. ನಾನು ಬಿಇಎಂಎಲ್ ಸಂಸ್ಥೆಯಲ್ಲಿ ಉನ್ನತ ಹುದ್ದೆಯಲ್ಲಿದ್ದೇನೆ ಮಾಸಿಕ 2 ಲಕ್ಷಕ್ಕೂ ಹೆಚ್ಚು ಸಂಬಳ ಪಡೆಯುತ್ತಿದ್ದೇವೆ. ಇಂದು ಈ ವೇದಿಕೆಯಲ್ಲಿ ಮಾತನಾಡುತ್ತಿರುವುದು ರಂಗಭೂಮಿಯಲ್ಲಿ ತೊಡಗಿಸಿಕೊಂಡಿದ್ದರಿಂದ ಎಂದರು.

ರಂಗಾಯಣದಲ್ಲಿ ನಡೆಯುವ ಅನೇಕ ನಾಟಕಗಳನ್ನು ನೋಡಿದ್ದೇವೆ. ಡಾ.ಬಿ.ವಿ.ಕಾರಂತರಿಂದ ಅಡ್ಡಂಡ ಸಿ.ಕಾರ್ಯಪ್ಪರವರ ಮೊದಲ್ಗೊಂಡು ಇತರರು ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದಾರೆ. ಅವರವರ ಅವಧಿಯಲ್ಲಿ ರಂಗಾಯಣದ ಅಭಿವೃದ್ಧಿಗೆ ಸಾಕಷ್ಟು ಕೊಡುಗೆ ನೀಡಿದ್ದಾರೆ. ಅದರಲ್ಲೂ ಅಡ್ಡಂಡ ಸಿ.ಕಾರ್ಯಪ್ಪನವರು ನಿರ್ದೇಶಕರಾದ ಮೇಲೆ ರಂಗಭೀಷ್ಮ ಡಾ.ಬಿ.ವಿ.ಕಾರಂತರ ಜೀವಿತಾವಧಿಯಲ್ಲಿ ರಂಗಭೂಮಿಗೆ ನೀಡಿದ ಕೊಡುಗೆ ಹಾಗೂ ರಂಗಾಯಣ ಕಟ್ಟುವಲ್ಲಿ ಅವರ ಪಾತ್ರವನ್ನು ಸ್ಥಿರಗೊಳಿಸುವ ನಿಟ್ಟಿನಲ್ಲಿ ಕೆಲಸ ಮಾಡಿರುವುದು ಅವಿಸ್ಮರಣೀಯ. ಅವರು, ರಂಗಭೂಮಿ ಪ್ರೇಕ್ಷಕರ ಕಣ್ಣಲ್ಲಿ ಅಭಿನಂದನಾರ್ಹರು ಹಾಗೂ ಕ್ರಿಯಾಶೀಲ ನಿರ್ದೇಶಕರೆಂದು ಗುರುತಿಸಿಕೊಂಡಿದ್ದಾರೆ ಎಂದರು.

ನಂತರ ರಂಗಾಯಣ ರೆಪರ್ಟರಿ ತಂಡದ ಕಲಾವಿದರು ಹಿರಿಯ ಸಾಹಿತಿ ಕೆ.ಪಿ.ಪೂರ್ಣಚಂದ್ರತೇಜಸ್ವಿ ರಚಿತ 'ಕೃಷ್ಣೇಗೌಡರ ಆನೆ' ನಾಟಕ ಪ್ರದರ್ಶಿಸಿದರು. ರಂಗಾಯಣ ಪ್ರವೇಶ ದ್ವಾರದಲ್ಲಿ ಪತ್ರಾಗಾರ ಇಲಾಖೆಯ ಸಹಕಾರದೊಂದಿಗೆ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಆಡಳಿತಾವಧಿಯಲ್ಲಿ ಅರಮನೆ ದಸರಾ ಕಾರ್ಯಕ್ರಮದಲ್ಲಿ ಭಾಗವಹಿಸಲು ವಿವಿಧ ಕಲಾವಿದರು, ಬ್ರಿಟಿಷ್ ಅಧಿಕಾರಿಗಳು, ಹಿರಿಯ ಕಲಾವಿದರನ್ನು ಆಹ್ವಾನಿಸಲು ಬರೆದಿದ್ದ ಪತ್ರಗಳು, ಅರಮನೆಯಲ್ಲಿ ನಡೆದ ಲಗ್ನಪತ್ರಿಕೆ ಆಮಂತ್ರಣ ಪತ್ರಗಳ ಪ್ರತಿಗಳನ್ನು ಪ್ರದರ್ಶನಕ್ಕೆ ಏರ್ಪಡಿಸಲಾಗಿತ್ತು. ರಂಗಾಯಣ ಮುಂಭಾಗದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ನೆನಪಿನಾರ್ಥ ಪ್ರದರ್ಶನಗೊಂಡ ಭಾವಚಿತ್ರಗಳನ್ನು ನೋಡಿ ಪ್ರೇಕ್ಷಕರು ಕಣ್ತುಂಬಿಕೊಂಡರು. ಈ ವೇಳೆ ರಂಗಾಯಣ ಉಪನಿರ್ದೇಶಕಿ ನಿರ್ಮಲಾ ಮಠಪತಿ ಹಾಗೂ ಕಿರಿಯ ಕಲಾವಿದರು, ಭಾರತೀಯ ರಂಗ ವಿದ್ಯಾಲಯ ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಸೋಮವಾರ (ಸೆ.26) ಜಿ.ಕೆ.ನಂದಕುಮಾರ್ ನಿರ್ದೇಶನದ 'ಸಮರ ಕಥಾ' ನಾಟಕವನ್ನು ಭಾರತೀಯ ರಂಗವಿದ್ಯಾಲಯ ವಿದ್ಯಾರ್ಥಿಗಳು ಅಭಿನಯಿಸಿರುವ ನಾಟಕ ಪ್ರದರ್ಶನಗೊಳ್ಳಲಿದೆ.




ಮೈಸೂರು ರಂಗಾಯಣದ ಭೂಮಿಗೀತಾದಲ್ಲಿ ರಂಗಾಯಣ ವತಿಯಿಂದ ಭಾನುವಾರದಿಂದ ಅ.4ರವರೆಗೆ ನಡೆಯಲಿರುವ ದಸರಾ ರಂಗೋತ್ಸವಕ್ಕೆ ಮೈಸೂರು ಜಿಲ್ಲಾ ಹವ್ಯಾಸಿ ರಂಗಕರ್ಮಿಗಳ ವೇದಿಕೆಯ ಅಧ್ಯಕ್ಷ ಸುರೇಶ್ ಬಾಬು, ರಂಗ ಸಮಾಜದ ಸದಸ್ಯ ಡಾ.ಶೀನ ನಡೋಳಿ, ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ನೇತೃತ್ವದಲ್ಲಿ ಚಾಲನೆ ದೊರಕಿತು.

> ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ನೆನಪಿನಾರ್ಥ ಹಾಗೂ ದಸರಾ ಮಹೋತ್ಸವ ಅಂಗವಾಗಿ 10 ದಿನಗಳ ಕಾಲ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ಅವರ ನೇತೃತ್ವದಲ್ಲಿ ರಂಗಾಯಣದಲ್ಲಿ ನಡೆಯುತ್ತಿರುವ 'ದಸರಾ ರಂಗೋತ್ಸವ' ಕಾರ್ಯಕ್ರಮ ಯಶಸ್ವಿಗೊಳ್ಳಲಿ.
> -ಡಾ.ಶೀನ ನಡೋಳಿ, ಸದಸ್ಯರು, ರಂಗಸಮಾಜ

ರಂಗಾಯಣದಲ್ಲಿ ನಾನು ಸ್ವಯಂ ಸೇವಕ

ಮೈಸೂರು, ಸೆ.25(ಎಸ್‌ಪಿಎನ್)– ರಂಗಾಯಣ ನಮ್ಮದಲ್ಲ.., ನಿಮ್ಮದು.... ನಾನು ಇಲ್ಲಿ ಸ್ವಯಂ ಸೇವಕ ಮಾತ್ರ ಇಲ್ಲಿನ ಅಧಿಕಾರಿಗಳು ಆಡಳಿತ ನಡೆಸುತ್ತಾರೆ. ಕಲಾವಿದರೂ ನಾಟಕ ಪ್ರದರ್ಶನ ಮಾಡುತ್ತಾರೆ. ನೀವು(ಪ್ರೇಕ್ಷಕರು) ಇಲ್ಲಿಗೆ ಬಂದು ನಾಟಕಗಳನ್ನು ನೋಡಿ, ಪ್ರೋತ್ಸಾಹಿಸುತ್ತಿದ್ದೀರಿ. ಮುಂದೆಯೂ ಇದೇ ರೀತಿ ಪ್ರೋತ್ಸಾಹಿಸುವಂತೆ ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ಮನವಿ ಮಾಡಿದರು.



ಕನ್ನಡ ನಾಡು ಕಟ್ಟಲು ಮೈಸೂರು ಸಂಸ್ಥಾನದ ಕೊಡುಗೆ ಅಪಾರ. ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಆಸ್ಪತ್ರೆ, ಭದ್ರಾವತಿ ಕಾರ್ಖಾನೆ, ಮೈಸೂರು ವಿವಿ ಹಾಗೂ ಕೆಆರ್‌ಎಸ್ ಅಣೆಕಟ್ಟು ಕಟ್ಟಿ ಮೈಸೂರಿಗರ ಕಣ್ಮಣಿಯಾಗಿದ್ದಾರಲ್ಲದೆ, ಕನ್ನಡ ಭಾಷೆಗಾಗಿ ಕನ್ನಡ ಸಾಹಿತ್ಯ ಪರಿಷತ್ ಸ್ಥಾಪಿಸಿ, ಕನ್ನಡದ ಏಳಿಗೆಗೆ ಶ್ರಮಿಸಿರುವ ನಾಲ್ವಡಿ ಅವರ ಫೋಟೋವನ್ನು ನಾವು–ನೀವೆಲ್ಲಾ ಮನೆಯಲ್ಲಿಟ್ಟುಕೊಳ್ಳಬೇಕು. ಈಗಿನ ವಿಧಾನಸಭೆ, ವಿಧಾನಪರಿಷತ್ ಮೈಸೂರು ಒಡೆಯರ್ ಕಲ್ಪನೆ. ಅಂತಹ ಅಪರೂಪದ ವ್ಯಕ್ತಿತ್ವ ಅವರದು ಎಂದು ಭಾವುಕರಾಗಿ ನುಡಿದರು.

ಶ್ರೀ ಜಯ ಚಾಮರಾಜ ಒಡೆಯರ್ ರಚಿತ 'ಕಾಯೋ ಶ್ರೀಗೌರಿ' ಗೀತೆಯನ್ನು ಉದ್ಘಾಟನಾ ಸಂದರ್ಭದಲ್ಲಿ ಹಾಡಲಾಗಿದೆ. ಆ ಸಾಹಿತ್ಯ ಅಷ್ಟೊಂದು ಮನೋಹರವಾಗಿದೆ. ಅಂತಹ ರಾಜ ಮನೆತನದ ಬಗ್ಗೆ ಇಂದಿನ ರಾಜಕಾರಣಿಗಳು ಮಾತನಾಡದೇ ಟಿಪ್ಪು ಸುಲ್ತಾನನ ಬಗ್ಗೆ ಪುಟಗಟ್ಟಲೆ ಮಾತನಾಡುತ್ತಾರೆ. ಟಿಪ್ಪು ವಂಶಸ್ಥರು ಮೈಸೂರು ರಾಜರಾಗಿ ಮುಂದುವರೆದಿದ್ದರೆ, ಈಗಿನ ಮೈಸೂರು, ಮತ್ತೊಂದು ಹೈದ್ರಾಬಾದ್ ಆಗಿ ಮಾರ್ಪಾಡಾಗುತ್ತಿತ್ತು. ಇದನ್ನು ಹೇಳಲಿಕ್ಕೆ ನನಗೆ ಯಾವುದೇ ಹಿಂಜರಿಕೆ ಇಲ್ಲ. ನಾನು ಮೊದಲಿಂದಲೂ ಹೇಳುತ್ತಿದ್ದೇನೆ ಈಗಲೂ ಹೇಳುತ್ತಿದ್ದೇನೆ ಎಂದು ತಿಳಿಸಿದರು.


ದಸರಾ ಮಹೋತ್ಸವ ಸೋಮವಾರದಿಂದ ಆರಂಭವಾಗುತ್ತಿದೆ. ಆದರೆ, ರಂಗಾಯಣದಲ್ಲಿ ಸೆ.19ರಿಂದಲೂ ಆರಂಭವಾಗಿದೆ. ಇಂದಿನಿಂದ ದಸರಾ ರಂಗೋತ್ಸವದ ಪ್ರಯುಕ್ತ 10 ನಾಟಕಗಳ ಪ್ರದರ್ಶನಗೊಳ್ಳಲಿವೆ. ನೀವು ಕುಟುಂಬ ಸಮೇತ ಬಂದು ನಾಟಕಗಳನ್ನು ನೋಡಬೇಕು ಮನವಿ ಮಾಡಿದರು.

ಈ ಹಿಂದೆ ದಸರಾ ಸಂದರ್ಭದಲ್ಲಿ ಪ್ರತಿ ದಿನ ಸಾಧಕರನ್ನು ಕರೆದು ಗೌರವಿಸುತ್ತಿದ್ದರು. ನಾನು ನಿರ್ದೇಶಕನಾಗಿ ಬಂದ ಮೇಲೆ ಓರ್ವ ಹಿರಿಯ ರಂಗಭೂಮಿ ಕಲಾವಿದರನ್ನು ಕರೆಯಿಸಿ ಗೌರವಿಸಲಾಗುತ್ತಿದೆ. ಈ ಬಾರಿ ಹಿರಿಯ ಕಲಾವಿದ ಡಾ.ನರತ್ನ ಅವರನ್ನು ಗೌರವಿಸಲಾಗುತ್ತಿದೆ. ರಂಗಾಯಣ ಆರ್ಥಿಕ ಪರಿಮಿತಿಯಲ್ಲಿ 10 ಸಾವಿರ ನಗದು, 'ರಂಗಗೌರವ' ಪುರಸ್ಕಾರವನ್ನು ಅ.4ರಂದು ನೀಡಲಾಗುತ್ತಿದೆ ಎಂದು ತಿಳಿಸಿದರು.

ದಸರಾ ಪ್ಯಾಕೇಜ್ ಟೂರ್

ಮೈಸೂರು, ಸೆ.25– ಮೈಸೂರು ವಿಭಾಗದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ವತಿಯಿಂದ ದಸರಾ ಮಹೋತ್ಸವದ ಅಂಗವಾಗಿ ಪ್ರತಿ ವರ್ಷದಂತೆ ಈ ವರ್ಷವು ಸಹ ಪ್ರವಾಸಿಗರ ಅನುಕೂಲಕ್ಕಾಗಿ ಮೈಸೂರಿನ ಸುತ್ತಮುತ್ತಲಿನ ಪ್ರೇಕ್ಷಣೀಯ ಸ್ಥಳಗಳನ್ನು ವೀಕ್ಷಿಸಲು ಟೂರ್‌ಗಳ ವ್ಯವಸ್ಥೆಯನ್ನು 2022ರ ಸೆ.25 ರಿಂದ ಅಕ್ಟೋಬರ್ 9 ರವರೆಗೆ ಕಲ್ಪಿಸಲಾಗಿದೆ.

ಕರ್ನಾಟಕ ಸಾರಿಗೆ ವಾಹನ ಮಾದರಿಯ ಪ್ಯಾಕೇಜ್ ಟೂರ್ ಮೂಲಕ ಗಿರಿ ದರ್ಶಿನಿ, ಜಲದರ್ಶಿನಿ, ದೇವ ದರ್ಶಿನಿ ಹಾಗೂ ಐರಾವತ ಕ್ಲಬ್ ಕ್ಲಾಸ್ ವಾಹನ ಮಾದರಿಯ ಪ್ಯಾಕೇಜ್ ಟೂರ್‌ಗಳ ಮೂಲಕ ಮಡಿಕೇರಿ ಪ್ಯಾಕೇಜ್, ಊಟಿ ಪ್ಯಾಕೇಜ್, ಮೈಸೂರು ದರ್ಶಿನಿ (ಸಿಟಿ ವೋಲ್ವೋ) ಮೈಸೂರು ನಗರ ದೀಪಾಲಂಕಾರ ದರ್ಶನ (ಸಿಟಿ ವೋಲ್ವೋ) ದರ್ಶನ ಮಾಡಿಸಲಾಗುವುದು. ಪ್ಯಾಕೇಜ್ ಟೂರ್‌ಗಳಿಗೆ ಪ್ರವಾಸಿಗರಿಗೆ ಮುಂಗಡ ಆಸನ ಕಾಯ್ದಿರಿಸುವ ವ್ಯವಸ್ಥೆಯನ್ನು ಕಲ್ಪಿಸಲಾಗಿದ್ದು, ಮೈಸೂರು ಕೇಂದ್ರೀಯ ಬಸ್ ನಿಲ್ದಾಣ, ಕೆಎಸ್‌ಆರ್‌ಟಿಸಿ ಖಾಸಗಿ ಅವತಾರ್ ಬುಕ್ಕಿಂಗ್ ಕೌಂಟರ್ ಹಾಗೂ ಆನ್‌ಲೈನ್ ವಿಳಾಸ www.ksrtc.in ಮೂಲಕ ಮುಂಗಡ ಆಸನ ಕಾಯ್ದಿರಸಬಹುದು ಎಂದು ಕರ್ನಾಟಕ ರಸ್ತೆ ಸಾರಿಗೆ ನಿಗಮದ ವಿಭಾಗೀಯ ನಿಯಂತ್ರಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಮೈಸೂರು ಜಿಲ್ಲಾ ಕಾಂಗ್ರೆಸ್ ಕಚೇರಿಗೆ ಆಗಮಿಸಿದ ಶಾಸಕ ಪ್ರಿಯಾಂಕ್ ಖರ್ಗೆ ಅವರನ್ನು ಮೈಸೂರು ಜಿಲ್ಲಾ ಯುವ ಕಾಂಗ್ರೆಸ್ ವತಿಯಿಂದ ಸನ್ಮಾನಿಸಲಾಯಿತು. ಕೆಪಿಸಿಸಿ ಕಾರ್ಯದರ್ಶಿ ಹಾಗೂ ನಾಗವಾಲ ಗ್ರಾಪಂ ಅಧ್ಯಕ್ಷ ಸಿ. ನರೇಂದ್ರ, ಮೈಸೂರು ಜಿಲ್ಲೆ ಯುವ ಕಾಂಗ್ರೆಸ್ ಉಪಾಧ್ಯಕ್ಷ ಹಿನಕಲ್ ಮಂಜು, ಜಿಲ್ಲಾ ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಗಳಾದ ಧನಗಳ್ಳಿ ಪ್ರವೀಣ್, ಬಿಳಿಕೆರೆ ಸ್ವಾಮಿ, ಇಲವಾಲ ಬ್ಲಾಕ್ ಯುವ ಕಾಂಗ್ರೆಸ್ ಅಧ್ಯಕ್ಷ ಕಮರಲ್ಲಿ ಸಂತೋಷ್, ಮುಖಂಡರಾದ ಬಂಡಿಪಾಳ್ಯ ವಿಜಯ್ ಕುಮಾರ್, ನಂಜನಗೂಡು ಪ್ರದೀಪ್, ಕೆ.ಜಿ.ಕೊಪ್ಪಲು ಹರ್ಷಗೌಡ, ನಾಗವಾಲ ಗ್ರಾಪಂ ಸದಸ್ಯ ಸೀಗಳ್ಳಿ ಕುಮಾರ್, ಚಾಮುಂಡೇಶ್ವರಿ ಬ್ಲಾಕ್ ಯುವ ಕಾಂಗ್ರೆಸ್ ಉಪಾಧ್ಯಕ್ಷ ದಡದಲ್ಲಿ ನಿಂಗಯ್ಯ, ಪ್ರಧಾನ ಕಾರ್ಯದರ್ಶಿ, ದೊಡ್ಡ ಕಾನ್ಯ ಪ್ರಕಾಶ್, ಎನ್‌ಎಸ್‌ಯುಐ ಕೋಟೆ ಮಣಿ, ಕನ್ನೇನಹಳ್ಳಿ ಅವಿನಾಶ್, ಇನ್ನಿತರರಿದ್ದರು

ಬೃಹತ್ ಸ್ವಚ್ಛತಾ ಕಾರ್ಯಕ್ಕೆ ಚಾಲನೆ



ಮೈಸೂರು, ಸೆ.25(ಎಂಕೆ)– ನಾಡಹಬ್ಬ ಮೈಸೂರು ದಸರಾ–2022ರ ಅಂಗವಾಗಿ ಬೃಹತ್ 'ಸ್ವಚ್ಛತಾ ಕಾರ್ಯ'ಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಭಾನುವಾರ ರಾತ್ರಿ ಚಾಲನೆ ನೀಡಿದರು.

ನಗರದ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಎದುರು ಹಸಿರು ನಿಶಾನೆ ತೋರುವ ಮೂಲಕ ಸ್ವಚ್ಛತೆ ಮತ್ತು ವ್ಯವಸ್ಥೆ ಉಪಸಮಿತಿಯ ಬೃಹತ್ 'ಸ್ವಚ್ಛತಾ ಕಾರ್ಯ'ಕ್ಕೆ ಚಾಲನೆ ನೀಡಿದರು. ದಸರಾ ಹಿನ್ನೆಲೆ ಪಾಲಿಕೆ ವತಿಯಿಂದ ಹೊರಗುತ್ತಿಗೆ ಆಧಾರದ ಮೇಲೆ 330 ಮಂದಿ ಸ್ವಚ್ಛತಾ ಕಾರ್ಮಿಕರನ್ನು ನಿಯೋಜಿಸಲಾಗಿದ್ದು, ರಾತ್ರಿ ವೇಳೆಯೇ ಆಹಾರ ಮೇಳ, ಫಲಪುಷ್ಪ ಪ್ರದರ್ಶನ ಸೇರಿದಂತೆ ನಗರದ ಪ್ರಮುಖ ಸ್ಥಳಗಳಲ್ಲಿ ಸ್ವಚ್ಛತೆ ಮಾಡಲಿದ್ದಾರೆ.

ಶಾಸಕ ಎಸ್.ಎ.ರಾಮದಾಸ್, ಸಂಸದ ಪ್ರತಾಪ್ ಸಿಂಹ, ಮೈಲ್ಯಾಕ್ ಅಧ್ಯಕ್ಷ ರಘು ಕೌಟಿಲ್ಯ, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಬಿಜೆಪಿ ನಗರಾಧ್ಯಕ್ಷ ಶ್ರೀವತ್ಸ ಮತ್ತಿತರರಿದ್ದರು.

ಸಾರ್ವಜನಿಕ ತಿಳುವಳಿಕೆ ಪತ್ರ

ನಮ್ಮ ಕಕ್ಷಿದಾರರು ಬೆಂಗಳೂರು ಸಿಟಿ, ಕೋರಮಂಗಲ, 3ನೇ ಬ್ಲಾಕ್, ಸರ್ವೆ ಆಫ್ ಇಂಡಿಯಾದ ಎದುರು, 16ನೇ 'ಎ' ಮೈನ್, ಮನೆ ನಂ. 567ರಲ್ಲಿ ವಾಸವಾಗಿರುವ ಲೇಟ್ ರಾಬರ್ಟ್ ಕೋಯಿಲೊ ರವರ ಮಕ್ಕಳಾದ ಶ್ರೀಮತಿ ಕಾರ್ಮೆನ್ ಕೋಯಿಲೊ ಮತ್ತು ಶ್ರೀಮತಿ ಡಯಾನಾ ಕೋಯಿಲೊ ಇವರೊಂದಿಗೆ ದಿನಾಂಕ 26-05-2022ರಂದು ಈ ಕೆಳಗೆ ವಿವರಿಸಿದ 'ಎ' ಮತ್ತು 'ಬಿ' ಷೆಡ್ಯೂಲ್ ಆಸ್ತಿಗಳನ್ನು ಖರೀದಿ ಮಾಡಿಕೊಳ್ಳಲು ನೊಂದಾಯಿತ ಒಪ್ಪಂದ ಮಾಡಿಕೊಂಡಿದ್ದು ಈ ಕ್ರಯದ ವ್ಯವಹಾರಕ್ಕೆ ಯಾರದಾದರು ಯಾವುದಾದರು ತಕರಾರು ಅಥವಾ ಈ ಆಸ್ತಿಯ ಬಗ್ಗೆ ಹಕ್ಕು ಬಾಧ್ಯತೆಗಳಿದ್ದಲ್ಲಿ ಈ ತಿಳುವಳಿಕೆ ಪತ್ರ ಪ್ರಕಟವಾದ ಎರಡು ವಾರಗಳ ಒಳಗಾಗಿ ಲಿಖಿತವಾಗಿ ಅದಕ್ಕೆ ಸಂಬಂಧಿಸಿದ ದಾಖಲಾತಿಗಳೊಡನೆ ಈ ಕೆಳಗೆ ಸಹಿ ಮಾಡಿದವರಿಗೆ ಸಲ್ಲಿಸಬಹುದಾಗಿದೆ. ಒಂದು ವೇಳೆ ಯಾವುದೇ ಕಾನೂನಬದ್ಧ ತಕರಾರು ಬರದಿದ್ದಲ್ಲಿ ಈ ವ್ಯವಹಾರಕ್ಕೆ ಯಾರದು ಯಾವ ಆಕ್ಷೇಪಣೆಯೂ ಇಲ್ಲ ಎಂದು ತಿಳಿದು ಕ್ರಯದ ವ್ಯವಹಾರವನ್ನು ಪೂರ್ಣಗೊಳಿಸಲಾಗುವುದು ಮತ್ತು ನಂತರ ಬರುವ ಯಾವ ತಕರಾರಿಗು ನಮ್ಮ ಕಕ್ಷಿದಾರರು ಬಾಧ್ಯರಾಗುವುದಿಲ್ಲ ಎಂದು ತಿಳಿಯುವುದು.

'ಎ' ಷೆಡ್ಯೂಲ್

1) ಮೈಸೂರು ತಾಲ್ಲೂಕು, ವರುಣಾ ಹೋಬಳಿ, ಕೂಡನಹಳ್ಳಿ ಗ್ರಾಮದ ವಸತಿ ಉದ್ದೇಶಕ್ಕೆ ಅನ್ಯಕ್ರಾಂತಗೊಂಡ ಸರ್ವೆ ನಂ. 78/1 ರಲ್ಲಿ 2 ಎಕರೆ 09 ಗುಂಟೆ ಜಮೀನಿಗೆ ಚಕ್ಕುಬಂದಿ:
ಪೂರ್ವಕ್ಕೆ: ಸರ್ವೆ ನಂ. 78/2 ಎ ಮತ್ತು 2ಬಿ ; ಪಶ್ಚಿಮಕ್ಕೆ: ಮದರಗಳ್ಳಿ ಗಡಿ ; ಉತ್ತರಕ್ಕೆ: ಸರ್ವೆ ನಂ. 79 ; ದಕ್ಷಿಣಕ್ಕೆ: ಸರ್ವೆ ನಂ. 77.

2) ಮೈಸೂರು ತಾಲ್ಲೂಕು ವರುಣಾ ಹೋಬಳಿ, ಕೂಡನಹಳ್ಳಿ ಗ್ರಾಮದ ವಸತಿ ಉದ್ದೇಶಕ್ಕೆ ಅನ್ಯಕ್ರಾಂತಗೊಂಡ ಸರ್ವೆ ನಂ. 78/2 ಎ ರಲ್ಲಿ 1 ಎಕರೆ 04 ಗುಂಟೆ ಜಮೀನಿಗೆ ಚಕ್ಕುಬಂದಿ:
ಪೂರ್ವಕ್ಕೆ: ಸರ್ವೆ ನಂ. 81 ; ಪಶ್ಚಿಮಕ್ಕೆ: ಮದರಗಳ್ಳಿ ಗಡಿ ; ಉತ್ತರಕ್ಕೆ: ಸರ್ವೆ ನಂ. 78/2ಬಿ ; ದಕ್ಷಿಣಕ್ಕೆ: ಸರ್ವೆ ನಂ. 77.

3) ಮೈಸೂರು ತಾಲ್ಲೂಕು, ವರುಣಾ ಹೋಬಳಿ, ಕೂಡನಹಳ್ಳಿ ಗ್ರಾಮದ ವಸತಿ ಉದ್ದೇಶಕ್ಕೆ ಅನ್ಯಕ್ರಾಂತಗೊಂಡ ಸರ್ವೆ ನಂ. 78/2ಬಿ ರಲ್ಲಿ 29 ಗುಂಟೆ ಜಮೀನಿಗೆ ಚಕ್ಕುಬಂದಿ: ಪೂರ್ವಕ್ಕೆ: ಸರ್ವೆ ನಂ. 81 ; ಪಶ್ಚಿಮಕ್ಕೆ: ಸರ್ವೆ ನಂ. 78/1 ; ಉತ್ತರಕ್ಕೆ: ಸರ್ವೆ ನಂ. 79 ; ದಕ್ಷಿಣಕ್ಕೆ: ಸರ್ವೆ ನಂ. 77.

4) ಮೈಸೂರು ತಾಲ್ಲೂಕು, ವರುಣಾ ಹೋಬಳಿ, ಕೂಡನಹಳ್ಳಿ ಗ್ರಾಮದ ವಸತಿ ಉದ್ದೇಶಕ್ಕೆ ಅನ್ಯಕ್ರಾಂತಗೊಂಡ ಸರ್ವೆ ನಂ. 79/1 ರಲ್ಲಿ 2 ಎಕರೆ 17 ಗುಂಟೆ ಜಮೀನಿಗೆ ಚಕ್ಕುಬಂದಿ:
ಪೂರ್ವಕ್ಕೆ: ಸರ್ವೆ ನಂ. 79/2 ; ಪಶ್ಚಿಮಕ್ಕೆ: ಮದರಗಳ್ಳಿ ಗಡಿ ; ಉತ್ತರಕ್ಕೆ: ಸರ್ವೆ ನಂ. 80 ; ದಕ್ಷಿಣಕ್ಕೆ: ಸರ್ವೆ ನಂ. 78.

5) ಮೈಸೂರು ತಾಲ್ಲೂಕು, ವರುಣಾ ಹೋಬಳಿ, ಕೂಡನಹಳ್ಳಿ ಗ್ರಾಮದ ವಸತಿ ಉದ್ದೇಶಕ್ಕೆ ಅನ್ಯಕ್ರಾಂತಗೊಂಡ ಸರ್ವೆ ನಂ. 79/2 ರಲ್ಲಿ 39 ಗುಂಟೆ ಜಮೀನಿಗೆ ಚಕ್ಕುಬಂದಿ: ಪೂರ್ವಕ್ಕೆ: ಸರ್ವೆ ನಂ. 81 ; ಪಶ್ಚಿಮಕ್ಕೆ: ಸರ್ವೆ ನಂ. 78/1 ; ಉತ್ತರಕ್ಕೆ: ಸರ್ವೆ ನಂ. 80 ; ದಕ್ಷಿಣಕ್ಕೆ: ಸರ್ವೆ ನಂ. 78.

'ಬಿ' ಷೆಡ್ಯೂಲ್

1) ಮೈಸೂರು ತಾಲ್ಲೂಕು, ವರುಣಾ ಹೋಬಳಿ, ಕೂಡನಹಳ್ಳಿ ಗ್ರಾಮದ ವಸತಿ ಉದ್ದೇಶಕ್ಕೆ ಅನ್ಯಕ್ರಾಂತಗೊಂಡ ಸರ್ವೆ ನಂ. 80/1ಎ ರಲ್ಲಿ 1 ಎಕರೆ 26 ಗುಂಟೆ ಜಮೀನಿಗೆ ಚಕ್ಕುಬಂದಿ:
ಪೂರ್ವಕ್ಕೆ: ಸರ್ವೆ ನಂ. 80/1 ; ಪಶ್ಚಿಮಕ್ಕೆ: ಮದರಗಳ್ಳಿ ಗಡಿ ; ಉತ್ತರಕ್ಕೆ: ಮದರಗಳ್ಳಿ ಗಡಿ ; ದಕ್ಷಿಣಕ್ಕೆ: ಸರ್ವೆ ನಂ. 80/2.

2) ಮೈಸೂರು ತಾಲ್ಲೂಕು, ವರುಣಾ ಹೋಬಳಿ, ಕೂಡನಹಳ್ಳಿ ಗ್ರಾಮದ ವಸತಿ ಉದ್ದೇಶಕ್ಕೆ ಅನ್ಯಕ್ರಾಂತಗೊಂಡ ಸರ್ವೆ ನಂ. 80/1ಬಿ ರಲ್ಲಿ 1 ಎಕರೆ 19 ಗುಂಟೆ ಜಮೀನಿಗೆ ಚಕ್ಕುಬಂದಿ:
ಪೂರ್ವಕ್ಕೆ: ಸರ್ವೆ ನಂ. 81 ; ಪಶ್ಚಿಮಕ್ಕೆ: ಸರ್ವೆ ನಂ. 80/1ಎ ; ಉತ್ತರಕ್ಕೆ: ಮದರಗಳ್ಳಿ ಗಡಿ ; ದಕ್ಷಿಣಕ್ಕೆ: ಸರ್ವೆ ನಂ. 80/2.

3) ಮೈಸೂರು ತಾಲ್ಲೂಕು, ವರುಣಾ ಹೋಬಳಿ, ಕೂಡನಹಳ್ಳಿ ಗ್ರಾಮದ ವಸತಿ ಉದ್ದೇಶಕ್ಕೆ ಅನ್ಯಕ್ರಾಂತಗೊಂಡ ಸರ್ವೆ ನಂ. 80/2 ರಲ್ಲಿ 2 ಎಕರೆ 27 ಗುಂಟೆ ಜಮೀನಿಗೆ ಚಕ್ಕುಬಂದಿ:
ಪೂರ್ವಕ್ಕೆ: ಸರ್ವೆ ನಂ. 81 ; ಪಶ್ಚಿಮಕ್ಕೆ: ಮದರಗಳ್ಳಿ ಗಡಿ ; ಉತ್ತರಕ್ಕೆ: ಸರ್ವೆ ನಂ. 80/1ಎ ಮತ್ತು 1ಬಿ ; ದಕ್ಷಿಣಕ್ಕೆ: ಸರ್ವೆ ನಂ. 79.

4) ಮೈಸೂರು ತಾಲ್ಲೂಕು, ವರುಣಾ ಹೋಬಳಿ, ಮದರಗಳ್ಳಿ ಗ್ರಾಮದ ವಸತಿ ಉದ್ದೇಶಕ್ಕೆ ಅನ್ಯಕ್ರಾಂತಗೊಂಡ ಸರ್ವೆ ನಂ. 105/1 ರಲ್ಲಿ 1 ಎಕರೆ 33 ಗುಂಟೆ ಜಮೀನಿಗೆ ಚಕ್ಕುಬಂದಿ: ಪೂರ್ವಕ್ಕೆ: ಸುಬ್ರಮಣ್ಯರವರ ಜಮೀನು ; ಪಶ್ಚಿಮಕ್ಕೆ: ರಸ್ತೆ ; ಉತ್ತರಕ್ಕೆ: ರಸ್ತೆ ; ದಕ್ಷಿಣಕ್ಕೆ: ಕೂಡನಹಳ್ಳಿ ಸರ್ವೆ ನಂ. 80.

Sd/- O. Shama Bhat, B.A., LL.B.
O. Sathisha, B.Sc., LL.B., Advocates
#20/C, 2nd Floor, Near Airlines Hotel, Jayalakshmi Vilas Road,
Chamarajapuram, Mysuru-570 005

Date: 20-09-2022

ಮಡಿಕೇರಿಯಲ್ಲಿ ಸಿದ್ಧವಾಗುತ್ತಿದೆ ಶಾಶ್ವತ ಗ್ಯಾಲರಿ

ನವರಾತ್ರಿ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ವೇದಿಕೆ, ವೀಕ್ಷಣೆಗೆ ಗ್ಯಾಲರಿ ನಿರ್ಮಾಣ



ಮಡಿಕೇರಿ, ಸೆ.25– ಪೌರಾಣಿಕ ಹಿನ್ನೆಲೆ ಹೊಂದಿರುವ ಮಡಿಕೇರಿ ದಸರಾಕ್ಕೆ ಕ್ಷಣಗಣನೆ ಆರಂಭವಾಗಿದೆ ಅದರೊಂದಿಗೆ ನವರಾತ್ರಿ ಸಾಂಸ್ಕೃತಿಕ ಕಾರ್ಯಕ್ರಮಗಳ ಪ್ರದರ್ಶನದ ವೀಕ್ಷಣೆಗಾಗಿ 'ಶಾಶ್ವತ ಗ್ಯಾಲರಿ' ಸಿದ್ಧವಾಗುತ್ತಿದೆ.

ನಗರದ ಗಾಂಧಿ ಮೈದಾನದಲ್ಲಿ ಪ್ರತಿ ವರ್ಷ ಲಕ್ಷಾಂತರ ರೂಪಾಯಿ ವ್ಯಯಿಸಿ ತಾತ್ಕಾಲಿಕ ಗ್ಯಾಲರಿ ನಿರ್ಮಾಣ ಮಾಡುವ ಸಮಸ್ಯೆಗೆ ಇದರಿಂದ ಮುಕ್ತಿಯೂ ದೊರಕಿದಂತಾಗಿದೆ. ಪರಿಣಾಮವಾಗಿ ದಶ ಮಂಟಪಗಳು, ಶಕ್ತಿ ದೇವತೆಗಳ ಕರಗ ಹಾಗೂ ಮಂಟಪಗಳಿಗೆ ಸರಕಾರ ಬಿಡುಗಡೆ ಮಾಡುವ ಅನುದಾನದಲ್ಲಿ ಹೆಚ್ಚಿನ ಪಾಲನ್ನು ನೀಡಲು ಇನ್ನು ಮುಂದೆ ಸಾಧ್ಯವಾಗಲಿದೆ.

75 ಲಕ್ಷ ರೂ. ವೆಚ್ಚ: ಗಾಂಧಿ ಮೈದಾನದಲ್ಲಿ ಮಡಿಕೇರಿ ದಸರಾದ ಎಲ್ಲಾ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತಾ ಬರುತ್ತಿದ್ದು, ಬಹು ವರ್ಷಗಳಿಂದ ಶಾಶ್ವತ ಗ್ಯಾಲರಿ ನಿರ್ಮಾಣಕ್ಕೆ ಬೇಡಿಕೆ ಇತ್ತು. ಕೋವಿಡ್ ಹಿನ್ನೆಲೆಯಲ್ಲಿ ಕಳೆದ ವರ್ಷ ಸರಳ ದಸರಾ ಆಚರಣೆ ಮಾಡಿದ್ದು, ಸರಕಾರದಿಂದ ಮಡಿಕೇರಿ ದಸರಾಕ್ಕೆ ಬಿಡುಗಡೆಯಾಗಿದ್ದ 1 ಕೋಟಿ ರೂ.ಗಳ ಅನುದಾನದಲ್ಲಿ ಶಾಶ್ವತ ಗ್ಯಾಲರಿ ನಿರ್ಮಾಣಕ್ಕೆ 75 ಲಕ್ಷ ರೂ.ಗಳನ್ನು ಬಳಸಿಕೊಳ್ಳಲಾಗಿದೆ. ಈ ಅನುದಾನದಲ್ಲಿ ಇದೀಗ ಗ್ಯಾಲರಿ ನಿರ್ಮಾಣ ಕಾರ್ಯ ಬಹುತೇಕ ಪೂರ್ಣಗೊಂಡಿದ್ದು, ನವರಾತ್ರಿಯ ಸಾಂಸ್ಕೃತಿಕ ಕಾರ್ಯಕ್ರಮಗಳು ನಿರಾತಂಕವಾಗಿ ನಡೆಯಲಿವೆ. ಮಳೆ ಗಾಳಿಯ ಅಂಜಿಕೆ ಇಲ್ಲದೇ ಏಕಕಾಲಕ್ಕೆ ಸುಮಾರು 2 ಸಾವಿರ ಮಂದಿ ಆಸೀನರಾಗಿ ಕಾರ್ಯಕ್ರಮಗಳನ್ನು ವೀಕ್ಷಿಸಲು ಇದರಿಂದ ಸಾಧ್ಯವಾಗಲಿದೆ.

ವೇದಿಕೆ ವಿನ್ಯಾಸ: 200 ಅಡಿ ಉದ್ದ, 80 ಅಡಿ ಅಗಲದ ವಿನ್ಯಾಸದಲ್ಲಿ ಶಾಶ್ವತ ಗ್ಯಾಲರಿ ನಿರ್ಮಾಣಗೊಂಡಿದ್ದು, 1,600 ಚದರ ಅಡಿ ವಿಸ್ತೀರ್ಣ ಹೊಂದಿದೆ. ಮೇಲ್ಚಾವಣಿಗೆ ತುಕ್ಕು ರಹಿತ ಅತ್ಯಾಧುನಿಕ ಸ್ಟೀಲ್ ಶೀಟ್‌ಗಳನ್ನು ಅಳವಡಿಸಲಾಗಿದೆ. ಈ ವೀಕ್ಷಣಾ ಗ್ಯಾಲರಿಯನ್ನು ಸಂಪೂರ್ಣವಾಗಿ ಕಬ್ಬಿಣ ಬಳಸಿ ನಿರ್ಮಿಸಲಾಗಿದೆ. ಇವುಗಳ ಜೋಡಣಾ ಕಾರ್ಯ ಕುಶಾಲನಗರದಲ್ಲಿ ಮಾಡಲಾಗಿದ್ದು, ಮೈದಾನದಲ್ಲಿ ಕೇವಲ ಅಳವಡಿಕೆ ಕಾರ್ಯ ನಡೆಸಲಾಗಿದೆ ಎಂದು ಗ್ಯಾಲರಿ ನಿರ್ಮಾಣದ ಗುತ್ತಿಗೆದಾರ ಸುರೇಶ್ ಮುತ್ತಪ್ಪ ಮಾಹಿತಿ ನೀಡಿದ್ದಾರೆ.

ಅದ್ದೂರಿ 'ಕಲಾ ವೇದಿಕೆ': ಗ್ಯಾಲರಿಯ ಮುಂಭಾಗ ಸಾಂಸ್ಕೃತಿ ಕಾರ್ಯಕ್ರಮಗಳ ಆಯೋಜನೆಗೆ ಅದ್ದೂರಿಯ 'ಕಲಾ ವೇದಿಕೆ' ನಿರ್ಮಾಣ ಮಾಡಲಾಗಿದೆ. ಈ ವೇದಿಕೆ 5 ಅಡಿ ಎತ್ತರ, 60 ಅಡಿ ಉದ್ದ, 60 ಅಡಿ ಅಗಲವಿದೆ. ಕಲಾ ವೇದಿಕೆಯಲ್ಲಿ ಕಾರ್ಯಕ್ರಮಕ್ಕೆ ತಕ್ಕಂತೆ ಬಣ್ಣ ಬಣ್ಣದ ಅದ್ದೂರಿ ಬೆಳಕಿನ ವ್ಯವಸ್ಥೆ, ಗಣ್ಯಾತಿ ಗಣ್ಯರ ಆಸನ ವ್ಯವಸ್ಥೆ, ನೃತ್ಯ ಪ್ರದರ್ಶನಕ್ಕೆ ಅನುಕೂಲವಾಗುವ ನೆಲಹಾಸುಗಳು, ವಿವಿಧ ಪ್ರಾಕಾರಗಳ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ತಕ್ಕಂತೆ ವರ್ಣರಂಜಿತವಾಗಿ ವೇದಿಕೆಯನ್ನು ಸಿದ್ಧಪಡಿಸಲಾಗುತ್ತಿದೆ. ಕಲಾ ವೇದಿಕೆ, ನಗರ ಅಲಂಕಾರ, ಬಣ್ಣ ಬಣ್ಣದ ಬೆಳಕಿನ ವ್ಯವಸ್ಥೆ, ಧ್ವನಿ ವರ್ಧಕ ಈ ವ್ಯವಸ್ಥೆಗಳಿಗಾಗಿ ಒಟ್ಟು 26 ಲಕ್ಷ ರೂ.ಗಳನ್ನು ಮಡಿಕೇರಿ ನಗರ ದಸರಾ ಸಮಿತಿ ವತಿಯಿಂದ ವಿನಿಯೋಗಿಸಲಾಗುತ್ತಿದೆ. ಸೆ.27ರ ಸಂಜೆ ವೇಳೆಯಿಂದ 9 ದಿನಗಳ ಕಾಲ ಈ ಅದ್ದೂರಿ ಕಲಾ ವೇದಿಕೆಯಲ್ಲಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿದ್ದು, ಕಾಮಗಾರಿ ಅತ್ಯಂತ ಬಿರುಸಿನಿಂದ ಸಾಗಿದೆ.

ಇಂದು ಮಡಿಕೇರಿ ದಸರಾಗೆ ಚಾಲನೆ

ನಾಲ್ಕು ಶಕ್ತಿ ದೇವತೆಗಳಿಗೆ ವಿಶೇಷ ಪೂಜೆ


ಫೈಲ್ ಚಿತ್ರ

ಮಡಿಕೇರಿ, ಸೆ.25– ಪೌರಾಣಿಕ ಹಿನ್ನೆಲೆ ಹೊಂದಿರುವ ಮಡಿಕೇರಿ ದಸರಾದ ಕರಗ ಉತ್ಸವಕ್ಕೆ ನಾಳೆ (ಸೋಮವಾರ) ಸಂಜೆ ನಗರದ ಪಂಪಿನ ಕೆರೆಯಲ್ಲಿ ಸಾಂಪ್ರದಾಯಿಕ ಚಾಲನೆ ದೊರೆಯಲಿದೆ.

ಸೆ.26ರ ಸಂಜೆ 5 ಗಂಟೆಗೆ ನಗರದ ಪಂಪಿನಕೆರೆಯಲ್ಲಿ 4 ಶಕ್ತಿ ದೇವತೆಗಳಾದ ಶ್ರೀ ಕುಂದುರುಮೊಟ್ಟೆ ಚೌಟಿ ಮಾರಿಯಮ್ಮ, ಶ್ರೀ ದಂಡಿನ ಮಾರಿಯಮ್ಮ, ಶ್ರೀ ಕಂಚಿ ಕಾಮಾಕ್ಷಿಯಮ್ಮ, ಮತ್ತು ಶ್ರೀ ಕೋಟೆ ಮಾರಿಯಮ್ಮ ದೇವಿಗಳ ಕರಗಗಳನ್ನು ಬಣ್ಣ-ಬಣ್ಣದ ಹೂವುಗಳಿಂದ ಅಲಂಕರಿಸಲಾಗುತ್ತದೆ. ನಂತರ ಶಕ್ತಿ ದೇವತೆಗಳ ಕರಗಗಳಿಗೆ ವಿಶೇಷ ಪೂಜೆ ಸಲ್ಲಿಸುವ ಮೂಲಕ ಮಡಿಕೇರಿ ದಸರಾಕ್ಕೆ ಅಧಿಕೃತ ಚಾಲನೆ ದೊರೆಯಲಿದೆ.

ಬನ್ನಿಮಂಟಪಕ್ಕೆ ಕರಗಗಳನ್ನು ಕರೆತಂದು ಪೂಜೆ ಸಲ್ಲಿಸಿ, ತದ ನಂತರ ಶ್ರೀ ಕೋದಂಡ ರಾಮ ದೇವಾಲಯ, ಶ್ರೀ ಚೌಡೇಶ್ವರಿ ದೇವಾಲಯ ಹಾಗೂ ಪೇಟೆ ಶ್ರೀರಾಮ ಮಂದಿರಕ್ಕೆ ತೆರಳಿ ಕರಗಗಳು ಪೂಜೆ ಸಲ್ಲಿಸಲಾಗುವುದು. ಈ ಸಾಂಪ್ರದಾಯಿಕ ಪೂಜೆ ನೆರವೇರಿದ ಬಳಿಕ ತಮ್ಮ ಮೂಲ ಸ್ಥಾನಗಳಿಗೆ ಕರಗಗಳು ಮರಳುತ್ತವೆ. ಕಳೆದ ಬಾರಿ ಕೊರೊನಾ ಹಿನ್ನೆಲೆಯಲ್ಲಿ ನವದಿನ ಕರಗಗಳ ನಗರ ಪ್ರದಕ್ಷಿಣೆ ರದ್ದುಗೊಳಿಸಲಾಗಿತ್ತು. ಆದರೆ ಈ ವರ್ಷ ಯಾವುದೇ ನಿರ್ಬಂಧ ಇಲ್ಲದಿರುವ ಕಾರಣ ನಗರ ಪ್ರದಕ್ಷಿಣೆ ಎಂದಿನಂತೆ ನಡೆಯಲಿದೆ. ಮಡಿಕೇರಿ ಕ್ಷೇತ್ರ ಶಾಸಕ ಅಪ್ಪಚ್ಚು ರಂಜನ್, ಜಿಲ್ಲಾಧಿಕಾರಿ ಡಾ.ಬಿ.ಸಿ. ಸತೀಶ, ಮಡಿಕೇರಿ ನಗರಸಭೆ ಹಾಗೂ ದಸರಾ ಸಮಿತಿ ಅಧ್ಯಕ್ಷೆ ಅನಿತಾ ಪೂವಯ್ಯ, ದಸರಾ ಸಮಿತಿ ಕಾರ್ಯಾಧ್ಯಕ್ಷ ಕೆ.ಎಸ್. ರಮೇಶ್, ಪ್ರಧಾನ ಕಾರ್ಯದರ್ಶಿ ರಾಜೇಶ್ ಯಲ್ಲಪ್ಪ ಸೇರಿದಂತೆ ದಶ ಮಂಟಪ ಸಮಿತಿಗಳ ಪ್ರಮುಖರು ಕರಗ ಪೂಜಾ ಕಾರ್ಯದಲ್ಲಿ ಭಾಗವಹಿಸಲಿದ್ದಾರೆ.

ಮಾಲ್ದಾರೆ ವ್ಯಾಪ್ತಿಯಲ್ಲಿ ಹುಲಿ ಆಯ್ತು, ಈಗ ಚಿರತೆ ಕಾಟ

ಆಶ್ರಮ ಶಾಲೆಯ ಸಮೀಪ ಚಿರತೆ ಹೆಜ್ಜೆ ಗುರುತು ಪತ್ತೆ

ಸಿದ್ದಾಪುರ, ಸೆ.25– ಕಳೆದ ಕೆಲ ದಿನಗಳಿಂದ ಸಾರ್ವಜನಿಕರಿಗೆ ಕಾಣಿಸಿಕೊಳ್ಳುವುದರೊಂದಿಗೆ ಜಾನುವಾರುಗಳನ್ನು ಬಲಿ ತೆಗೆದುಕೊಂಡು ಆತಂಕ ಸೃಷ್ಟಿಸುತ್ತಿದ್ದ ಹುಲಿಯನ್ನು ಸೆರೆಹಿಡಿದ ನಂತರ ನಿಟ್ಟುಸಿರು ಬಿಟ್ಟಿದ್ದ ಗ್ರಾಮಸ್ಥರಿಗೆ ಇದೀಗ ಚಿರತೆಯ ಕಾಟ ಶುರುವಾಗಿದೆ.

ದುಬಾರೆ ಅರಣ್ಯದಿಂದ ಬಂದ ಚಿರತೆಯೊಂದು ಮಾಲ್ದಾರೆ ಸರ್ಕಾರಿ ಶಾಲೆಯ ಸಮೀಪದ ಕಾಫಿತೋಟದಲ್ಲಿ ಕಾರ್ಮಿಕರು ಮತ್ತು ವಾಹನ ಸವಾರರಿಗೆ ಕಾಣಿಸಿಕೊಂಡಿದ್ದು, ಹೆಜ್ಜೆ ಗುರುತು ಪತ್ತೆಯಾಗಿದೆ.

ಕಾರ್ಯಕರ್ತರು ಈ ಕುರಿತು ಅರಣ್ಯ ಇಲಾಖೆಗೆ ಮಾಹಿತಿ ನೀಡಿದ್ದಾರೆ. ಸ್ಥಳಕ್ಕೆ ಬಂದ ಅರಣ್ಯ ಇಲಾಖೆ ಸಿಬ್ಬಂದಿ ಪರಿಶೀಲಿಸಿದ ಸಂದರ್ಭ ಚಿರತೆಯ ಹೆಜ್ಜೆ ಗುರುತು ಪತ್ತೆಯಾಗಿದೆ. ಮಾಲ್ದಾರೆ ಸಮೀಪದ ತಟ್ಟಳ್ಳಿ ಆಶ್ರಮ ಶಾಲೆಗೆ ಹೋಗುವ ರಸ್ತೆಯಲ್ಲಿ ಹಾಡಹಗಲೇ ಎರಡು ಚಿರತೆ ಅರಣ್ಯದಿಂದ ಕಾಫಿತೋಟದತ್ತ ತೆರಳುತ್ತಿದ್ದನ್ನು ಕಂಡ ವಾಹನ ಸವಾರರು ಮಾಹಿತಿ ನೀಡಿದ್ದಾರೆ. ಕಾರ್ಮಿಕ ಕುಟುಂಬಗಳೇ ಅಧಿಕವಾಗಿರುವ ಮಾಲ್ದಾರೆ, ಮೈಲಾಪುರ, ಹುಂಡಿ, ಬಾಡಗ ಬಾಣಂಗಾಲ, ಘಟ್ಟದಳ್ಳ, ಮಾರ್ಗೊಲ್ಲಿ, ಕಲ್ಲಳ್ಳ ವ್ಯಾಪ್ತಿಯಲ್ಲಿ ಶಾಲಾ ವಿದ್ಯಾರ್ಥಿಗಳು, ಕಾರ್ಮಿಕರು ದಿನನಿತ್ಯ ಕಾಫಿ ತೋಟದ ಮಾರ್ಗವಾಗಿ ಓಡಾಡಬೇಕಾಗಿದ್ದು ದಿನನಿತ್ಯ ಕಾಣಿಸಿಕೊಳ್ಳುವ ಕಾಡುಪ್ರಾಣಿಗಳ ಹಾವಳಿಯಿಂದ ಭಯಭೀತರಾಗಿದ್ದಾರೆ.

ಕಾಡಾನೆಗಳು ಕಾಫಿ ತೋಟಗಳಲ್ಲೇ ಬೀಡು ಬಿಟ್ಟು ಅಪಾರ ಪ್ರಮಾಣದ ಕೃಷಿ ಫಸಲು ನಾಶ ಮಾಡುವ ಮೂಲಕ ಕಾರ್ಮಿಕರು ಬೆಳೆಗಾರರಲ್ಲಿ ಆತಂಕ ಸೃಷ್ಟಿ ಮಾಡಿದೆ. ಇತ್ತೀಚೆಗೆ ಕಾಡುಪ್ರಾಣಿಗಳ ಹಾವಳಿ ಮಿತಿ ಮೀರಿರುವ ಹಿನ್ನೆಲೆಯಲ್ಲಿ ಕಾರ್ಮಿಕರು ಕೆಲಸಕ್ಕೆ ತೆರಳಲು ಹಿಂದೇಟು ಹಾಕುತ್ತಿದ್ದಾರೆ



ಅರಣ್ಯ ಇಲಾಖೆ ಕೂಡಲೇ ಕಾಡುಪ್ರಾಣಿಗಳ ಹಾವಳಿಯನ್ನು ಶಾಶ್ವತವಾಗಿ ತಡೆಗಟ್ಟಬೇಕೆಂದು ಸ್ಥಳೀಯರು ಒತ್ತಾಯಿಸಿದ್ದಾರೆ.

ಶ್ರೀರಂಗಪಟ್ಟಣ ದಸರಾ ಉದ್ಘಾಟನೆಗೆ ದೇವೇಗೌಡರ ಹೆಸರು ಬಿಟ್ಟಿದ್ದಕ್ಕೆ ಆಕ್ರೋಶ



ಮದ್ದೂರು,ಸೆ.25– ಶ್ರೀರಂಗಪಟ್ಟಣ ದಸರಾ ಉದ್ಘಾಟನೆಗೆ ಮಾಜಿ ಪ್ರಧಾನಿ ದೇವೇಗೌಡರ ಹೆಸರು ಕೈಬಿಟ್ಟಿದಕ್ಕೆ ಶಾಸಕ ಕೆ.ಸುರೇಶ್‌ಗೌಡ ಕಿಡಿಕಾರಿದ್ದು, ದೇವೇಗೌಡರನ್ನು ಕಂಡರೆ ಬಿಜೆಪಿಗೆ ಭಯ ಎಂದು ವ್ಯಂಗ್ಯವಾಡಿದ್ದಾರೆ.

ತಾಲೂಕಿನ ಕೊಪ್ಪದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈ ಹಿಂದೆ ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರಿಂದ ಶ್ರೀರಂಗಪಟ್ಟಣ ಹಾಗೂ ಮೈಸೂರು ದಸರಾವನ್ನು ಉದ್ಘಾಟನೆ ಮಾಡಿಸಲಾಗಿತ್ತು. ಈ ಬಾರಿ ದೇವೇಗೌಡರಿಗೆ ಅವಕಾಶ ನೀಡಬೇಕಿತ್ತು. ಈ ದೇಶಕ್ಕೆ ಅಪಾರ ಕೊಡುಗೆ ಕೊಟ್ಟಿರುವ ದೇವೇಗೌಡರನ್ನು ಕರೆಸುವಂತೆ ಹೇಳಿದ್ದೆವು. ಆದರೆ ದಸರಾದಲ್ಲಿ ಗೌಡರದಿಂದ ಪೂಜೆ ಮಾಡಿಸಿದರೆ, ಜನ ಅವರ ಪರ ತಿರುಗುತ್ತಾರೆ ಎಂಬ ಭಯ ಬಿಜೆಪಿಯವರಲ್ಲಿದೆ ಎಂದು ಲೇವಡಿ ಮಾಡಿದರು.

ಸಂಸದೆ ಸುಮಲತಾ ಅಂಬರೀಷ್ ವಿಧಾನಮಂಡಲ ಅಧಿವೇಶನ ನಡೆಯುವಾಗ ದಿಶಾ ಸಭೆ ಕರೆಯುತ್ತಾರೆ. ಅಧಿವೇಶನ ಬಿಟ್ಟು ಸಭೆಗೆ ಬರಲು ಆಗಲ್ಲ. ನಾವು ಬರಬಾರದೆಂದು ಅಧಿವೇಶನವಿದ್ದ ಸಂದರ್ಭದಲ್ಲೇ ದಿಶಾ ಸಭೆ ಕರೆಯುತ್ತಾರೆ. ಅವರ ಉದ್ದೇಶ ಶಾಸಕರುಗಳು ಸಭೆಗೆ ಬರಬಾರದೆಂಬುದು ಎಂದು ಕಿಡಿಕಾರಿದರು. ನಾವು ಎಲ್ಲಾ ಸಭೆಯಲ್ಲೂ ಭಾಗವಹಿಸಿದ್ದೇವೆ. ಅಧಿವೇಶನದದಲ್ಲಿ ನಮಗೆ ಚರ್ಚೆ ಮಾಡಲು ಅವಕಾಶ ಸಿಗಲ್ಲ. ಕೇವಲ 1 ನಿಮಿಷದಲ್ಲಿ ಚರ್ಚಿಸಬೇಕು. ನಮ್ಮ ಅವಕಾಶಕ್ಕಾಗಿ ನಾವು ಅಧಿವೇಶನದಲ್ಲಿ ಕಾಯಬೇಕು. ಕಾಂಗ್ರೆಸ್‌ನವರಿಗೆ ಹೆಚ್ಚಿನ ಸಮಯ ಹೋಗುತ್ತೆ. ಹೀಗಿರುವಾಗ ಸುಮಲತಾ ನಾವು ಸದನಲ್ಲಿರುವಾಗಲೇ ಸಭೆ ಕರೆಯುತ್ತಾರೆ ಎಂದು ಟೀಕಿಸಿದರು.

> ಶ್ರೀರಂಗಪಟ್ಟಣ ದಸರಾ ಉದ್ಘಾಟನೆಗೆ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಹೆಸರು ಆಯ್ಕೆ ಮಾಡಲು ಚಿಂತಿಸಿದ್ದೇವಾದರೂ ಗೌಡರ ಅನಾರೋಗ್ಯದ ಸಮಸ್ಯೆಯಿಂದ ದಸರಾ ಉದ್ಘಾಟನೆಗೆ ಅವರ ಹೆಸರನ್ನು ಅನಿವಾರ್ಯವಾಗಿ ಕೈಬಿಡಬೇಕಾಯಿತು.
>
> ದೇವೇಗೌಡರ ಹೆಸರನ್ನು ಕೈಬಿಟ್ಟಿದ್ದಾರೆ ಎಂಬ ಶಾಸಕ ಸುರೇಶ್‌ಗೌಡರ ಹೇಳಿಕೆ ಸತ್ಯಕ್ಕೆ ದೂರ. ವಿನಾಕಾರಣ ದೇವೇಗೌಡರ ಹೆಸರಲ್ಲಿ ರಾಜಕೀಯ ಮಾಡುವುದು ಸರಿಯಲ್ಲ. ಆರೋಗ್ಯ ಸರಿಯಿಲ್ಲದವರಿಗೆ ತೊಂದರೆ ಕೊಡಬಾರದೆಂಬ ಕಾರಣಕ್ಕೆ ಈ ನಿರ್ಧಾರಕ್ಕೆ ಬಂದಿದ್ದು, ಈ ಬಗ್ಗೆ ಉಸ್ತುವಾರಿ ಸಚಿವ ಕೆ.ಗೋಪಾಲಯ್ಯ ಹಾಗೂ ಡಿಸಿ ಅಶ್ವಥಿ ನಿರ್ಧಾರ ಕೈಗೊಂಡಿದ್ದಾರೆ. **–ಕೆ.ಸಿ.ನಾರಾಯಣಗೌಡ, ಕ್ರೀಡೆ ಹಾಗೂ ರೇಷ್ಮೆ ಸಚಿವ**

ಮಂಡ್ಯದಲ್ಲಿ ರೈತರಿಂದ ಪೇ ಫಾರ್ಮರ್ ಅಭಿಯಾನ

ಮಂಡ್ಯ,ಸೆ.25– ಕಾಂಗ್ರೆಸ್‌ನಿಂದ ಒಂದೆಡೆ ಪೇ ಸಿಎಂ ಪೋಸ್ಟರ್ ಅಭಿಯಾನ ನಡೆಯುತ್ತಿದ್ದರೆ, ಇತ್ತ ಮಂಡ್ಯ ರೈತರಿಂದ ಪೇ ಫಾರ್ಮರ್ ಅಭಿಯಾನ ಆರಂಭವಾಗಿದೆ.

ಈ ಸಂಬಂಧ ಮಂಡ್ಯ ಜಿಲ್ಲೆಯ ರೈತ ಮುಖಂಡರ ಫೇಸ್‌ಬುಕ್ ಹಾಗೂ ಟ್ವಿಟ್ಟರ್‌ಗಳಲ್ಲಿ ರಾಜಕೀಯ ನಾಯಕರೇ ನೀವೆಲ್ಲ ಒಂದೇ ನಾಣ್ಯದ ಎರಡು ಮುಖಗಳು. ನೀವು ಯಾರೇ ಅಧಿಕಾರಕ್ಕೆ ಬಂದರೂ ರೈತರಿಗೆ ಸ್ಪಂದಿಸಲ್ಲ. ಕೆಲವರು ಅಧಿಕಾರಕ್ಕಾಗಿ ಸರ್ಕಸ್ ಮಾಡಿದರೆ, ಇನ್ನು ಕೆಲವರು ಅಧಿಕಾರ ಉಳಿಸಿಕೊಳ್ಳಲು ಸರ್ಕಸ್ ಮಾಡುತ್ತಿದ್ದಾರೆ ಎಂದು ಸಾಮಾಜಿಕ ಜಾಲತಾಣದಲ್ಲಿ ರೈತರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಸೇವಾ ಕಾರ್ಯಗಳೊಂದಿಗೆ ಶಾಸಕ ಸಿಎಸ್‌ಪಿ ಹುಟ್ಟುಹಬ್ಬ ಆಚರಣೆ



ಪಾಂಡವಪುರ,ಸೆ.25– ಮೇಲುಕೋಟೆ ವಿಧಾನಸಭಾ ಕ್ಷೇತ್ರದ ಶಾಸಕ ಸಿ.ಎಸ್.ಪುಟ್ಟರಾಜು ಅವರ 59ನೇ ಹುಟ್ಟುಹಬ್ಬವನ್ನು ರಕ್ತದಾನ ಶಿಬಿರ, ತೆಂಗಿನ ಸಸಿ ವಿತರಣೆ ಹಾಗೂ ಹಲವು ಸಾಮಾಜಿಕ ಸೇವಾ ಕಾರ್ಯಗಳ ಮೂಲಕ ಅಭಿಮಾನಿಗಳು ಕೇಕ್‌ಕತ್ತರಿಸಿ ನೆಚ್ಚಿನ ನಾಯಕನ ಹುಟ್ಟುಹಬ್ಬ ಆಚರಣೆ ಮಾಡಿದರು.

ಸಿ.ಎಸ್.ಪುಟ್ಟರಾಜು ಹುಟ್ಟುಹಬ್ಬದ ಅಂಗವಾಗಿ ಸಿ.ಎಸ್.ಪುಟ್ಟರಾಜು ಅಭಿಮಾನಿ ಬಳಗದಿಂದ ಪಟ್ಟಣದ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ಬೃಹತ್ ರಕ್ತದಾನ ಶಿಬಿರ ಏರ್ಪಡಿಸಲಾಗಿತ್ತು. ರಕ್ತದಾನ ಶಿಬಿರಕ್ಕೆ ಶಾಸಕ ಸಿ.ಎಸ್.ಪುಟ್ಟರಾಜು ಅವರು ಚಾಲನೆ ನೀಡಿದರು. ಬೆಳಿಗ್ಗೆಯಿಂದ ಆರಂಭಗೊಂಡ ರಕ್ತದಾನ ಶಿಬಿರವು ಸಂಜೆ 4 ಗಂಟೆಯವರೆಗೂ ನಡೆಯಿತು. ಸ್ವಯಂ ಪ್ರೇರಿತರಾಗಿ ಅಭಿಮಾನಿಗಳು, ಕಾರ್ಯಕರ್ತರು, ಮಹಿಳೆಯರು ರಕ್ತದಾನ ಮಾಡಿದರು. ರಕ್ತದಾನದಲ್ಲಿ ಪುರಸಭೆ ಅಧ್ಯಕ್ಷೆ ಅರ್ಚನಚಂದ್ರು, ಉದ್ಯಮಿ ಎಚ್.ಆರ್.ಮಧುಸೂದನ್ ಸೇರಿದಂತೆ ಹಲವು ಗಣ್ಯರು ಸಹ ಪಾಲ್ಗೊಂಡಿದ್ದು, ವಿಶೇಷವಾಗಿತ್ತು. ರಕ್ತದಾನ ಮಾಡಿದವರಿಗೆ ಹಣ್ಣು, ಜ್ಯೂಸ್ ಹಾಗೂ ಪ್ರಮಾಣ ಪತ್ರವನ್ನು ವಿತರಣೆ ಮಾಡಲಾಯಿತು. ಅಂತಿಮವಾಗಿ 103 ಬಾಟಲು ಸಂಗ್ರಹ ಮಾಡಿ ಮಂಡ್ಯದ ಜಿಲ್ಲಾಸ್ಪತ್ರೆಯ ರಕ್ತನಿಧಿ ಕೇಂದ್ರಕ್ಕೆ ರವಾನಿಸಲಾಯಿತು. ಶಿಬಿರದಲ್ಲಿ ಜಿಲ್ಲಾಸ್ಪತ್ರೆಯ ರಕ್ತನಿಧಿ ಕೇಂದ್ರ ವೈದ್ಯರು, ಸಿಬ್ಬಂದಿ ಹಾಗೂ ಜೀವಧಾರೆ ಟ್ರಸ್ಟ್‌ನ ಸದಸ್ಯರು ಭಾಗವಹಿಸಿದ್ದರು.

ತೆಂಗಿನ ಸಸಿ ವಿತರಣೆ: ಇದೇ ವೇಳೆ ಸುಮಾರು 59 ತೆಂಗಿನ ಸಸಿ ವಿತರಣೆ ಮಾಡಿದರು. ಜಿಪಂ ಸದಸ್ಯ ಸಿ.ಅಶೋಕ್, ಮನ್‌ಮುಲ್ ಅಧ್ಯಕ್ಷ ಬಿ.ಆರ್.ರಾಮಚಂದ್ರು ಅವರು ಸಸಿ ವಿತರಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಪಟ್ಟಣದ ಕೃಷ್ಣನಗರದ ಶಾಸಕರ ನಿವಾಸದ ಎದುರು ನಡೆದ ಸಿ.ಎಸ್.ಪುಟ್ಟರಾಜು ಅವರ ಹುಟ್ಟುಹಬ್ಬದ ಸಮಾರಂಭದಲ್ಲಿ ಮೇಲುಕೋಟೆ ವಿಧಾನಸಭಾ ಕ್ಷೇತ್ರ ಸೇರಿದಂತೆ ಜಿಲ್ಲೆಯ ವಿವಿಧೆಡೆಯಿಂದ ನೂರಾರು ಸಂಖ್ಯೆಯಲ್ಲಿ ಸಿ.ಎಸ್.ಪುಟ್ಟರಾಜು ಅವರ ಅಭಿಮಾನಿಗಳು, ಕಾರ್ಯಕರ್ತರು, ಬೆಂಬಲಿಗರು, ಜೆಡಿಎಸ್ ಮುಖಂಡರು, ವಿವಿಧ ಸಂಘ–ಸಂಸ್ಥೆ, ಗ್ರಾಪಂ ಅಧ್ಯಕ್ಷರು, ಸದಸ್ಯರು ಆಗಮಿಸಿ ನೆಚ್ಚಿನ ನಾಯಕ ಸಿ.ಎಸ್.ಪುಟ್ಟರಾಜು ಅವರನ್ನು ಅಭಿನಂದಿಸಿದರು. ಬೆಳಗ್ಗೆ 8 ಗಂಟೆಯಿಂದಲೇ ಆರಂಭಗೊಂಡ ಹುಟ್ಟುಹಬ್ಬದ ಸಂಭ್ರಮ ಸಂಜೆಯವರೆಗೂ ಶಾಸಕರ ಸ್ವಗ್ರಾಮ ಚಿನಕುರಳಿ ಸೇರಿದಂತೆ ತಾಲೂಕಿನ ವಿವಿಧೆಡೆ ಆಚರಿಸಲಾಯಿತು. ಸೇಬು, ಏಲಕ್ಕಿ, ವಿವಿಧ ಬಗೆಯ ಹೂವಿನ ಹಾರಗಳನ್ನು ಹಾಕಿ ಸಂಭ್ರಮಿಸಿದರು. ಉದ್ಯಮಿ ಎಚ್.ಆರ್.ಮಧುಸೂದನ್ ಹಾಗೂ ಮಧು ಗೆಳೆಯರ ಬಳಗದಿಂದ ಶಾಸಕ ಸಿ.ಎಸ್.ಪುಟ್ಟರಾಜು ಅವರಿಗೆ 1.25 ಕೆಜಿ ಬೆಳ್ಳಿ ಕಿರೀಟ ನೀಡಿದರು. ಬೆಳ್ಳಿ ಕಿರೀಟವನ್ನು ಸ್ವೀಕರಿಸಿದ ಶಾಸಕರು ಸ್ಥಳದಲ್ಲಿಯೇ ಕಿರೀಟವನ್ನು ಪಟ್ಟಣದ ಶಕ್ತಿದೇವತೆ ಮಹಾಂಕಾಳೇಶ್ವರಿ ದೇವಸ್ಥಾನಕ್ಕೆ ನೀಡುವುದಾಗಿ ಘೋಷಿಸಿ ಆ ವಾರ್ಡ್‌ನ ಸದಸ್ಯ ಗಿರೀಶ್ ಅವರಿಗೆ ಹಸ್ತಾಂತರಿಸಿದರು. ಶಾಸಕ ಪುಟ್ಟರಾಜು ಮಾತನಾಡಿ, ಈ ವರ್ಷ ನನ್ನ ಹುಟ್ಟುಹಬ್ಬವನ್ನು ಆಚರಣೆ ಮಾಡಿಕೊಳ್ಳುವುದು ಬೇಡ ಎಂದು ತೀರ್ಮಾನಿಸಿದ್ದೆ. ಆದರೆ, ಅಭಿಮಾನಿಗಳು, ಕಾರ್ಯಕರ್ತರು ಹುಟ್ಟುಹಬ್ಬ ಆಚರಣೆ ಮಾಡಿಕೊಳ್ಳುವಂತೆ ಒತ್ತಾಯಿಸಿದ ಹಿನ್ನೆಲೆಯಲ್ಲಿ ಅವರ ಆಶಯಕ್ಕೆ ಧಕ್ಕೆ ಬಾರದಂತೆ ಹುಟ್ಟಹಬ್ಬ ಆಚರಣೆ ಮಾಡಿಕೊಳ್ಳುತ್ತಿದ್ದೇನೆ ಎಂದರು.

ಈ ಸಂದರ್ಭದಲ್ಲಿ ಪುರಸಭೆ ಸದಸ್ಯೆ ಅರ್ಚನಚಂದ್ರು, ಟಿಎಪಿಸಿಎಂಎಸ್ ಅಧ್ಯಕ್ಷ ಡಿ.ಶ್ರೀನಿವಾಸ್, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಎಂ.ಸಿ.ಯಶವಂತ್‌ಕುಮಾರ್, ಪುರಸಭೆ ಸದಸ್ಯ ಬಿ.ವೈ.ಬಾಬು, ತಾಪಂ ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷ ಕೆ.ಪುಟ್ಟೇಗೌಡ, ಉದ್ಯಮಿ ಎಚ್.ಆರ್.ಮಧುಸೂದನ್, ಜೆಡಿಎಸ್ ಮುಖಂಡರಾದ ಬಳೇಅತ್ತಿಗುಪ್ಪೆ ಮಹೇಶ್, ಕಣಿವೆಯೋಗೇಶ್, ಟೌನ್‌ಚಂದ್ರು, ಗೋವಿಂದಯ್ಯ, ಗ್ರಾಪಂ ಅಧ್ಯಕ್ಷ ನಲ್ಲಹಳ್ಳಿ ಮಹೇಶ್, ಜೆ.ದೇವೇಗೌಡ, ಸೋಮು, ಪಿಎಲ್‌ಡಿ ಬ್ಯಾಂಕ್ ನಿರ್ದೇಶಕ ಸಿ.ಪ್ರಕಾಶ್, ಶ್ರೀನಿವಾಸ ಬಂಡಾರ ಮಾಲೀಕ ಜಯರಾಮು ಸೇರಿದಂತೆ ನೂರಾರು ಮುಖಂಡರು ಹಾಜರಿದ್ದರು.

ಜೆಡಿಎಸ್ ಹಿರಿಯ ಮುಖಂಡ ಡಿ.ತಮ್ಮಯ್ಯ ನಿಧನ



ಭಾರತೀನಗರ.ಸೆ.25– ಜೆಡಿಎಸ್ ಹಿರಿಯ ಮುಖಂಡ ಬೊಪ್ಪಸಮುದ್ರ ಗ್ರಾಮದ ಡಿ.ತಮ್ಮಯ್ಯ(90) ಅನಾರೋಗ್ಯದಿಂದ ಭಾನುವಾರ ನಿಧನರಾದರು. ಮೃತರು ಪತ್ನಿ ನಿಂಗಮ್ಮ, ಓರ್ವ ಪುತ್ರಿ, ನಾಲ್ವರು ಪುತ್ರರು ಸೇರಿದಂತೆ ಅಪಾರ ಬಂಧುಮಿತ್ರರನ್ನು ಅಗಲಿದ್ದಾರೆ. ಮೃತರ ಅಂತ್ಯಸಂಸ್ಕಾರ ಸ್ವಗ್ರಾಮದ ರುದ್ರಭೂಮಿಯಲ್ಲಿ ಸೆ.26ರ ಸೋಮವಾರ ಬೆಳಗ್ಗೆ ಜರುಗಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಅಣ್ಣೇಗೌಡರು



ಕೆ.ಆರ್.ಪೇಟೆ,ಸೆ.25– ತಾಲೂಕಿನ ಹಿರೀಕಳಲೆ ಗ್ರಾಮದ ಹಿರಿಯ ಮುಖಂಡ ಹಾಗೂ ಗ್ರಾಪಂ ಮಾಜಿ ಸದಸ್ಯ ಅಣ್ಣೇಗೌಡರು(75) ಇಂದು ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು– ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆಯು ಹುಟ್ಟೂರು ಹಿರೀಕಳಲೆ ಗ್ರಾಮದಲ್ಲಿ ಸೆ.26ರಂದು ಬೆಳಗ್ಗೆ 10 ಗಂಟೆಗೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಪುಟ್ಟಸ್ವಾಮಿಗೌಡ



ಕೆ.ಆರ್.ಪೇಟೆ, ಸೆ.25– ತಾಲೂಕಿನ ಬೂಕನಕೆರೆ ಹೋಬಳಿಯ ಕೀಳನಕೊಪ್ಪಲು ಗ್ರಾಮದ ಹಿರಿಯ ಮುಖಂಡ ಪುಟ್ಟಸ್ವಾಮಿಗೌಡ(85) ಇಂದು ನಿಧನರಾದರು. ಮೃತರು ಪತ್ನಿ ಕೆಂಪಮ್ಮ, ಪುತ್ರರಾದ ತಾಲೂಕು ಶಿಕ್ಷಣ ಇಲಾಖೆಯ ಕ್ಷೇತ್ರ ಸಂಪನ್ಮೂಲ ವ್ಯಕ್ತಿ ಕೆ.ಪಿ.ಬೋರೇಗೌಡ ಸೇರಿದಂತೆ ಮೂವರು ಪುತ್ರರು, ಓರ್ವ ಪುತ್ರಿ, ಅಪಾರ ಬಂಧು– ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆಯು ಸ್ವಗ್ರಾಮ ಕೀಳನಕೊಪ್ಪಲಿನಲ್ಲಿ ನಡೆಯಿತು.

ಭಾರತ್ ಜೋಡೋ ಯಾತ್ರೆ ಯಶಸ್ಸಿಗೆ ಸಹಕರಿಸಿ

ಶಾಸಕ ಸಿ.ಪುಟ್ಟರಂಗಶೆಟ್ಟಿ ಮನವಿ



ಚಾಮರಾಜನಗರ ಸೆ.25–ಕಾಂಗ್ರೆಸ್‌ನಿಂದ ರಾಹುಲ್‌ಗಾಂಧಿ ನೇತೃತ್ವದಲ್ಲಿ ಸೆ.30 ರಿಂದ ಜಿಲ್ಲೆಯ ಗುಂಡ್ಲುಪೇಟೆ ಪಟ್ಟಣದಿಂದ ರಾಜ್ಯದಲ್ಲಿ ಆರಂಭವಾಗುವ ಭಾರತ್ ಜೋಡೋ ಯಾತ್ರೆಯಲ್ಲಿ ತಾಲೂಕಿನ ಪಕ್ಷದ ಮುಖಂಡರು, ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವ ಮೂಲಕ ಪಾದಯಾತ್ರೆ ಯಶಸ್ವಿಗೊಳಿಸಬೇಕು ಎಂದು ಶಾಸಕ ಸಿ. ಪುಟ್ಟರಂಗಶೆಟ್ಟಿ ಮನವಿ ಮಾಡಿದರು.

ತಾಲೂಕಿನ ಮಾದಾಪುರ ಗ್ರಾಮದ ಸಮುದಾಯ ಭವನದಲ್ಲಿ ಏರ್ಪಡಿಸಿದ್ದ ಶಿವಪುರ, ಮಾದಾಪುರ, ಕೂಡ್ಲೂರು ಮಲ್ಲಯ್ಯನಪುರ, ಬೂದಿತಿಟ್ಟು ಗ್ರಾಮಗಳ ಕಾಂಗ್ರೆಸ್ ಕಾರ್ಯಕರ್ತರು, ಮುಖಂಡರ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಕಾಂಗ್ರೆಸ್ ಸ್ವಾತಂತ್ರ್ಯ ಪೂರ್ವ ಹಾಗೂ ಸ್ವಾತಂತ್ರ್ಯ ನಂತರದ ದಿನಗಳಲ್ಲಿ ದೇಶದ ಅಭಿವೃದ್ಧಿಗೆ ಮಹೋನ್ನತ ಕೊಡುಗೆ ನೀಡಿದೆ. ಗುಂಡ್ಲುಪೇಟೆ ಪಟ್ಟಣದಿಂದ ರಾಜ್ಯದಲ್ಲಿ ಕಾಂಗ್ರೆಸ್‌ನಿಂದ ಭಾರತ್ ಜೋಡೋ ಯಾತ್ರೆ ನಡೆಯುತ್ತಿದ್ದು, ಮಾಜಿ ಪ್ರಧಾನಿ ರಾಜೀವ್ ಗಾಂಧಿ ಅವರ ಪುತ್ರ ರಾಹುಲ್ ಗಾಂಧಿ ಜಿಲ್ಲೆಗೆ ಆಗಮಿಸುವ ಮೂಲಕ ಭಾರತ್ ಜೋಡೋ ಯಾತ್ರೆಗೆ ಚಾಲನೆ ನೀಡಿದ್ದಾರೆ. ಸೆ.30ರಂದು ಬೆಳಗ್ಗೆ 7ಕ್ಕೆ ಯಾತ್ರೆಗೆ ಚಾಲನೆ ಸಿಗಲಿದೆ. ಪಕ್ಷದ ಕಾರ್ಯಕರ್ತರು, ಮುಖಂಡರು, ಜನಪ್ರತಿ ನಿಧಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದರು.

ಜಿಲ್ಲಾ ವೀಕ್ಷಕ ಅಕ್ಬರ್ ಅಲಿ ಮಾತನಾಡಿ, ಕರ್ನಾಟಕದಲ್ಲಿ ಕಾಂಗ್ರೆಸ್‌ನಿಂದ ಆರಂಭವಾಗುತ್ತಿರುವ ಭಾರತ್ ಜೋಡೋ ಪಾದಯಾತ್ರೆ ಗುಂಡ್ಲುಪೇಟೆಯಿಂದ ಆರಂಭವಾಗಿ ದೇಶಾದ್ಯಂತ ಮುಂದುವರೆಯಲಿದೆ ಎಂದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಹಮದ್ ಅಸ್ಗರ್ ಮುನ್ನಾ, ಪ್ರಧಾನ ಕಾರ್ಯದರ್ಶಿ ಬಸವಣ್ಣ, ಅಸಂಘಟಿತ ಕಾರ್ಮಿಕ ಸಂಘದ ಅಧ್ಯಕ್ಷ ಸ್ವಾಮಿ, ಶಿವಪುರ ಗ್ರಾಪಂ ಅಧ್ಯಕ್ಷೆ ಎಂ.ಸಿ.ಮಹದೇವಮ್ಮ, ಮಾದಾಪುರ ಗ್ರಾಪಂ ಅಧ್ಯಕ್ಷೆ ಸುಜನಕುಮಾರಿ, ಗ್ರಾಪಂ ಸದಸ್ಯರಾದ ಸಿದ್ದರಾಜು, ಸದಸ್ಯರಾದ ರಂಗಸ್ವಾಮಿ, ರಾಮು, ಕಾಂತರಾಜು, ಶಿವ ಕುಮಾರ್, ಶಿವಣ್ಣ, ಪ್ರಮೋದ್, ಮಹದೇವ ಸ್ವಾಮಿ, ಗಿರೀಶ್, ಚಂದ್ರು, ನಾಗೇಶ್, ತಾಪಂ ಮಾಜಿ ಸದಸ್ಯ ರಾಜು, ಗುರುಸ್ವಾಮಿ, ಬಸವರಾಜು, ಪಿ.ಲಿಂಗರಾಜು, ಸಿದ್ದರಾಜು, ದೊಡ್ಡರಾಯಪೇಟೆ ಮೂರ್ತಿ, ರವಿಗೌಡ ಮುಖಂಡರು, ಕಾರ್ಯಕರ್ತರು, ಗ್ರಾಪಂ ಸದಸ್ಯರಿದ್ದರು.

ಮಾನವತಾವಾದಿ ಪಂಡಿತ್ ದೀನದಯಾಳ್ ಉಪಾಧ್ಯಾಯ



ಚಾಮರಾಜನಗರ,ಸೆ.25–ದೇಶದಲ್ಲಿ ಉಂಟಾಗುತ್ತಿದ್ದ ಸೈದ್ಧಾಂತಿಕ ಭಿನ್ನಾಭಿಪ್ರಾಯಗಳ ನಡುವೆ ಮಾನವತಾವಾದ ಪ್ರತಿಪಾದಿಸಿದವರು ಅಪ್ರತಿಮ ರಾಷ್ಟ್ರಪ್ರೇಮಿ ಪಂಡಿತ್ ದೀನದಯಾಳ್ ಉಪಾಧ್ಯಾಯರು ಎಂದು ಮೈಸೂರು ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯ ಪ್ರದೀಪ್‌ಕುಮಾರ್ ದೀಕ್ಷಿತ್ ಅಭಿಪ್ರಾಯಪಟ್ಟರು.

ನಗರದ ಡಾ. ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದ ಸುವರ್ಣ ಗಂಗೋತ್ರಿ ಸಭಾಂಗಣದಲ್ಲಿಂದು ಭಾರತ ಸರ್ಕಾರದ ನೆಹರು ಯುವ ಕೇಂದ್ರ, ಕ್ರೀಡಾ ಸಚಿವಾಲಯ, ಡಾ.ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದ ರಾಷ್ಟ್ರೀಯ ಸೇವಾ ಯೋಜನೆ ಹಾಗೂ ಜೈ ಭುವನೇಶ್ವರಿ ಕನ್ನಡ ವೇದಿಕೆ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಳ್ಳಲಾಗಿದ್ದ ಪಂಡಿತ್ ದೀನದಯಾಳ್ ಉಪಾಧ್ಯಾಯ ಅವರ ಜನ್ಮ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಮಾನವತಾವಾದದ ಪ್ರತಿಪಾದಕರಲ್ಲಿ ಬಹುದೊಡ್ಡ ಹೆಸರು ಪಂಡಿತ್ ದೀನದಯಾಳ್ ಉಪಾಧ್ಯಾಯ ಅವರದ್ದು. ವಿವಿಧತೆಯಲ್ಲಿ ಏಕತೆ ಹೊಂದಿರುವ ಭಾರತದ ಅಂದಿನ ರಾಷ್ಟ್ರನಾಯಕರಲ್ಲಿ ನಡೆಯುತ್ತಿದ್ದ ಸೈದ್ಧಾಂತಿಕವಾದ–ವಿವಾದಗಳು, ಸಮಾಜವಾದ, ವಿಮರ್ಶಾವಾದಗಳ ನಡುವೆಯೇ ರಾಷ್ಟ್ರ ಸೇವಾ ಕಾರ್ಯದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡರು. ಯುವಕರಲ್ಲಿ ದೇಶಪ್ರೇಮವನ್ನು ತುಂಬಿದ ದೀನದಯಾಳ್ ಅವರು ಗಾಂಧೀಜಿ ಅವರ ಕನಸಿನ ರಾಷ್ಟ್ರೀಯ ಸೇವಾ ಯೋಜನೆಯನ್ನು ಪರಿಣಾಮಕಾರಿಯಾಗಿ ಕಾರ್ಯರೂಪಕ್ಕೆ ತಂದವರು ಎಂದು ಸ್ಮರಿಸಿದರು.

ಡಾ. ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದ ನಿರ್ದೇಶಕ ಆರ್.ಮಹೇಶ್ ಅಧ್ಯಕ್ಷತೆ ವಹಿಸಿ ಮಾತನಾಡಿದರು. ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ವಾರ್ತಾ ಸಹಾಯಕ ಸಿ.ಸುರೇಶ್ ಕುಮಾರ್, ಡಾ.ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದ ಎನ್‌ಎಸ್‌ಎಸ್ ಅಧಿಕಾರಿ ಮಹೇಶ್, ಜೈ ಭುವನೇಶ್ವರಿ ಕನ್ನಡ ವೇದಿಕೆ ಅಧ್ಯಕ್ಷ ಜಿ.ಬಂಗಾರು, ನೆಹರು ಯುವ ಕೇಂದ್ರದ ಶಂಕರ ಇತರರು ಕಾರ್ಯಕ್ರಮದಲ್ಲಿದ್ದರು. ಕಾರ್ಯಕ್ರಮದ ಆರಂಭದಲ್ಲಿ ನಗರದ ಡಾ.ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದಲ್ಲಿರುವ ಅಂಬೇಡ್ಕರ್ ಪ್ರತಿಮೆಗೆ ಗಣ್ಯರು ಮಾಲಾರ್ಪಣೆ ಮಾಡಿದರು.

ರಾಜ್ಯಮಟ್ಟದ ಚೆಸ್ ಪಂದ್ಯಾವಳಿಗೆ ತೆರೆ; ನಾಲ್ವರು ವಿದ್ಯಾರ್ಥಿಗಳು ರಾಷ್ಟ್ರಮಟ್ಟಕ್ಕೆ



ಚಾಮರಾಜನಗರ, ಸೆ.25–ಜಿಲ್ಲಾ ಚೆಸ್ ಅಸೋಸಿಯೇಷನ್, ಬೆಂಗಳೂರಿನ ಬನಶಂಕರಿ ಸಮೂಹ ಸಂಸ್ಥೆ ಹಾಗೂ ಎಲ್‌ಐಸಿ ಮೈಸೂರು ವಿಭಾಗದ ಜಂಟಿ ಆಶ್ರಯದಲ್ಲಿ ನಗರದಲ್ಲಿ ಮೂರು ದಿನಗಳ ಕಾಲ ನಡೆದ ರಾಜ್ಯ ಮಟ್ಟದ ಫಿಡೆ ಶ್ರೇಯಾಂಕದ 11 ವರ್ಷದೊಳಗಿನ ಮುಕ್ತ (ಓಪನ್) ಮತ್ತು ಬಾಲಕಿಯರ ಚೆಸ್ ಪಂದ್ಯಾವಳಿಗೆ ಭಾನುವಾರ ತೆರೆ ಬಿದ್ದಿತು.

ಬೆಂಗಳೂರಿನ 11 ವರ್ಷದ ಚಿನ್ಮಯ್ ಕೌಶಿಕ್ ಮುಕ್ತ ವಿಭಾಗದಲ್ಲಿ ಚಾಂಪಿಯನ್ ಆದರೆ, ಬಾಲಕಿಯರ ವಿಭಾಗದಲ್ಲಿ 19 ವರ್ಷ ವಯಸ್ಸಿನ ಬೆಂಗಳೂರಿನ ಸಿದ್ಧಿ ರಾವ್ ಚಾಂಪಿಯನ್ ಆಗಿ ಹೊರ ಹೊಮ್ಮಿದರು. 8 ಸುತ್ತುಗಳಲ್ಲಿ ನಡೆದ ಪಂದ್ಯಾವಳಿಯ ಮುಕ್ತ ವಿಭಾಗದಲ್ಲಿ ಹೊಸಪೇಟೆಯ ಸೈಯದ್ ಅಬ್ದುಲ್ ಖಾದರ್ (10) ಹಾಗೂ ಬೆಂಗಳೂರಿನ ಪ್ರಥಮೇಶ್ ಶಶಿಕಾಂತ ದೇಶಮುಖ್ (11), ದ್ವಿತೀಯ ಮತ್ತು ತೃತೀಯ ಸ್ಥಾನ ಗಳಿಸಿದರು. ಬಾಲಕಿಯರ ವಿಭಾಗದಲ್ಲಿ ಮಂಗಳೂರಿನ ರುದ್ರ ರಾಜೀವ್(11) ದ್ವಿತೀಯ ಸ್ಥಾನ ಹಾಗೂ ಬೆಂಗಳೂರಿನ ಶ್ರೇಯ ರಾಜೇಶ್ ತೃತೀಯ ಸ್ಥಾನ ಗಳಿಸಿದರು. ವಿಜೇತರಿಗೆ ನಗದು ಬಹುಮಾನ, ಟ್ರೋಫಿ ಹಾಗೂ ಪ್ರಮಾಣ ಪತ್ರವನ್ನು ವಿತರಿಸಲಾಯಿತು.

ರಾಷ್ಟ್ರಮಟ್ಟಕ್ಕೆ ಆಯ್ಕೆ: ಚಿನ್ಮಯ ಕೌಶಿಕ್, ಸಿದ್ಧಿರಾವ್, ಅಬ್ದುಲ್ ಖಾದರ್ ಮತ್ತು ರುದ್ರ ರಾಜೀವ್ 11 ವರ್ಷದೊಳಗಿನ ಮುಕ್ತ ಹಾಗೂ ಬಾಲಕಿಯರ ವಿಭಾಗ ರಾಷ್ಟ್ರಮಟ್ಟದ ಚಾಂಪಿಯನ್‌ಶಿಪ್‌ಗೆ ಆಯ್ಕೆಯಾದರು. ಹರಿಯಾಣದ ಗುರು ಗ್ರಾಮದಲ್ಲಿ ಅ.28ರಿಂದ ನಡೆಯಲಿರುವ ಟೂರ್ನಿಯಲ್ಲಿ ಇವರು ರಾಜ್ಯವನ್ನು ಪ್ರತಿನಿಧಿಸಲಿದ್ದಾರೆ.

ಆಲೂರಲ್ಲಿ ವಿಶ್ವಕರ್ಮ ಜಯಂತಿ ಆಚರಣೆ



ಆಲೂರು, ಸೆ.25–ಚಾಮರಾಜನಗರ ತಾಲೂಕಿನ ಆಲೂರು ಗ್ರಾಮದಲ್ಲಿ ಗ್ರಾಮ ಪಂಚಾಯಿತಿ ಹಾಗೂ ವಿಶ್ವಕರ್ಮ ಜನಾಂಗದಿಂದ ವಿಶ್ವಕರ್ಮ ಜಯಂತಿಯನ್ನು ವಿಜೃಂಭಣೆಯಿಂದ ಆಚರಿಸಲಾಯಿತು. ವಿಶ್ವಕರ್ಮ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿದ ಎಪಿಎಂಸಿ ನಿರ್ದೇಶಕ ಪ್ರದೀಪ್ ಮಾತನಾಡಿ, ವಿಶ್ವಕರ್ಮರು ಸಮಾಜಕ್ಕೆ ಅಪಾರ ಕೊಡುಗೆ ನೀಡಿದ್ದಾರೆ ಎಂದರು.

ಗ್ರಾಮ ಪಂಚಾಯಿತಿ ಅಧ್ಯಕ್ಷ ಎ.ಸಿ.ಮಹದೇವಸ್ವಾಮಿ ಮಾತನಾಡಿ, ವಿಶ್ವಕರ್ಮ ಜನಾಂಗದ ಮಕ್ಕಳು ಕುಲಕಸುಬಿನ ಜೊತೆಗೆ ವಿದ್ಯಾಭ್ಯಾಸದ ಕಡೆಗೂ ಹೆಚ್ಚಿನ ಗಮನ ಹರಿಸಿ ಸಮಾಜದಲ್ಲಿ ಉನ್ನತ ಸ್ಥಾನಕ್ಕೇರಬೇಕು ಎಂದು ಕಿವಿಮಾತು ಹೇಳಿದರು. ಕಾರ್ಯಕ್ರಮದಲ್ಲಿ ವಿಶ್ವಕರ್ಮ ಜನಾಂಗದ ಮುಖಂಡರು, ಗ್ರಾಪಂ ಉಪಾಧ್ಯಕ್ಷರು, ಸದಸ್ಯರು ಗ್ರಾಮಸ್ಥರಿದ್ದರು.

ನಿಯಂತ್ರಣ ತಪ್ಪಿ ಕೆರೆಗೆ ನುಗ್ಗಿದ ಬಸ್: 6 ಪ್ರಯಾಣಿಕರಿಗೆ ಸಣ್ಣ–ಪುಟ್ಟ ಗಾಯ

ಚಾಮರಾಜನಗರ ಸೆ.25–ಕೆಎಸ್‌ಆರ್‌ಟಿಸಿ ಬಸ್‌ವೊಂದು ಚಾಲಕನ ನಿಯಂತ್ರಣ ತಪ್ಪಿ ಕೆರೆಗೆ ನುಗ್ಗಿರುವ ಘಟನೆ ತಾಲೂಕಿನ ಸಂತೇ ಮರಳ್ಳಿ ಬಳಿ ಭಾನುವಾರ ನಡೆದಿದ್ದು, ಪ್ರಯಾಣಿಕರು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಚಾಮರಾಜನಗರದಿಂದ ಸಂತೇಮರಳ್ಳಿ ಮಾರ್ಗವಾಗಿ ಕೊಳ್ಳೇಗಾಲಕ್ಕೆ ಕೆಎಸ್‌ಆರ್‌ಟಿಸಿ ಬಸ್‌ವೊಂದು ತೆರಳುತ್ತಿತ್ತು. ಬಸ್ಸು ಸಂತೇಮರಳ್ಳಿಯ ರೇಷ್ಮೆಗೂಡಿನ ಮಾರುಕಟ್ಟೆ ಬಳಿ ಬರುತ್ತಿದ್ದಂತೆಯೇ ಚಾಲಕನ ನಿಯಂತ್ರಣ ತಪ್ಪಿ ರಸ್ತೆಯ ಮಗ್ಗುಲಲ್ಲಿದ್ದ ಕೆರೆಗೆ ನುಗ್ಗಿದೆ. ಕೆರೆಯ ಸ್ವಲ್ಪಭಾಗಕ್ಕೆ ಬಸ್ ಹೋಗಿ ನಿಂತಿದ್ದರಿಂದ ಭಾರೀ ಅನಾಹುತ ತಪ್ಪಿದೆ.

ಚಾಲಕ ಮಹೇಶ್ ಸೇರಿದಂತೆ 6 ಮಂದಿ ಪ್ರಯಾಣಿಕರಿಗೆ ಸಣ್ಣ–ಪುಟ್ಟ ಗಾಯಗಳಾಗಿದ್ದು, ಎಲ್ಲರೂ ಸಂತೇಮರಳ್ಳಿಯ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಚಿಕಿತ್ಸೆ ಪಡೆದಿದ್ದಾರೆ.

ಎಸ್.ಎಂ.ಕೃಷ್ಣ ಆಸ್ಪತ್ರೆಗೆ ದಾಖಲು



ಬೆಂಗಳೂರು, ಸೆ.25– ಮಾಜಿ ಮುಖ್ಯಮಂತ್ರಿ ಎಸ್ ಎಂ ಕೃಷ್ಣ ಅವರನ್ನು ಕಳೆದ ರಾತ್ರಿ ಬೆಂಗಳೂರಿನ ಹಳೆ ವಿಮಾನ ನಿಲ್ದಾಣ ರಸ್ತೆಯಲ್ಲಿರುವ ಮಣಿಪಾಲ ಆಸ್ಪತ್ರೆಗೆ ದಾಖಲಿಸಲಾಗಿದೆ. ಅವರು ತೀವ್ರವಾದ ಉಸಿರಾಟದ ಸೋಂಕಿನಿಂದ ಬಳಲುತ್ತಿದ್ದಾರೆ. ಅವರ ಆರೋಗ್ಯ ಸ್ಥಿತಿ ಸ್ಥಿರವಾಗಿದೆ. ಉಸಿರಾಟದ ಬೆಂಬಲ ಸ್ಥಿತಿಯಲ್ಲಿ ಅವರಿದ್ದು ಉಳಿದಂತೆ ಆರೋಗ್ಯವಾಗಿದ್ದಾರೆ. ಅವರ ಆರೋಗ್ಯ ಸ್ಥಿತಿಯನ್ನು ಆರೋಗ್ಯ ಸಚಿವ ಡಾ. ಸುಧಾಕರ್ ಅವರು ಗಮನಿಸುತ್ತಿದ್ದಾರೆ ಎಂದು ಅವರಿಗೆ ಚಿಕಿತ್ಸೆ ನೀಡುತ್ತಿರುವ ವೈದ್ಯರು ತಿಳಿಸಿದ್ದಾರೆ. ಕೃಷ್ಣ ಅವರಿಗೆ ಚಿಕಿತ್ಸೆ ನೀಡುವ ತಂಡದಲ್ಲಿ ಮಣಿಪಾಲ ಆಸ್ಪತ್ರೆಯಲ್ಲಿ ಶ್ವಾಸಕೋಶಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ ಸತ್ಯನಾರಾಯಣ ಮೈಸೂರು ಮತ್ತು ವಿಭಾಗದ ಮುಖ್ಯಸ್ಥ ಡಾ ಸುನೀಲ್ ಕಾರಂತ್ ಕೂಡ ಇದ್ದಾರೆ.

ಇಂದು ಸಿಯುಇಟಿ ಪಿಜಿ ಫಲಿತಾಂಶ

ನವದೆಹಲಿ, ಸೆ.25– ಸ್ನಾತಕೋತ್ತರ ಪದವಿ ಕೋರ್ಸ್‌ಗಳ ಪ್ರವೇಶಕ್ಕಾಗಿ ಸಾಮಾನ್ಯ ವಿಶ್ವವಿದ್ಯಾಲಯ ಪ್ರವೇಶ ಪರೀಕ್ಷೆಯ (ಸಿಯುಇಟಿಪಿಜಿ) ಫಲಿತಾಂಶ ಸೆ.26 ರಂದು ಪ್ರಕಟಗೊಳ್ಳಲಿದೆ ಎಂದು ವಿಶ್ವವಿದ್ಯಾಲಯ ಅನುದಾನ ಆಯೋಗದ ಅಧ್ಯಕ್ಷ ಜಗದೀಶ್ ಕುಮಾರ್ ಹೇಳಿದ್ದಾರೆ. ಸೆ.26ರಂದು ಸಂಜೆ 4 ಗಂಟೆಗೆ ರಾಷ್ಟ್ರೀಯ ಪರೀಕ್ಷಾ ಸಂಸ್ಥೆಯು ಸಿಯುಇಟಿಪಿಜಿ ಫಲಿತಾಂಶವನ್ನು ಪ್ರಕಟಿಸಲಿದೆ ಎಂದು ಅವರು ಟ್ವೀಟ್ ಮಾಡಿದ್ದಾರೆ.

ಒಂದನೇ ಪುಟದಿಂದ

ದ್ರೌಪದಿ ಮುರ್ಮು ಚಾಲನೆ

ಸೆಪ್ಟೆಂಬರ್ 26ರಂದು ಸಂಜೆ 6 ಗಂಟೆಗೆ ಅರಮನೆ ಆವರಣದಲ್ಲಿ ಮುಖ್ಯಮಂತ್ರಿಗಳು ದಸರಾ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಉದ್ಘಾಟಿಸಲಿದ್ದು, ರಾಜ್ಯ ಸಂಗೀತ ವಿದ್ವಾನ್ ಪ್ರಶಸ್ತಿ ಸಹ ಪ್ರದಾನ ಮಾಡುವರು. ಅದೇ ದಿನ ಮಧ್ಯಾಹ್ನ 12 ಗಂಟೆಗೆ ವಿಜ್ಞಾನ ಭವನದಲ್ಲಿ ಕೈಗಾರಿಕಾ ದಸರಾ, 12.30ಕ್ಕೆ ಕಲಾಮಂದಿರದಲ್ಲಿ ಚಲನ ಚಿತ್ರೋತ್ಸವ, ಕುಪ್ಪಣ್ಣ ಪಾರ್ಕ್‌ನಲ್ಲಿ ಫಲಪುಷ್ಪ ಪ್ರದರ್ಶನ, 1 ಗಂಟೆಗೆ ಸ್ಕೌಟ್ಸ್ ಅಂಡ್ ಗೈಡ್ಸ್‌ನಲ್ಲಿ ಆಹಾರ ಮೇಳ, 3.30 ಗಂಟೆಗೆ ದೇವರಾಜ ಅರಸು ವಿವಿಧೋದ್ದೇಶ ಕ್ರೀಡಾಂಗಣದಲ್ಲಿ ದಸರಾ ಕುಸ್ತಿ ಪಂದ್ಯಾವಳಿ, 4 ಗಂಟೆಗೆ ದಸರಾ ವಸ್ತುಪ್ರದರ್ಶನ, ಸಂಜೆ 5 ಗಂಟೆಗೆ ಓವಲ್ ಮೈದಾನದಲ್ಲಿ ಯೋಗ ದಸರಾ ನೃತ್ಯರೂಪಕ, 5.30ಕ್ಕೆ ಅರಮನೆ ಆವರಣದಲ್ಲಿ ಸ್ವಾತಂತ್ರ್ಯ ಅಮೃತ ಮಹೋತ್ಸವದ ಫಲಪುಷ್ಪ ಪ್ರದರ್ಶನ, ಕಲಾಮಂದಿರದಲ್ಲಿ ರಾಜ್ಯ ಮಟ್ಟದ ಶಿಲ್ಪ ಕಲೆಗಳ ಪ್ರದರ್ಶನ ಹಾಗೂ ಸಂಜೆ 6.30 ಗಂಟೆಗೆ ವಿದ್ಯುತ್ ದೀಪಾಲಂಕಾರ ವ್ಯವಸ್ಥೆಯನ್ನು ಗಣ್ಯರು ಉದ್ಘಾಟಿಸುವರು.

ನಂತರ ಮೈಸೂರಲ್ಲಿ ಸೆಪ್ಟೆಂಬರ್ 27ರಂದು ರಂಗೋಲಿ ಸ್ಪರ್ಧೆ, ಯೋಗ ವಾಹಿನಿ, ವೈದ್ಯಕೀಯ ವಸ್ತುಪ್ರದರ್ಶನ, ಯುವ ದಸರಾ, ಸೆಪ್ಟೆಂಬರ್ 28ರಂದು ಯೋಗ ಸಂಭ್ರಮ, ದಸರಾ ದರ್ಶನ, ಕವಿಗೋಷ್ಠಿ, ಸೆಪ್ಟೆಂಬರ್ 29 ರಂದು ಪಾರಂಪರಿಕ ಸೈಕಲ್ ಸವಾರಿ, ಯೋಗಾಸನ ಸ್ಪರ್ಧೆ, ಮಕ್ಕಳ ದಸರಾ, ಉರ್ದು ಕವಿಗೋಷ್ಠಿ ಸೇರಿದಂತೆ ಅಕ್ಟೋಬರ್ 3ರವರೆಗೂ ಹಲವು ಕಾರ್ಯಕ್ರಮಗಳು ನಡೆಯಲಿವೆ.

ವಿಜಯದಶಮಿ ಮೆರವಣಿಗೆ: ನಾಡಹಬ್ಬದ ಪ್ರಮುಖ ಆಕರ್ಷಣೆಯಾದ ವಿಜಯ ದಶಮಿ ಮೆರವಣಿಗೆಯನ್ನು ಅಕ್ಟೋಬರ್ 5 ರಂದು ಸಂಜೆ 5.07ರಿಂದ 5.18 ಗಂಟೆಯೊಳಗೆ ಸಲ್ಲುವ ಶುಭ ಮೀನ ಲಗ್ನದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಚಿನ್ನದ ಅಂಬಾರಿಯಲ್ಲಿ ಆಸೀನಳಾಗುವ ಅಧಿದೇವತೆ ತಾಯಿ ಶ್ರೀ ಚಾಮುಂಡೇಶ್ವರಿ ಉತ್ಸವ ಮೂರ್ತಿಗೆ ಪುಷ್ಪಾರ್ಚನೆ ಮಾಡುವ ಮೂಲಕ ಉದ್ಘಾಟಿಸುವರು.

ಅದಕ್ಕೂ ಮೊದಲು ಮಧ್ಯಾಹ್ನ 2.36 ರಿಂದ 2.50 ಗಂಟೆವರೆಗೆ ಸಲ್ಲುವ ಶುಭ ಮಕರ ಲಗ್ನದಲ್ಲಿ ಅವರು ಅರಮನೆ ಬಲರಾಮ ದ್ವಾರದ ಬಳಿ ನಂದಿ ಧ್ವಜಕ್ಕೆ ಪೂಜೆ ಸಲ್ಲಿಸುವ ಮೂಲಕ ಜಾನಪದ ಕಲಾ ತಂಡಗಳು ಹಾಗೂ ಸ್ತಬ್ಧಚಿತ್ರ ಪ್ರದರ್ಶನಕ್ಕೆ ಚಾಲನೆ ನೀಡುವರು. ಅಂದು ರಾತ್ರಿ 7.30 ಗಂಟೆಗೆ ಬನ್ನಿಮಂಟಪದ ಪಂಜಿನ ಕವಾಯತು ಮೈದಾನದಲ್ಲಿ ಆಕರ್ಷಕ ಪಂಜಿನ ಕವಾಯತು ಪ್ರದರ್ಶನ ನೆರವೇರಲಿದ್ದು, ಅದರೊಂದಿಗೆ 2022ರ ನವರಾತ್ರಿ ಉತ್ಸವಕ್ಕೆ ತೆರೆ ಬೀಳಲಿದೆ.

ಸಾಂಪ್ರದಾಯಿಕ ಸ್ವಾಗತ

ನೇತೃತ್ವದಲ್ಲಿ ಸೋಲಿಗ ಪುಷು ಮಾಲಾ ಕಲಾ ಸಂಘದ 15 ಕಲಾವಿದರು ಮೈಸೂರಿಗೆ ಆಗಮಿಸಿದ್ದು, ಸಾಂಪ್ರದಾಯಿಕ ಉಡುಗೆ–ತೊಡುಗೆ ಬುಡಕಟ್ಟು ಜನಾಂಗದ ಸಂಸ್ಕೃತಿ ಅನಾವರಣಗೊಳಿಸಲಿದ್ದಾರೆ. ಕೊಡಗು ಜಿಲ್ಲೆಯಿಂದ ನೋಡಲ್ ಅಧಿಕಾರಿ ವೆಂಕಟ ಮೂರ್ತಿ ನೇತೃತ್ವದಲ್ಲಿ 13 ಮಂದಿ ಕುಡಿಯರ ಕಲಾ ತಂಡದ ಕಲಾವಿದರು, 22 ಮಂದಿ ಜೇನುಕುರುಬ ಸಮುದಾಯ ಕಲಾವಿದರು ಆಗಮಿಸಿದ್ದಾರೆ. ಕುಡಿಯರು ಅಡಲೆಮರ ಡ್ಯಾನ್ಸ್ ಪ್ರದರ್ಶಿಸಲಿದ್ದಾರೆ. ಜೇನುಕುರುಬ ಸಮುದಾಯ ಹುರುಟಿ ಕುಟ್ಟ ಡಾನ್ಸ್ ಪ್ರದರ್ಶಿಸಲಿದ್ದಾರೆ.

ಸಕಲ ಸಿದ್ಧತೆ

ಬಾಂಬ್ ಪತ್ತೆದಳ, ಶ್ವಾನದಳದ ಸಿಬ್ಬಂದಿ ಪರಿಶೀಲಿಸಿ ಭದ್ರತೆ ಅವಲೋಕಿಸಿದರು.

ಬೆಳ್ಳಿ ರಥದಲ್ಲಿ ನಾಡದೇವಿ ಪ್ರತಿಷ್ಠಾಪನೆ: ದಸರಾ ಮಹೋತ್ಸವದ ಉದ್ಘಾಟನೆಯನ್ನು ಪ್ರತಿ ವರ್ಷದಂತೆ ಚಾಮುಂಡೇಶ್ವರಿ ಉತ್ಸವ ಮೂರ್ತಿಗೆ ಪೂಜೆ ಸಲ್ಲಿಸಿ, ಪುಷ್ಪಾರ್ಚನೆ ಮಾಡುವ ಮೂಲಕ ಚಾಲನೆ ನೀಡಲಾಗುತ್ತದೆ. ಇದಕ್ಕಾಗಿ ದೇವಾಲಯದಲ್ಲಿದ್ದ ಬೆಳ್ಳಿ ರಥವನ್ನು ವೇದಿಕೆಯ ಮೇಲೆ ನಿಲ್ಲಿಸಲಾಗಿದೆ. ಚಿಕ್ಕ ಬೆಳ್ಳಿ ರಥದಲ್ಲಿ ಚಾಮುಂಡೇಶ್ವರಿ ಉತ್ಸವ ಮೂರ್ತಿಯನ್ನಿಟ್ಟು ಪುಷ್ಪಾರ್ಚನೆ ಮಾಡುವ ಮೂಲಕ ಚಾಲನೆ ನೀಡಲಾಗುತ್ತದೆ.

ದೇವಾಲಯದಲ್ಲಿ ಪೂಜೆ: ನವರಾತ್ರಿಯ ಆರಂಭದ ದಿನವಾದ ಸೋಮವಾರ (ಸೆ.26) ಮುಂಜಾನೆ 4.30ರಿಂದಲೇ ಚಾಮುಂಡೇಶ್ವರಿ ದೇವಾಲಯದಲ್ಲಿ ಪ್ರಧಾನ ಆಗಮಿಕ ಡಾ.ಎನ್.ಶಶಿಶೇಖರ್ ದೀಕ್ಷಿತ್ ನೇತೃತ್ವದಲ್ಲಿ ವಿವಿಧ ಪೂಜಾ ಕೈಂಕರ್ಯಗಳು ಜರುಗಲಿವೆ. ಬೆಳಗಿನಿಂದಲೇ ಮಹಾನ್ಯಾಸಪೂರ್ವಕ ರುದ್ರಾಭಿಷೇಕ, ಪಂಚಾಮೃತ ಅಭಿಷೇಕ ಸೇರಿದಂತೆ ವಿವಿಧ ಪೂಜಾ ಕಾರ್ಯಗಳು ನಡೆಯುತ್ತವೆ. ಒಂಭತ್ತು ದಿನವೂ ವಿವಿಧ ಪೂಜಾ ಕಾರ್ಯಗಳು ಜರುಗಲಿದ್ದು, ಪ್ರತಿ ದಿನ ಸಂಜೆ 5 ರಿಂದ 6ರವರೆಗೆ ಮಹಾಬಲೇಶ್ವರ ದೇವಾಲಯ ಮುಂಭಾಗ ಇರುವ ದರ್ಬಾರ್ ಮಂಟಪದಲ್ಲಿ ಚಾಮುಂಡೇಶ್ವರಿ ದೇವಿಗೆ ದರ್ಬಾರ್ ಉತ್ಸವ ನೆರವೇರಲಿದೆ.

ವಿವಿಧ ಅಲಂಕಾರ: ದಸರಾ ಹಿನ್ನೆಲೆಯಲ್ಲಿ ಚಾಮುಂಡೇಶ್ವರಿ ದೇವಿಗೆ 9 ದಿನವೂ ಬೇರೆ ಬೇರೆ ಅಲಂಕಾರ ಮಾಡಲಾಗುತ್ತದೆ. ಮೊದಲ ದಿನವಾದ ನಾಳೆ(ಸೆ.26) ಚಾಮುಂಡೇಶ್ವರಿಗೆ ಬ್ರಾಹ್ಮೀ ಅಲಂಕಾರ, ಸೆ.27ರಂದು ಮಹೇಶ್ವರಿ ಅಲಂಕಾರ, ಸೆ.28ರಂದು ಕೌಮಾರಿ, ಸೆ.29ರಂದು ವೈಷ್ಣವಿ, ಸೆ.30ರಂದು ವಾರಾಹಿ, ಅ.1ರಂದು ಇಂದ್ರಾಣಿ ಅಲಂಕಾರವಿರುತ್ತದೆ. ಅ.2ರಂದು ಸರಸ್ವತಿ ಅಲಂಕಾರ, ಅಂದು ಸಂಜೆ ಕಾಳರಾತ್ರಿ ಪೂಜೆ ನಡೆಯುತ್ತದೆ. ಅ.3ರಂದು ದುರ್ಗಾ ಅಲಂಕಾರ, ಅ.4ರಂದು ಮಹಾಲಕ್ಷ್ಮಿ, ಸೆ.5ರಂದು ಅಶ್ವಾರೋಹಣ ಅಲಂಕಾರ ಮಾಡಿ ವಿಶೇಷ ಪೂಜೆ ಸಲ್ಲಿಸಲಾಗುತ್ತದೆ. ಪ್ರತಿ ದಿನ ಬೆಳಗ್ಗೆ 7.30ರಿಂದ 2 ಗಂಟೆ, ಮಧ್ಯಾಹ್ನ 3.30ರಿಂದ 6 ಗಂಟೆ ಹಾಗೂ ಸಂಜೆ 7.30ರಿಂದ ರಾತ್ರಿ 9ರವರೆಗೆ ಭಕ್ತರು ದೇವಿಯ ದರ್ಶನ ಪಡೆಯುವುದಕ್ಕೆ ಅವಕಾಶ ಕಲ್ಪಿಸಲಾಗಿದೆ.

ಚಿನ್ನದ ಅಂಬಾರಿಯಲ್ಲಿ ಸಾಗುವ ಉತ್ಸವ ಮೂರ್ತಿ: ಚಾಮುಂಡಿಬೆಟ್ಟದಲ್ಲಿ ನಾಳೆ ಗಣ್ಯರು ಪುಷ್ಪಾರ್ಚನೆ ಮಾಡಲಿರುವ ಚಾಮುಂಡೇಶ್ವರಿ ಉತ್ಸವ ಮೂರ್ತಿಯನ್ನು ಅರಮನೆಯಿಂದ ತಂದು, ಚಾಮುಂಡಿಬೆಟ್ಟದ ದೇವಾಲಯದಲ್ಲಿಡಲಾಗಿದೆ. ಪ್ರತಿ ವರ್ಷ ದಸರಾ ಮಹೋತ್ಸವದ ಆರಂಭಕ್ಕೆ 3 ದಿನ ಮೊದಲೇ ಅರಮನೆಯಿಂದ ಚಾಮುಂಡಿಬೆಟ್ಟಕ್ಕೆ ಮೂರ್ತಿ ತರಲಾಗುತ್ತದೆ. ನಂತರ ಸ್ವಚ್ಛಗೊಳಿಸಿ ನೈವೇದ್ಯ ಮಾಡಿ, ಪೂಜೆ ಸಲ್ಲಿಸುವ ಮೂಲಕ ಶಕ್ತಿ ತುಂಬಲಾಗುತ್ತದೆ. ನಾಳೆಯಿಂದ ಅ.5ರವರೆಗೂ ಚಾಮುಂಡಿಬೆಟ್ಟದ ದೇವಾಲಯದಲ್ಲೇ ಪೂಜಿಸಲಾಗುತ್ತದೆ. ಜಂಬೂಸವಾರಿಯ ದಿನ ಬೆಳಗ್ಗೆ ಉತ್ಸವ ಮೂರ್ತಿಯನ್ನು ಅರಮನೆಗೆ ತಂದು ಒಪ್ಪಿಸಲಾಗುತ್ತದೆ. ನಂತರ ಚಿನ್ನದ ಅಂಬಾರಿಯಲ್ಲಿಟ್ಟು ಜಂಬೂಸವಾರಿಯಲ್ಲಿ ಮೆರವಣಿಗೆ ಮಾಡಲಾಗುತ್ತದೆ. ಜಂಬೂಸವಾರಿಯ ನಂತರ ಉತ್ಸವ ಮೂರ್ತಿಯನ್ನು ಅರಮನೆಯಲ್ಲಿಟ್ಟು, ವರ್ಷವಿಡೀ ಪೂಜಿಸಲಾಗುತ್ತದೆ.

ವಿಶಿಷ್ಟ ಮೂರ್ತಿ...

ಅರಸರ ಆಳ್ವಿಕೆ ಅಂತ್ಯದಲ್ಲಿ ಜಯಚಾಮರಾಜ ಒಡೆಯರ್ ಅವರು ಚಿನ್ನದ ಅಂಬಾರಿಯಲ್ಲಿ ಕುಳಿತು ಜಂಬೂಸವಾರಿಯಲ್ಲಿ ಸಾಗುತ್ತಿದ್ದರು. ನಂತರ ಅಂಬಾರಿಯಲ್ಲಿ ಭುವನೇಶ್ವರಿ ವಿಗ್ರಹವನ್ನಿಟ್ಟು ಮೆರವಣಿಗೆಯಲ್ಲಿ ಕೊಂಡೊಯ್ಯಲಾಗುತ್ತಿತ್ತು. ಕೊನೆಗೆ ಚಾಮುಂಡೇಶ್ವರಿ ದೇವಾಲಯದ ಆಡಳಿತ ಮಂಡಳಿ ಸಹಕಾರ ಪಡೆದು ದೇವಾಲಯದ ವತಿಯಿಂದಲೇ ಮೈಸೂರಿನ ಹೆಸರಾಂತ ಶಿಲ್ಪಿಯಿಂದ 1990ರಲ್ಲಿ ಚಾಮುಂಡೇಶ್ವರಿ ಉತ್ಸವ ಮೂರ್ತಿಯನ್ನು ಸಿದ್ಧಪಡಿಸಲಾಯಿತು. ಎಡಭಾಗದ ಅಡಿ ಎತ್ತರವಿರುವ ಈ ಮೂರ್ತಿಗೆ 8 ಕೈಗಳಿವೆ. ಮಹಿಷನ ಮರ್ದಿನಿ ಅವತಾರದಲ್ಲಿ ಅಣಿಗೊಳಿಸಲಾಗಿದೆ. ದೇವಿಯ ಪಾದದಡಿ ಮಹಿಷಾಸುರ ಬಿದ್ದಿದ್ದು ಈ ಉತ್ಸವ ಮೂರ್ತಿ ವಿಶಿಷ್ಟ ಹಾಗೂ ಶಕ್ತಿ ಸ್ವರೂಪಿಣಿ ಮೂರ್ತಿಯಾಗಿದೆ. ನವರಾತ್ರಿಯ ಪೂಜಾ ಮಹೋತ್ಸವಕ್ಕೆ ದೇವಾಲಯದಲ್ಲಿ ಆಗಸ್ತ್ಯ ಹೊತ್ತ ಎಲ್ಲಾ ಪೂಜೆ ನಿತ್ಯವೂ ಪೂರ್ಣಗೊಳ್ಳಲಿದೆ. ನವರಾತ್ರಿಯಲ್ಲಿ ಆರಾಧಿಸಿದರೆ ಒಳಿತಾಗಲಿದೆ ಎಂಬ ಪ್ರತೀತಿ ಇದ್ದು, ಅದಕ್ಕಾಗಿ ಒಂದೊಂದು ದಿನವೂ ಒಂದೊಂದು ದೇವಿಯ ಅಲಂಕಾರ ಮಾಡಲಾಗುತ್ತದೆ.

—ಡಾ.ಎನ್.ಶಶಿಶೇಖರ್ ದೀಕ್ಷಿತ್, ಪ್ರಧಾನ ಆಗಮಿಕ

ಇಂದು ಬೆಳಗ್ಗೆ 11.30ರವರೆಗೆ ಚಾಮುಂಡಿಬೆಟ್ಟಕ್ಕೆ ಭಕ್ತರು ಹಾಗೂ ಪ್ರವಾಸಿಗರ ಪ್ರವೇಶ ನಿರ್ಬಂಧ

ದಸರಾ ಉದ್ಘಾಟನೆಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಆಗಮಿಸುತ್ತಿರುವ ಹಿನ್ನೆಲೆಯಲ್ಲಿ ನಾಳೆ(ಸೆ.26) ಬೆಳಗ್ಗೆ 6ರಿಂದ 11.30ರವರೆಗೆ ಚಾಮುಂಡಿಬೆಟ್ಟಕ್ಕೆ ಭಕ್ತರು ಹಾಗೂ ಪ್ರವಾಸಿಗರ ಪ್ರವೇಶ ನಿರ್ಬಂಧಿಸಲಾಗಿದೆ. ಬೆಟ್ಟಕ್ಕೆ ಸಂಪರ್ಕ ಕಲ್ಪಿಸುವ ಎಲ್ಲಾ ರಸ್ತೆಗಳಲ್ಲೂ ನಾಕಾಬಂದಿ ಹಾಕಲಾಗಿದ್ದು, ಚಾಮುಂಡಿಬೆಟ್ಟದಿಂದ ರಾಷ್ಟ್ರಪತಿಗಳು ನಿರ್ಗಮಿಸಿದ ಬಳಿಕವಷ್ಟೇ ಪ್ರವೇಶಕ್ಕೆ ಅವಕಾಶ ನೀಡುವುದಾಗಿ ಪೊಲೀಸರು ತಿಳಿಸಿದ್ದಾರೆ.

ಎಸ್ಸಿ-ಎಸ್ಟಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ಹೋರಾಟಗಾರರು, ನಿವೃತ್ತ ನೌಕರರಿಗೆ ಸನ್ಮಾನ

ವಿದ್ಯಾರ್ಥಿ ಸಮುದಾಯ, ಯುವ ಜನತೆ ವೈಜ್ಞಾನಿಕ ಮನೋಭಾವ ಬೆಳೆಸಿಕೊಳ್ಳಿ

ವಿಜ್ಞಾನ-ತಂತ್ರಜ್ಞಾನಕ್ಕೆ ಪುರಾಣ ತಳಕು ಹಾಕಲು ಇದು ಸಕಾಲವಲ್ಲ : ಶಾಸಕ ಪ್ರಿಯಾಂಕ್ ಖರ್ಗೆ



ಮೈಸೂರಿನ ಮಹಾರಾಜ ಕಾಲೇಜು ಶತಮಾನೋತ್ಸವ ಭವನದಲ್ಲಿ ನಿವೃತ್ತ ಅಭಿಯಂತರರು, ಹೋರಾಟಗಾರರನ್ನು ಭಾನುವಾರ ಸನ್ಮಾನಿಸಲಾಯಿತು.

ಮೈಸೂರು,ಸೆ25(ಪಿಎಂ)– ವಿಜ್ಞಾನ ಮತ್ತು ತಂತ್ರಜ್ಞಾನದ ಮೂಲಕ ಸಮಾಜವನ್ನು ಕಾಡುವ ಜ್ವಲಂತ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವುದು ಮುಖ್ಯ. ಇದನ್ನು ಬಿಟ್ಟು ವಿಜ್ಞಾನ–ತಂತ್ರಜ್ಞಾನಕ್ಕೆ ಪುರಾಣ ತಳಕು ಹಾಕುವುದಲ್ಲ. ಹಾಗಾಗಿ ವಿದ್ಯಾರ್ಥಿ ಸಮುದಾಯ ಹಾಗೂ ಯುವ ಜನತೆ ವೈಜ್ಞಾನಿಕ ಮನೋಭಾವ ಬೆಳೆಸಿಕೊಳ್ಳಬೇಕು ಎಂದು ಶಾಸಕ ಪ್ರಿಯಾಂಕ್ ಖರ್ಗೆ ಅಭಿಪ್ರಾಯಪಟ್ಟರು.

ಮೈಸೂರಿನ ಮಹಾರಾಜ ಕಾಲೇಜು ಶತಮಾನೋತ್ಸವ ಭವನದಲ್ಲಿ ಕರ್ನಾಟಕ ರಾಜ್ಯ ಸರ್ಕಾರಿ ಎಸ್ಸಿ/ಎಸ್ಟಿ ನೌಕರರ ಸಂಘದ ಮೈಸೂರು ಜಿಲ್ಲಾ ಶಾಖೆ ವತಿಯಿಂದ ಡಾ.ಬಿ.ಆರ್.ಅಂಬೇಡ್ಕರ್ ಅವರ 131ನೇ ಜಯಂತಿ ಪ್ರಯುಕ್ತ 2021–22ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ, ದ್ವಿತೀಯ ಪಿಯುಸಿಯಲ್ಲಿ ಶೇ.80ಕ್ಕಿಂತ ಹೆಚ್ಚು ಅಂಕದೊಂದಿಗೆ ತೇರ್ಗಡೆ ಹೊಂದಿದ ಎಸ್ಸಿ/ಎಸ್ಟಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ಸಮುದಾಯದ ನಿವೃತ್ತ ಅಭಿಯಂತರರು, ಹೋರಾಟಗಾರರಿಗೆ ಭಾನುವಾರ ಹಮ್ಮಿಕೊಂಡಿದ್ದ ಅಭಿನಂದನಾ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಆಧುನಿಕ ಯುಗದಲ್ಲೂ ನಮ್ಮ ವಿಚಾರಗಳು ಪುರಾಣದಲ್ಲೇ ಸಿಲುಕಿಕೊಂಡಿವೆ. ರಾಮಾಯಣ, ಮಹಾಭಾರತ ಸೇರಿದಂತೆ ಪುರಾಣಗಳು ನಮ್ಮ ದೇಶದ ಸಂಸ್ಕೃತಿ. ಇವುಗಳನ್ನು ಒಪ್ಪುವುದರಲ್ಲಿ ಎರಡು ಮಾತಿಲ್ಲ. ಇವನ್ನೂ ಓದಿ ತಿಳಿದುಕೊಳ್ಳಲು ಅಡ್ಡಿಯಿಲ್ಲ. ಆದರೆ ಅಲ್ಲಿನ ವಿಚಾರಗಳನ್ನು ಸರಿಯಾಗಿ ಅರ್ಥೈಸಿಕೊಳ್ಳಬೇಕು. ವೈಜ್ಞಾನಿಕ ಯುಗದಲ್ಲೂ ಸರ್ಕಾರದಲ್ಲಿ ಕುಳಿತವರು ಪುರಾಣವೇ ನಮ್ಮ ಇತಿಹಾಸ, ಅಂದೇ ವಿಜ್ಞಾನ ಮುಂದುವರೆದಿತ್ತು ಎನ್ನುತ್ತಿದ್ದು, ಇದು ಎಷ್ಟು ಸರಿ? ಎಂದು ಪ್ರಶ್ನಿಸಿದರು.

ಪ್ರಧಾನಿ ವಿರುದ್ಧ ಕಿಡಿ: ಪ್ರತಿವರ್ಷ ಇಂಡಿಯನ್ ಸೈನ್ಸ್ ಕಾಂಗ್ರೆಸ್‌ನ ಸಮಾವೇಶ ನಡೆಯುತ್ತದೆ. ಇಲ್ಲಿ ದೇಶದ ವೈಜ್ಞಾನಿಕ ಮುನ್ನಡೆಯ ಬಗ್ಗೆ ಮಹತ್ವದ ಚರ್ಚೆಯಾಗುತ್ತವೆ. ಆದರೆ ಇಂದು ಇಂತಹ ಸಮಾವೇಶದಲ್ಲಿ ಗಣೇಶನಿಗೆ ಆನೆ ತಲೆ ಜೋಡಿಸುವ ಮೂಲಕ ಮೊದಲ ಪ್ಲಾಸ್ಟಿಕ್ ಸರ್ಜರಿ ಭಾರತದಲ್ಲಿ ಆವಿಷ್ಕಾರಗೊಂಡಿತು. ಕರ್ಣನೇ ಮೊದಲ ಟೆಸ್ಟ್‌ಟ್ಯೂಬ್ ಬೇಬಿ ಎಂದು ಪ್ರಧಾನಿಗಳು ಹೇಳುವ ಮೂಲಕ ಸಲ್ಲದ ವಿಚಾರಗಳಿಗೆ ಸಮಾವೇಶ ಸೀಮಿತಗೊಳಿಸಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಪುರಾಣ ಸತ್ಯವೋ ಏನೋ ಗೊತ್ತಿಲ್ಲ: ಪುರಾಣ ಕಾಲ್ಪನಿಕವೋ ಅಥವಾ ಸತ್ಯವೋ ಗೊತ್ತಿಲ್ಲ. ಆದರೆ ವಾಸ್ತವದಲ್ಲಿ ನಿಜಕ್ಕೂ ಆಗಬೇಕಿರುವುದು ವಿಜ್ಞಾನದ ಮೂಲಕ ಬಡತನ ನಿರ್ಮೂಲನೆ, ಉದ್ಯೋಗ ಕಲ್ಪಿಸುವ ಬಗ್ಗೆ ಆಲೋಚಿಸುವುದಾಗಿದೆ. ಇದನ್ನು ಬಿಟ್ಟು ಇಂತಹದ್ದನ್ನು ಹೇಳುವುದು ಸರಿಯೇ? ಎಂದು ಪ್ರಶ್ನಿಸಿದರು.

'ಪ್ರಬುದ್ಧ'ದಲ್ಲಿ ಬಿಜೆಪಿಯಿಂದ ಶೂನ್ಯ ಸಾಧನೆ: ನಾನು ಸಮಾಜ ಕಲ್ಯಾಣ ಸಚಿವನಾಗಿದ್ದಾಗ, ವಿದೇಶದಲ್ಲಿ ವ್ಯಾಸಂಗ ಮಾಡಲಿಚ್ಛಿಸುವ ಎಸ್‌ಸಿ–ಎಸ್‌ಟಿ ವಿದ್ಯಾರ್ಥಿಗಳಿಗೆ ತರಬೇತಿ ಹಾಗೂ ಶುಲ್ಕ ಪಾವತಿಗೆ ಆರ್ಥಿಕ ನೆರವು ನೀಡುವ 'ಪ್ರಬುದ್ಧ' ಯೋಜನೆ ಜಾರಿಗೊಳಿಸಲಾಯಿತು. ನನ್ನ ಅವಧಿಯಲ್ಲಿ ಸುಮಾರು 70 ಮಂದಿ ಇದರ ಪ್ರಯೋಜನ ಪಡೆದರು. ದುರ್ದೈವ ಎಂದರೆ ಈಗಿನ ಸರ್ಕಾರ ಬಂದ ಮೇಲೆ ಕಳೆದ ಮೂರ್‍ನಾಲ್ಕು ವರ್ಷಗಳಲ್ಲಿ ಇದರ ಪ್ರಯೋಜನ ಪಡೆದವರ ಸಂಖ್ಯೆ ಶೂನ್ಯ ಎಂದು ಹೇಳಿದರು.

ಸಾಮಾಜಿಕ ಹೋರಾಟಗಾರರಾದ ಬೆಟ್ಟಯ್ಯ ಕೋಟೆ, ಚಿಕ್ಕ ಜವರಯ್ಯ, ನಿವೃತ್ತ ಅಭಿಯಂತರಾದ ಟಿ.ಆರ್.ಶಿವರಾಮು, ರಾಜಶೇಖರ್ ಎಡಹಳ್ಳಿ, ಆರ್.ಕೆ.ರಾಜು, ರಾಮಚಂದ್ರ, ಸಿದ್ದರಾಮು ಅವರನ್ನು ಸನ್ಮಾನಿಸಲಾಯಿತು. ಅಲ್ಲದೆ, ಮೈಸೂರು ವಿಭಾಗದ 125 ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು. ಕೊಳ್ಳೇಗಾಲದ ಜೇತವನ ಬುದ್ಧವಿಹಾರದ ಶ್ರೀ ಮನೋರಖ್ಖಿತ ಭಂತೇಜಿ, ಉರಿಲಿಂಗಿ ಪೆದ್ದಿ ಮಠದ ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ, ಶ್ರೀ ರಾಮಲಿಂಗ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಶಾಸಕ ಅಶ್ವಿನ್ ಕುಮಾರ್, ಮಾಜಿ ಮೇಯರ್ ಪುರುಷೋತ್ತಮ್, ದಸಂಸ ಪ್ರಧಾನ ಸಂಚಾಲಕ ಮಾವಳ್ಳಿ ಶಂಕರ್, ಸಂಘದ ರಾಜ್ಯಾಧ್ಯಕ್ಷ ಡಿ.ಚಂದ್ರಶೇಖರಯ್ಯ, ಜಿಲ್ಲಾಧ್ಯಕ್ಷ ಪ್ರೊ.ಕೆ.ಸಿದ್ದರಾಜು ಮತ್ತಿತರರು ಹಾಜರಿದ್ದರು.

ಯುವ ಜನತೆ ಕೇಸರಿ ಶಾಲಿನಿಂದ ದೂರವಿರಬೇಕು ; ಪ್ರಿಯಾಂಕ್ ಖರ್ಗೆ

ಮೈಸೂರು,ಸೆ.25(ಪಿಎಂ)– ಯುವ ಜನತೆ ಕೇಸರಿ ಶಾಲಿನಿಂದ ದೂರವಿರಬೇಕೆಂದು ಶಾಸಕ ಪ್ರಿಯಾಂಕ್ ಖರ್ಗೆ ಹೇಳಿದರು.

ಸಮಾರಂಭದಲ್ಲಿ ನೆರೆದಿದ್ದ ಯುವ ಜನತೆ ಉದ್ದೇಶಿಸಿ ಮಾತನಾಡಿದ ಅವರು, ನೀವು ಕೇಸರಿ ಶಾಲು ಹಾಕಿಕೊಳ್ಳುವ ಮುನ್ನ ಈಗಾಗಲೇ ಹಾಕಿಕೊಂಡವರನ್ನು 'ನಿಮ್ಮ ನಾಯಕರ ಮಕ್ಕಳು ಏನು ಮಾಡುತ್ತಿದ್ದಾರೆ' ಎಂದು ಕೇಳಬೇಕು. ಬಿಜೆಪಿ ಶಾಸಕರು, ಮಂತ್ರಿಗಳ ಮಕ್ಕಳು ಕೇಸರಿ ಶಾಲು ಹಾಕಿ ಧರ್ಮ ಮತ್ತು ಗೋರಕ್ಷಣೆಗೆ ಹೋಗುತ್ತಿದ್ದರೆ ನೀವೂ ಹೋಗಿ ಎಂದು ಮಾರ್ಮಿಕವಾಗಿ ನುಡಿದರು.

ಅವರ ಮಕ್ಕಳು ಒಳ್ಳೆಯ ಉದ್ಯಮಿಗಳಾಗಿದ್ದಾರೆ. ವಿದೇಶಗಳಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. ಧರ್ಮ–ಗೋ ರಕ್ಷಣೆಗೆ ಬಡವರು, ಹಿಂದುಳಿದ ವರ್ಗದವರು, ಎಸ್‌ಸಿ–ಎಸ್‌ಟಿಯವರ ಮಕ್ಕಳು ಇವರಿಗೆ ಬೇಕು. ಮುಖ್ಯಮಂತ್ರಿಗಳು, ಅಶ್ವತ್ಥನಾರಾಯಣ, ಎಸ್.ಟಿ.ಸೋಮಶೇಖರ್ ಅವರ ಪುತ್ರರು ಏನು ಮಾಡುತ್ತಿದ್ದಾರೆ ಎಂದು ಒಮ್ಮೆ ನೋಡಿ. ನನ್ನ ಮಗನನ್ನು ಚೆನ್ನಾಗಿಯೇ ಓದಿಸುತ್ತಿದ್ದು, ಡಾ.ಅಂಬೇಡ್ಕರ್ ಅವರು ಹಾಕಿಕೊಟ್ಟ ಹಾದಿಯಲ್ಲಿ ನಡೆಸುವ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದೇನೆ. ನನ್ನ ಮಕ್ಕಳಿಗೆ ಏನು ಬಯಸುತ್ತೇನೋ ಅದನ್ನೇ ಬೇರೆಯವರ ಮಕ್ಕಳಿಗೂ ಬಯಸುತ್ತೇನೆ. ಆದರೆ ಅವರ ಹಾಗಲ್ಲ ಎಂದು ಹೇಳೀದರು.

ಕೆಇಎ, ಕೆಪಿಎಸ್‌ಸಿ, ಕೆಎಸ್‌ಪಿ ಈ ಎಲ್ಲವೂ ಸೇರಿ ಎರಡೂವರೆ ಲಕ್ಷ ಹುದ್ದೆಗಳು ಸರ್ಕಾರದಲ್ಲಿ ಖಾಲಿ ಇವೆ. ಇದಕ್ಕಾಗಿ ಕಳೆದ ಮೂರು ವರ್ಷಗಳಲ್ಲಿ 20 ಲಕ್ಷ ಮಂದಿ ಪರೀಕ್ಷೆ ಬರೆದಿದ್ದಾರೆ. ಆದರೆ ಸರ್ಕಾರವು ಈ ಹುದ್ದೆಗಳನ್ನು ಮಾರಾಟ ಮಾಡುತ್ತಿದೆ. ಆದರೂ ನಾವು ಸುಮ್ಮನೆ ಇದ್ದೇವೆ. ಅಂಬೇಡ್ಕರ್ ಅವರ ಸಂವಿಧಾನ ಹೋದರೆ ನಾವ್ಯಾರು ಬದುಕಲು ಸಾಧ್ಯವಿಲ್ಲ. ಇದನ್ನು ಅರ್ಥ ಮಾಡಿಕೊಳ್ಳಬೇಕು. ಬುದ್ಧ, ಬಸವಣ್ಣ, ಅಂಬೇಡ್ಕರ್ ವಿಚಾರಗಳೇ ಸಂವಿಧಾನದಲ್ಲಿದ್ದು, ಸಮಬಾಳು–ಸಮಪಾಲು ಸರ್ವರಿಗೂ ದೊರೆಯಬೇಕು ಎಂಬುದೇ ಸಂವಿಧಾನದ ಆಶಯ. ಆದರೆ ಕೆಲ ತತ್ವ–ಸಿದ್ಧಾಂತಗಳಿಗೆ ಈ ಸಮಾನತೆ ಬೇಕಿಲ್ಲ ಎಂದು ಮಾರ್ಮಿಕವಾಗಿ ನುಡಿದರು.

ವೀರನಗೆರೆಯ ವೀರಗಲ್ಲುಗಳಿಗೆ ಪುಷ್ಪ ನಮನ



ಮೈಸೂರು, ಸೆ 25– ದಸರಾ ಮಹೋತ್ಸವ ಅಂಗವಾಗಿ ಮೈಸೂರು ನಾಯಕರ ಪಡೆ ವತಿಯಿಂದ ವೀರನಗೆರೆಯಲ್ಲಿ ವೀರಗಲ್ಲುಗಳ ಸ್ಮರಣೋತ್ಸವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು

ಇಂದು ಮಹಾಲಯ ಪಕ್ಷದ 14 ನೇ ದಿನ. ಅಂದರೆ ಚತುರ್ದಶೀ ತಿಥಿ. ಈ ಮಹಾಲಯ ಪಕ್ಷದಲ್ಲಿ ಪ್ರಥಮೆಯಿಂದ ಮಹಾಲಯ ಅಮಾವಾಸ್ಯೆಯವರೆಗೆ ಗತಿಸಿಹೋದ ತಮ್ಮ ಪೂರ್ವಜರಿಗಾಗಿ ಪಿಂಡಪ್ರದಾನ, ತರ್ಪಣ, ಎಳ್ಳುನೀರು, ಎಡೆ ಇಡುವುದು ವಾಡಿಕೆ. ಆದರೆ ನಮಗಾಗಿ, ನಮ್ಮ ರಾಜ್ಯ, ದೇಶಕ್ಕಾಗಿ ಗತಿಸಿ ಹೋದ ವೀರರ ನೆನಪು ಮಾಡಿಕೊಂಡು ಅವರ ತ್ಯಾಗ, ಶೌರ್ಯಗಳಿಗೆ ಕೃತಜ್ಞತೆ ಸಲ್ಲಿಸುವುದು ಅಪರೂಪ. ಆದರೆ ಮೈಸೂರಿನ ನಾಯಕರ ಪಡೆ ಅಧ್ಯಕ್ಷರಾದ ಪಡುವಾರಹಳ್ಳಿಯ ಎಂ. ರಾಮಕೃಷ್ಣ ಅವರು ಇಂತಹ ವಿಶಿಷ್ಟ ಕಾರ್ಯವನ್ನು ಮಾಡುತ್ತಾ ಬಂದಿದ್ದಾರೆ.

ವೀರನಗೆರೆ ಮೈಸೂರಿನ ಇತಿಹಾಸದಲ್ಲಿ ಒಂದು ಸುವರ್ಣಾಕ್ಷರಗಳಲ್ಲಿ ಬರೆದಿಡಬೇಕಾದ ಐತಿಹಾಸಿಕ ಪ್ರದೇಶ. ಇಲ್ಲಿ ನೂರಾರು ವೀರಗಲ್ಲು ಮತ್ತು ಮಹಾಸತಿ ಕಲ್ಲುಗಳಿವೆ ಇವು ಮೈಸೂರಿನ ವೀರ ನಾಯಕರ ಸ್ಮರಣೆಗಾಗಿ ಇರುವ ಕಲ್ಲುಗಳು. ಮೈಸೂರಿನ ಅರಸರಿಗಾಗಿ, ರಾಜ್ಯಕ್ಕಾಗಿ, ಸಮುದಾಯಕ್ಕಾಗಿ ಪ್ರಾಣತ್ಯಾಗ ಮಾಡಿ ವೀರಸ್ವರ್ಗವನ್ನು ಪಡೆದ ಮಹಾನುಭಾವರ ತ್ಯಾಗವನ್ನು ನೆನಪಿಸುವ, ಅವರ ಶೌರ್ಯವನ್ನು ಜಗತ್ತಿಗೆ ಸಾರುತ್ತಿರುವ ವೀರ ಪ್ರತೀಕಗಳು.

ಇಂತಹ ನೂರಾರು ವೀರರಿಗೆ ಇಂದು ಪುಷ್ಪನಮನ ಸಲ್ಲಿಸಿ ಘಾತ ಚತುರ್ದಶಿಯನ್ನು ಅಂದರೆ ಆಯುಧದಿಂದ ಹತರಾದವರಿಗೆ ಮೋಕ್ಷ ಸಿಗಲು ಶ್ರಾದ್ಧ ಮಾಡಬೇಕಾದ ದಿನದಂದೇ ಆ ವೀರರಿಗೆ ಕೃತಜ್ಞತೆಯ ಪೂಜೆಯನ್ನು ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ಈ ವೀರ ಪುರುಷರ ಇತಿಹಾಸದ ಬಗ್ಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಮುಖ್ಯಸ್ಥರಾದ ಡಾ. ಶೆಲ್ವಪ್ಪಿಳ್ಳೈ ಅಯ್ಯಂಗಾರ್ ಅವರು, ಸೇರಿದ್ದ ಜನರಿಗೆ ಮನಮುಟ್ಟುವಂತೆ ವಿವರಿಸಿದರು. ಹಾಗೂ ವೀರ ಹಾಗೂ ಮಾಸ್ತಿ ಕಲ್ಲುಗಳಿಗೆ ಪುಷ್ಪನಮನ ಸಲ್ಲಿಸಿ ಈ ಐತಿಹಾಸಿಕ ಪ್ರದೇಶ ಸಂರಕ್ಷಿಸಲು ಸರ್ಕಾರಕ್ಕೆ ಮನವಿ ಮಾಡಿದರು.

ಶರನ್ನವರಾತ್ರಿ ಪೂಜೆ

ಮೈಸೂರು, ಸೆ. 25–ಮೈಸೂರಿನ ಸ್ವರ್ಣ ನೃಸಿಂಹ ದತ್ತ ಸಾಯಿ ಪೀಠಿಕ ಸೇವಾ ಟ್ರಸ್ಟ್ ವತಿಯಿಂದ ಸೆ.26ರಿಂದ ಅ.4ರವರೆಗೆ ಶರನ್ನವರಾತ್ರಿ ಪೂಜಾ ಮಹೋತ್ಸವವನ್ನು ಜಯನಗರದಲ್ಲಿರುವ ಶ್ರೀ ರಾಮ ಮಂದಿರದಲ್ಲಿ ಏರ್ಪಡಿಸಲಾಗಿದೆ ಶ್ರೀವೆಂಕಟಾಚಲ ಅವಧೂತ ಗುರು ಮಹಾರಾಜರ ದಿವ್ಯ ಸಾನ್ನಿಧ್ಯ ಮತ್ತು ಶ್ರೀ ಅರ್ಜುನ ಅವಧೂತ ಗುರು ಮಹಾರಾಜರ ಉಪಸ್ಥಿತಿಯಲ್ಲಿ ಈ ಪೂಜಾ ಕಾರ್ಯಕ್ರಮ ನಡೆಯಲಿದ್ದು, ಪ್ರತಿದಿನ ಬೆಳಗ್ಗೆ 10 ಗಂಟೆಯಿಂದ 12.30ರವರೆಗೆ ಹೋಮ ನಡೆಯಲಿದೆ ಸೆ26ರಂದು ಶ್ರೀ ಮಹಾಗಣಪತಿ ಹೋಮ, ಶ್ರೀ ರುದ್ರ ಹೋಮ, ಸೆ.27ರಂದು ಶ್ರೀಸುಬ್ರಮಣ್ಯ ಹೋಮ, ಸೆ.28ರಂದು ಶ್ರೀಆದಿತ್ಯಾದಿ ನವಗ್ರಹ ಹೋಮ, ಸೆ.29ರಂದು ಶ್ರೀ ದಕ್ಷಿಣಾಮೂರ್ತಿ ಹೋಮ, ಸೆ.30ರಂದು ಲಲಿತಾ ಹೋಮ, ಅ.1ರಂದು ಶ್ರೀ ಧನ್ವಂತರಿ ಹೋಮ, ಅ.2ರಂದು ಶ್ರೀ ಗಾಯತ್ರಿ ಹೋಮ, ಶ್ರೀ ಬಾಗಲಮುಖಿ ಹೋಮ, ಅ.3ರಂದು ಶ್ರೀ ದುರ್ಗಾ ಹೋಮ, ಅ.4ರಂದು ನವಚಂಡಿ ಹೋಮ ನಡೆಯಲಿದೆ ಅ.3ರಂದು ಸೋಮವಾರ ಸಂಜೆ 7 ಗಂಟೆಗೆ ದುರ್ಗಾ ದೀಪ ನಮಸ್ಕಾರವನ್ನು ಏರ್ಪಡಿಸಲಾಗಿದೆ. ಜೊತೆಗೆ ಪ್ರತಿದಿನ ಮಧ್ಯಾಹ್ನ 1 ಗಂಟೆಗೆ ಪ್ರಸಾದ ವಿನಿಯೋಗವಿರುತ್ತದೆ

ರಾಷ್ಟ್ರಪತಿ ಆಗಮನ ಹಿನ್ನೆಲೆ: ಚಾಮುಂಡಿಬೆಟ್ಟದಲ್ಲಿ ಕೋತಿಗಳ ಸೆರೆ



ಮೈಸೂರು,ಸೆ.25(ಎಂಟಿವೈ)– ದಸರಾ ಮಹೋತ್ಸವ ಉದ್ಘಾಟಿಸಲು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಚಾಮುಂಡಿಬೆಟ್ಟಕ್ಕೆ ಆಗಮಿಸುತ್ತಿರುವ ಹಿನ್ನೆಲೆಯಲ್ಲಿ ಸಾರ್ವಜನಿಕರಿಗೆ ಉಪಟಳ ನೀಡುತ್ತಿದ್ದ 27 ಕೋತಿಗಳನ್ನು ಸೆರೆ ಹಿಡಿದು ಮಲೆ ಮಹದೇಶ್ವರ ಬೆಟ್ಟದ ಅರಣ್ಯದಲ್ಲಿ ಬಿಡುಗಡೆ ಮಾಡಲಾಯಿತು. ಅರಣ್ಯ ಇಲಾಖೆಯ ಈ ಕ್ರಮಕ್ಕೆ ಪ್ರಾಣಿ ಪ್ರಿಯರಿಂದ ತೀವ್ರ ಆಕ್ಷೇಪ ವ್ಯಕ್ತವಾಗಿದೆ.

ಕಳೆದ ಹಲವು ದಿನಗಳಿಂದ ಚಾಮುಂಡಿಬೆಟ್ಟದಲ್ಲಿ ಕೆಲವು ಕೋತಿಗಳು ಭಕ್ತರು ಹಾಗೂ ಪ್ರವಾಸಿಗರ ಮೇಲೆ ದಾಳಿ ನಡೆಸುತ್ತಿದ್ದವು ಎಂಬ ದೂರು ಕೇಳಿ ಬಂದಿತ್ತು ಈ ಹಿನ್ನೆಲೆಯಲ್ಲಿ ಸಾರ್ವಜನಿಕರಿಗೆ ಉಪಟಳ ನೀಡುವ ಕೋತಿ ಸೆರೆಗೆ ಸೂಚನೆ ನೀಡಲಾಗಿತ್ತು. ರಾಷ್ಟ್ರಪತಿಗಳು ಪಾಲ್ಗೊಳ್ಳುವ ಕಾರ್ಯಕ್ರಮದಲ್ಲಿ ಕೋತಿಗಳಿಂದ ಗಣ್ಯರಿಗೆ ಕಿರಿಕಿರಿ ಉಂಟಾಗಬಹುದು ಎಂಬ ಮುಂದಾಲೋಚನೆಯಿಂದ ಇಂದು ದಸರಾ ಉದ್ಘಾಟನಾ ಕಾರ್ಯಕ್ರಮ ನಡೆಯುವ ವೇದಿಕೆ ಸಮೀಪ ಬೋನ್‌ವೊಂದನ್ನು ಇಟ್ಟು, ಕೋತಿಗಳನ್ನು ಆಕರ್ಷಿಸಲು ತಿನಿಸನ್ನು ಹಾಕಿ 27 ಕೋತಿಗಳನ್ನು ಸೆರೆ ಹಿಡಿಯಲಾಯಿತು. ಬಳಿಕ ಸೆರೆ ಹಿಡಿದ ಕೋತಿಗಳನ್ನು ಮಲೆ ಮಹದೇಶ್ವರ ವನ್ಯಧಾಮಕ್ಕೆ ಕೊಂಡೊಯ್ದು ಬಿಡುಗಡೆ ಮಾಡಲಾಯಿತು.

ಕೋತಿಗಳ ಸೆರೆ ಕಾರ್ಯಾಚರಣೆಗೆ ಪ್ರಾಣಿ ಪ್ರಿಯರು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಜನರು ಕೋತಿಗಳಿಗೆ ಆಹಾರ ನೀಡುವ ಮೂಲಕ ಕೋತಿಗಳ ಆಹಾರ ಪದ್ಧತಿ, ಜೀವನ ಶೈಲಿ ಬದಲಿಸಿದ್ದೇ ದಾಳಿ ನಡೆಸಲು ಕಾರಣ. ಮೊದಲು ಕೋತಿಗಳಿಗೆ ಆಹಾರ ನೀಡುವುದನ್ನು ನಿಲ್ಲಿಸಬೇಕು. ಆಗ ಕೋತಿಗಳು ಸಹಜ ಜೀವನ ನಡೆಸುತ್ತವೆ. ಅರಣ್ಯ ಇಲಾಖೆಯೂ ಕೋತಿ ಸೆರೆ ಹಿಡಿಯುವ ಪ್ರಕ್ರಿಯೆ ನಿಲ್ಲಿಸಬೇಕು. ಒಂದೆಡೆಯಿಂದ ಮತ್ತೊಂದೆಡೆಗೆ ಕೋತಿಗಳನ್ನು ಕೊಂಡೊಯ್ದು ಬಿಟ್ಟರೆ, ಬೇರೆ ಕೋತಿಗಳ ಹಿಂಡುಗಳೊಂದಿಗೆ ಕಾದಾಟಕ್ಕಿಳಿದು ಸಾವನ್ನಪ್ಪುತ್ತವೆ ಎಂದು ವಿಷಾದ ವ್ಯಕ್ತಪಡಿಸಿದ್ದಾರೆ.

ಹಸಿರು ನಮ್ಮ ಉಸಿರು



ಮೈಸೂರು ವಿಜಯನಗರ ರೋಟರಿ ಸಂಸ್ಥೆ ಹಾಗೂ ವೈಹೆಚ್‌ಎಐ ಮೈಸೂರು ಘಟಕದ ವತಿಯಿಂದ ಗೋಕುಲಂನ ಇಂಟರ್‌ನ್ಯಾಷನಲ್ ಯೂತ್ ಹಾಸ್ಟೆಲ್ ಸಭಾಂಗಣದಲ್ಲಿ ನಡೆದ ಶಿಕ್ಷಕರ ದಿನಾಚರಣೆಯಲ್ಲಿ 18 ಮಂದಿ ಶಿಕ್ಷಕರನ್ನು ಗೌರವಿಸಲಾಯಿತು. ಚಿತ್ರದಲ್ಲಿ ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್.ರಂಗಪ್ಪ, ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಅಧ್ಯಕ್ಷ ವೀರಣ್ಣ ಅರ್ಕಸಾಲಿ, ರೋಟರಿ ವಲಯ 8ರ ಮಾಜಿ ಅಸಿಸ್ಟೆಂಟ್ ಗವರ್ನರ್ ಸಿ.ಎಸ್. ರವಿಶಂಕರ್, ರೋಟರಿ ವಿಜಯನಗರ ಅಧ್ಯಕ್ಷ ರೋ. ಜಗದೀಶ, ಕಾರ್ಯದರ್ಶಿ ಕೆ.ಜಿ. ಮಂಜುನಾಥ್ ಹಾಗೂ ಇತರರನ್ನು ಕಾಣಬಹುದು.

ಮಹಿಷ ದಸರಾ ಆಚರಣೆಗೆ ಅವಕಾಶ ನೀಡದ ಜಿಲ್ಲಾಡಳಿತದ ವಿರುದ್ಧ ಆಚರಣಾ ಸಮಿತಿ ಆಕ್ರೋಶ

ನೈಜ ಇತಿಹಾಸ ತಿಳಿಸದ ಸರ್ಕಾರದಿಂದ ಮಹಿಷನಿಗೆ ಅಗೌರವ:ಆರೋಪ



ಮೈಸೂರು, ಸೆ.25(ಆರ್‌ಕೆಬಿ)– ಮಹಿಷ ದಸರಾ ಆಚರಣೆಗೆ ಜಿಲ್ಲಾಡಳಿತ ಅವಕಾಶ ನೀಡುತ್ತಿಲ್ಲ ಎಂದು ಮಹಿಷಾ ದಸರಾ ಆಚರಣಾ ಸಮಿತಿಯ ಸದಸ್ಯರು ಭಾನುವಾರ ಮೈಸೂರಿನ ಅಶೋಕಪುರಂ ಡಾ.ಬಿ.ಆರ್. ಅಂಬೇಡ್ಕರ್ ಉದ್ಯಾನವನದಲ್ಲಿ ಮುಖಂಡರ ಸಭೆ ನಡೆಸಿ, ಜಿಲ್ಲಾಡಳಿತದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಉರಿಲಿಂಗಿ ಪೆದ್ದಿಮಠದ ಜ್ಞಾನಪ್ರಕಾಶ ಸ್ವಾಮೀಜಿ, ಸಾಹಿತಿ ಕೆ.ಎಸ್.ಭಗವಾನ್, ಮಾಜಿ ಮೇಯರ್ ಪುರುಷೋತ್ತಮ್, ಚಿಂತಕ ಪ್ರೊ.ಪಿ.ವಿ.ನಂಜರಾಜೇ ಅರಸ್ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ನಗರಪಾಲಿಕೆ ಸದಸ್ಯೆ ಬೇಗಂ ಪಲ್ಲವಿ, ಮುಖಂಡರಾದ ಮಲೆಯೂರು ಸೋಮಯ್ಯ, ಸಿದ್ದಸ್ವಾಮಿ, ಸಮಿತಿಯ ಮಾಜಿ ಉಪಾಧ್ಯಕ್ಷ ಚಿಕ್ಕಜವರಪ್ಪ ಇನ್ನಿತರರು ಭಾಗವಹಿಸಿ, ಜಿಲ್ಲಾಡಳಿತದ ಮಹಿಷ ವಿರೋಧಿ ಧೋರಣೆಯನ್ನು ಖಂಡಿಸಿದರು,

ಈ ಸಂದರ್ಭದಲ್ಲಿ ಮಾತನಾಡಿದ ಜ್ಞಾನಪ್ರಕಾಶ ಸ್ವಾಮೀಜಿ, ಮಹಿಷ ಅಂದರೆ ಭೂಮಿ, ಈಶ ಎಂದರೆ ಒಡೆಯ, ಮಹಿಷ ಈ ನಾಡಿನ ರಾಜ. ಮೈಸೂರು ದಸರಾ ಎಂದರೆ ಮೊದಲಿಗೆ ನೆನಪಾಗುವುದು ಮಹಿಷ. ಇಂತಹ ನೈಜ ಇತಿಹಾಸವನ್ನು ತಿಳಿಸಬೇಕಾದ ಸರ್ಕಾರವೇ ಮಹಿಷನನ್ನು ಅಗೌರವದಿಂದ ಕಾಣುತ್ತಿದೆ ಚಾಮುಂಡಿಬೆಟ್ಟಕ್ಕೆ ಸೋಮವಾರ ಆಗಮಿಸುತ್ತಿರುವ ರಾಷ್ಟ್ರಪತಿ ದ್ರೌಪದಿ ಮುರ್ಮು ಆದಿವಾಸಿ ಮಹಿಳೆ. ಅವರೇ ಮಹಿಷನಿಗೆ ಪುಷ್ಪಾರ್ಚನೆ ಮಾಡಿದರೆ ಮಹಿಷನಿಗೆ ಗೌರವ ಸಲ್ಲಿಸಿದಂತಾಗುತ್ತದೆ ಎಂದರು ಹೇಳಿದರು.

ಮಹಿಷ ದಸರೆಗೆ ಅವಕಾಶ ನೀಡದೆ ತಡೆಗಟ್ಟುತ್ತಿರುವವರ ವಿರುದ್ಧ ಹಾಗೂ ಜಿಲ್ಲಾಧಿಕಾರಿಗಳ ವಿರುದ್ಧ ಅಟ್ರಾಸಿಟಿ ಪ್ರಕರಣ ದಾಖಲಿಸಲಿದ್ದೇವೆ. ಚಾಮುಂಡಿ ಎಂಬುದು ಕೇವಲ ಕಾಲ್ಪನಿಕ. ಮಹಿಷನನ್ನು ಬಟ್ಟೆಯಿಂದ ಮರೆ ಮಾಡಿರುವುದು ದಸರೆಗೆ ಅವಮಾನ ಮಾಡಿದಂತಾಗಿದೆ ಎಂದು ಆರೋಪಿಸಿದರು.

ಸಾಹಿತಿ ಪ್ರೊ.ಕೆ.ಎಸ್.ಭಗವಾನ್ ಮಾತನಾಡಿ, ಮಹಿಷೂರು ಎಂದೇ ರಾಜಮಹಾರಾಜರ ಕಾಲದ ದಾಖಲೆಗಳಲ್ಲಿ ಇದೆ ಸಹಿ ಮಾಡುವಾಗಲು ಮಹಾರಾಜರು ಮಹಿಷೂರು ಎಂದೇ ಮಾಡುತ್ತಿದ್ದರು. ಹಾಗಾಗಿಯೇ ಆ ಕಾಲದಲ್ಲಿಯೇ ಮಹಿಷನ ಪ್ರತಿಮೆಯನ್ನು ರಾಜರೇ ಸ್ಥಾಪಿಸಿದ್ದಾರೆ. ಆತ ಕೆಟ್ಟ ವ್ಯಕ್ತಿಯಾಗಿದ್ದರೆ ಅವರೇಕೆ ಮಹಿಷನ ಪ್ರತಿಮೆ ಸ್ಥಾಪನೆ ಮಾಡುತ್ತಿದ್ದರು ಎಂದು ಪ್ರಶ್ನಿಸಿದರು.

ಮಾಜಿ ಮೇಯರ್ ಪುರುಷೋತ್ತಮ್ ಮಾತನಾಡಿ, ಮಹಿಷ ದಸರಾ ದಲಿತರು ಆಚರಿಸುವ ಪ್ರಮುಖ ಹಬ್ಬ. ಅದಕ್ಕೆ ತಡೆ ಒಡ್ಡಿ ವಿರೋಧಿಸಲಾಗುತ್ತಿದೆ ಎಂದರೆ ಅದು ಅಸ್ಪೃಶ್ಯತಾ ಆಚರಣೆಯಾಗಿದೆ. ಇದು ಇಡೀ ಮೈಸೂರಿಗೆ ಅಗೌರವ ಮಾಡಿದಂತೆ. ಸಂವಿಧಾನದ ಅಡಿಯಲ್ಲಿಯೇ ಮಹಿಷನಿಗೆ ಪುಷ್ಪಾರ್ಚನೆ ಮಾಡುವಂತೆ ಜಿಲ್ಲಾಡಳಿತಕ್ಕೆ ಮನವಿ ನೀಡಿದ್ದೇವೆ. ಸಮಾನತೆ ಪಾಲಿಸಬೇಕಾದ ಅಧಿಕಾರಿಗಳೇ ಅಸಮಾನತೆ ಪ್ರದರ್ಶಿಸುತ್ತಿದ್ದಾರೆ. ಇದಕ್ಕೆ ನಮ್ಮ ಸಂಪೂರ್ಣ ವಿರೋಧವಿದೆ ಎಂದು ಹೇಳಿದರು.

ಮಹಿಷಾಸುರನ ಪೂಜೆಗೆ ಅವಕಾಶ ನಿರಾಕರಿಸಿದ ಹೈಕೋರ್ಟ್

ಅಧಿಕೃತ ದಾಖಲೆ ಸಲ್ಲಿಸಲು ದೂರುದಾರರಿಗೆ ನ್ಯಾಯಾಲಯ ಸೂಚನೆ

ಬೆಂಗಳೂರು, ಸೆ.25– ಮೈಸೂರಿನ ಚಾಮುಂಡಿಬೆಟ್ಟದಲ್ಲಿನ ಮಹಿಷಾಸುರನ ಪ್ರತಿಮೆ ಪೂಜೆ ವಿವಾದ ಹೈಕೋರ್ಟ್ ಮೆಟ್ಟಿಲೇರಿದ್ದು, ಪ್ರತಿಮೆ ಪೂಜೆ ಅವಕಾಶಕ್ಕೆ ಹೈಕೋರ್ಟ್ ನಿರಾಕರಿಸಿದೆ.

ದಸರಾ ಹಬ್ಬದ ವೇಳೆ ಪೂಜೆಗೆ ಅವಕಾಶ ಕೋರಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾ.ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಪೂಜೆಗೆ ಅವಕಾಶ ನಿರಾಕರಿಸಿದ್ದು, ಈ ಸಂಬಂಧ ಹೆಚ್ಚಿನ ವಿವರಣೆಗಾಗಿ ಪರಿಶಿಷ್ಟ ಜಾತಿಗಳ ರಾಷ್ಟ್ರೀಯ ಆಯೋಗಕ್ಕೆ ತುರ್ತು ನೋಟಿಸ್ ನೀಡಿದೆ. ಮೈಸೂರಿನ ಅಶೋಕಪುರಂನ ವಕೀಲ ಪಿ.ಚಂದ್ರಶೇಖರ್ ಅವರು ಪೂಜೆಗೆ ಅವಕಾಶ ಕೋರಿ ಅರ್ಜಿ ಸಲ್ಲಿಸಿದ್ದರು.

ಅಲ್ಲದೆ ಮಹಿಷಾಸುರನ ಪ್ರತಿಮೆಗೆ ಅಗ್ರಪೂಜೆ ಸಲ್ಲಿಸಲು ಅಡ್ಡಿಪಡಿಸಲಾಗುತ್ತಿದೆ. ಪ್ರತಿಮೆಗೆ ಪುಷ್ಪಾರ್ಚನೆ ಮಾಡಲು ಮೈಸೂರು ಜಿಲ್ಲಾಡಳಿತಕ್ಕೆ ನಿರ್ದೇಶನ ನೀಡಬೇಕು ಎಂದು ಅರ್ಜಿಯಲ್ಲಿ ಕೋರಲಾಗಿತ್ತು. ಅರ್ಜಿದಾರರ ಮಧ್ಯಂತರ ಮನವಿಯನ್ನು ಸಾರಾಸಗಟಾಗಿ ಹೈಕೋರ್ಟ್ ತಳ್ಳಿಹಾಕಿದೆ.

ಮಹಿಷ ಪ್ರತಿಮೆಗೆ ಪೂಜೆ ಮಾಡಿದ ನಂತರ ಚಾಮುಂಡಿಗೆ ಪೂಜೆ ಸಲ್ಲಿಸಿದ ಬಗ್ಗೆ ಯಾವುದಾದರೂ ವಿವರಗಳಿದ್ದರೆ ಸಲ್ಲಿಸಲು ಪೀಠ ಸೂಚನೆ ನೀಡಿತು. ಜತೆಗೆ ಅಧಿಕೃತ ಮತ್ತು ಪರಿಗಣನೆಗೆ ಅರ್ಹ ವಿವರಗಳು ಲಭ್ಯವಿದ್ದರೆ ಅವುಗಳನ್ನು ಕೋರ್ಟ್‌ಗೆ ಹಾಜರುಪಡಿಸುವಂತೆ ಅರ್ಜಿದಾರರ ಪರ ವಕೀಲ ಅಬೂಬಕರ್ ಶಫಿ ಅವರಿಗೆ ಸೂಚನೆ ನೀಡಿತು.

ದೀಪದ ಬೆಳಕಲ್ಲಿ ಪ್ರಜ್ವಲಿಸುತ್ತಿರುವ ಸಾಂಸ್ಕೃತಿಕ ನಗರಿ





ಸೆ.28ಕ್ಕೆ ಅಪ್ಪು ನಮನದೊಂದಿಗೆ ಯುವ ದಸರಾಗೆ ಚಾಲನೆ



ಮೈಸೂರು, ಸೆ.25– ದಸರಾ ಮಹೋತ್ಸವದ 'ಯುವ ದಸರಾ'ದ ಮೊದಲ ದಿನವೇ 'ಅಪ್ಪು ನಮನ' ಕಾರ್ಯಕ್ರಮ ನಡೆಯಲಿದ್ದು, ವಿಶೇಷ ಆಹ್ವಾನಿತರನ್ನಾಗಿ ನಟ ಶಿವರಾಜ್ ಕುಮಾರ್ ಮತ್ತು ಪುನೀತ್ ರಾಜ್‌ಕುಮಾರ್ ಪತ್ನಿ ಅಶ್ವಿನಿ ಆಗಮಿಸಲಿದ್ದಾರೆ.

ನಗರದ ಮಹಾರಾಜ ಕಾಲೇಜು ಮೈದಾನದಲ್ಲಿ ಹಮ್ಮಿಕೊಂಡಿದ್ದ 'ಯುವ ದಸರಾ' ಕಾರ್ಯಕ್ರಮವನ್ನು 7 ದಿನಗಳ ಬದಲಿಗೆ 6 ದಿನಗಳಿಗೆ ಕಡಿತಗೊಳಿಸಲಾಗಿದೆ. ಈ ಮುಂಚೆ ತಿಳಿಸಿದ್ದಂತೆ ಸೆ .27 ರಿಂದ 7 ದಿನಗಳವರೆಗೆ ಹಮ್ಮಿಕೊಳ್ಳಲಾಗಿತ್ತು ಪರಿಷ್ಕೃತ ಪಟ್ಟಿಯ ಪ್ರಕಾರ ಸೆ27 ರ ಬದಲಿಗೆ ಸೆ.28 ರಂದು ಚಾಲನೆ ಪಡೆಯಲಿದೆ ಎಂದು ಯುವ ದಸರಾ ಉಪಸಮಿತಿ ಉಪ ವಿಶೇಷಾಧಿಕಾರಿಯೂ ಆದ ಜಿಲ್ಲಾ ಎಸ್ಪಿ ಆರ್. ಚೇತನ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸೆ.28ರ ಸಂಜೆ 6 ಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಉದ್ಘಾಟನೆ ನೆರವೇರಿಸಲಿದ್ದಾರೆ, ನಟ ಸುದೀಪ್ ಭಾಗವಹಿಸದಿರುವ ಕಾರಣದಿಂದಾಗಿ ವಿಶೇಷ ಆಹ್ವಾನಿತರನ್ನಾಗಿ ನಟ ಶಿವರಾಜ್ ಕುಮಾರ್ ಮತ್ತು ಪುನೀತ್ ರಾಜ್‌ಕುಮಾರ್ ಪತ್ನಿ ಅಶ್ವಿನಿ ಅವರನ್ನು ಆಹ್ವಾನಿಸಲಾಗಿದೆ. ಯುವಜನರಿಗೆ ಸ್ಫೂರ್ತಿ ದೊರೆಯಲೆಂದು ಮೊದಲ ದಿನವೇ 'ಅಪ್ಪು ನಮನ' ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ'

ಪರಿಷ್ಕೃತ ಪಟ್ಟಿಯ ಪ್ರಕಾರ ಉದ್ಘಾಟನೆ ನಂತರ ಸೆ.28 ರಂದು 'ಅಪ್ಪು ನಮನ' ಕಾರ್ಯಕ್ರಮದಲ್ಲಿ ಸಂಗೀತ ನಿರ್ದೇಶಕ ಗುರುಕಿರಣ್,' ಗಾಯಕ ವಿಜಯಪ್ರಕಾಶ್ ಮತ್ತು ಗಾಯಕ ಕುನಾಲ್ ಗಾಂಜಾವಾಲ ಕಾರ್ಯಕ್ರಮ ನಡೆಸಿಕೊಡಲಿದ್ದಾರೆ.

ಸೆ.29ರಂದು ಯುವ ಸಂಭ್ರಮ ವಿಜೇತರಿಂದ ನೃತ್ಯ ಪ್ರದರ್ಶನ, ಸ್ಥಳೀಯ ನೃತ್ಯ ತಂಡದಿಂದ ನೃತ್ಯ ಪ್ರದರ್ಶನ ಪವನ್ ಡ್ಯಾನ್ಸರ್ ಹಾಗೂ ಇತರರಿಂದ ನೃತ್ಯ ರೂಪಕದ ಜೊತೆ ಖ್ಯಾತ ಚಲನಚಿತ್ರ ಹಿನ್ನಲೆ ಗಾಯಕಿ ಕನ್ನಿಕಾ ಕಪೂರ್ ಸಂಗೀತ ರಸಸಂಜೆ ಆಯೋಜಿಸಲಾಗಿದೆ.

ಸೆ.30 ರಂದು ಯುವ ಸಂಭ್ರಮ ವಿಜೇತರು ಮತ್ತು ಸ್ಥಳೀಯ ಕಲಾವಿದರ ಕಾರ್ಯಕ್ರಮ ಮತ್ತು ಲೇಸರ್ ಆಕ್ಟ್ & ಸಿಗ್ನೆಚರ್ ಗ್ರೂಪ್ ನೃತ್ಯ ತಂಡದಿಂದ ನೃತ್ಯ ರೂಪಕ ಜೊತೆಗೆ ಸ್ಯಾಂಡಲ್ ವುಡ್ ನೈಟ್ ಕಾರ್ಯಕ್ರಮ ನಡೆಯಲಿದೆ.


ಅ.1ರಂದು ಯುವ ಸಂಭ್ರಮ ವಿಜೇತರಿಂದ ನೃತ್ಯ ಪ್ರದರ್ಶನ, ಖ್ಯಾತ ಚಲನಚಿತ್ರ ಹಿನ್ನಲೆ ಗಾಯಕ ಹನಿ ಸಿಂಗ್ ಹಾಗೂ ಖ್ಯಾತ ಚಲನಚಿತ್ರ ಹಿನ್ನಲೆ ಗಾಯಕಿ ಡಾ.ಶಮಿತ ಮಲ್ನಾಡ್ ಸಂಗೀತ ರಸಮಂಜರಿ ಕಾರ್ಯಕ್ರಮವಿರಲಿದೆ

ಅ.2ರಂದು ಯುವ ಸಂಭ್ರಮ ವಿಜೇತರಿಂದ ನೃತ್ಯ ಪ್ರದರ್ಶನ, ನಟಿ ಹರ್ಷಿಕಾ ಪೂಣಚ್ಚ ಮತ್ತು ನಟ ವಿಜಯ ರಾಘವೇಂದ್ರ ಕನ್ನಡ ಸ್ಟಾರ್ ನೈಟ್ ಕಾರ್ಯಕ್ರಮ ಆಯೋಜಿಸಲಾಗಿದೆ. ಇದರೊಟ್ಟಿಗೆ ಖ್ಯಾತ ಚಲನಚಿತ್ರ ಹಿನ್ನಲೆ ಗಾಯಕಿ ಮಂಗ್ಲಿ ಮತ್ತು ಹಿನ್ನಲೆ ಗಾಯಕ ಅಮಿತ್ ತ್ರಿವೇದಿ ರವರಿಂದ ಸಂಗೀತ ರಸಮಂಜರಿ ನಡೆಯಲಿದೆ.

ಅ.3 ರಂದು ಯುವ ಸಂಭ್ರಮ ವಿಜೇತರಿಂದ ನೃತ್ಯ ಪ್ರದರ್ಶನ, ಸುಪ್ರಿಯ ರಾಮ್ ಮತ್ತು ಮಹಿಳಾ ಬ್ಯಾಂಡ್ ತಂಡದಿಂದ ಪ್ರದರ್ಶನ ಫ್ಯಾಷನ್ ಷೋ ನಡೆಯಲಿದ್ದು, ಜೊತೆಗೆ ಹಿನ್ನಲೆ ಗಾಯಕಿ ಸುನಿಧಿ ಚೌಹಾಣ್ ಸಂಗೀತ ರಸಮಂಜರಿ ಕಾರ್ಯಕ್ರಮ ಆಯೋಜಿಸಲಾಗಿದೆ.



ಮೈಸೂರಿನ ಚಾಮರಾಜ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಅರ್ಹ ಫಲಾನುಭವಿಗಳಿಗೆ ವಿವಿಧ ಇಲಾಖೆಗಳಿಂದ ಸರ್ಕಾರಿ ಸವಲತ್ತುಗಳ ವಿತರಣಾ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ಅವರನ್ನು ಶಾಸಕ ನಾಗೇಂದ್ರ ಅಭಿನಂದಿಸಿದರು. ಕ್ಷೇತ್ರದ ಮುಖಂಡರಾದ ಪುನೀತ್, ರಮೇಶ್, ಸಚ್ಚಿನ್, ಗುರು, ಶಿವು ಮತ್ತಿತರರು ಉಪಸ್ಥಿತರಿದ್ದರು.



ಮೈಸೂರಿನ ನರಸಿಂಹರಾಜ ವಿಧಾನಸಭಾ ಕ್ಷೇತ್ರದ ಬಿಜೆಪಿ ಮುಖಂಡ, ಮಾಜಿ ಮೇಯರ್ ಸಂದೇಶ್ ಸ್ವಾಮಿ ಅವರ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಶಾಸಕ ಎಲ್.ನಾಗೇಂದ್ರ, ಸೇಫ್‌ವ್ಹೀಲ್ ಸಂಸ್ಥೆಯ ಬಿ.ಎಸ್.ಪ್ರಶಾಂತ್ ಹಾಗೂ ಸ್ನೇಹಿತರು ಶುಭಾಶಯ ಕೋರಿದರು.



ಮೈಸೂರಿನ ನರಸಿಂಹರಾಜ ಕ್ಷೇತ್ರದ ಆನಂದ್ ಹಾಗೂ ಸ್ನೇಹಿತರು ಮಾಜಿ ಮೇಯರ್ ಸಂದೇಶ್ ಸ್ವಾಮಿ ಅವರನ್ನು ಅಭಿನಂದಿಸಿ, ಹುಟ್ಟುಹಬ್ಬದ ಶುಭಾಶಯ ತಿಳಿಸಿದರು.

ಮೈಸೂರು ಮಿತ್ರ

ತಿ.ನ.ಪುರ ತಾಲೂಕಿಗೆ ಆಲಗೂಡು ಪಿಎಸಿಎಸ್ ಉತ್ತಮ ಸಂಘ

ಸರ್ವ ಸದಸ್ಯರ ಮಹಾಸಭೆಯಲ್ಲಿ ಸಂಘದ ಅಧ್ಯಕ್ಷ ಬಿ.ವೀರಭದ್ರಪ್ಪ ಹರ್ಷ



ತಿ.ನರಸೀಪುರ, ಸೆ.25– ಸರ್ವ ಸದಸ್ಯರ ಸಹಕಾರದಿಂದ ಆಲಗೂಡು ಕೃಷಿ ಪತ್ತಿನ ಸಹಕಾರ ಸಂಘ ಕಳೆದ ಬಾರಿಗಿಂತ ಹೆಚ್ಚಿನ ಲಾಭ ಗಳಿಸಿದ್ದು, ತಾಲೂಕಿನಲ್ಲೇ ಉತ್ತಮ ಸಹಕಾರ ಸಂಘ ಎಂಬ ಕೀರ್ತಿಗೆ ಪಾತ್ರವಾಗಿದೆ ಎಂದು ಸಂಘದ ಅಧ್ಯಕ್ಷ ಬಿ.ವೀರಭದ್ರಪ್ಪ ಹರ್ಷ ವ್ಯಕ್ತಪಡಿಸಿದರು.

ತಾಲೂಕಿನ ಹೆಳವರಹುಂಡಿ ಗ್ರಾಮದಲ್ಲಿರುವ ಆಲಗೂಡು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಕಚೇರಿ ಆವರಣದಲ್ಲಿ ನಡೆದ ಸಂಘದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಸಾಲ ಪಡೆದ ಸದಸ್ಯರು ಸಕಾಲಕ್ಕೆ ಸಾಲ ಮರುಪಾವತಿ ಮಾಡುತ್ತಿರುವುದರಿಂದ ಸಂಘವು ಪ್ರಸಕ್ತ ಸಾಲಿನಲ್ಲಿ 5,33,110 ರೂ. ನಿವ್ವಳ ಲಾಭಾಂಶ ಗಳಿಸಿದೆ. ಕಳೆದ ಬಾರಿಗಿಂತ ಈ ಬಾರಿ ಲಾಭಾಂಶದಲ್ಲಿ ಏರಿಕೆಯಾಗಿದೆ. ಅಲ್ಲದೇ ಸಂಘವು ಅಪೆಕ್ಸ್ ಬ್ಯಾಂಕ್‌ನಿಂದ ತಾಲೂಕಿನಲ್ಲಿಯೇ ಅತ್ಯುತ್ತಮ ಸೊಸೈಟಿ ಎಂಬ ಅವಾರ್ಡ್ ಪಡೆದಿದೆ ಎಂದು ಸಂತಸ ವ್ಯಕ್ತಪಡಿಸಿದರು.

ಸಂಘದ ಸದಸ್ಯರು ಆಕಸ್ಮಿಕ ಮರಣ ಹೊಂದಿದಲ್ಲಿ ಸಂಘದಿಂದ 5 ಸಾವಿರ ರೂ.ಗಳನ್ನು ಅವರ ಕುಟುಂಬಕ್ಕೆ ನೀಡುವ ಹೊಸ ಯೋಜನೆ, ಕಡಿಮೆ ಬಡ್ಡಿ ದರದಲ್ಲಿ ಚಿನ್ನದ ಮೇಲೆ ಸಾಲ ನೀಡುವ ಯೋಜನೆ ಜಾರಿಗೆ ತರಲಾಗಿದೆ. ನೂತನ ಕಟ್ಟಡದಲ್ಲಿ ಫರ್ಟಿಲೈಸರ್ ಅಂಗಡಿ ತೆರೆಯಲು ಚಿಂತನೆ ನಡೆಸಲಾಗಿದೆ ಎಂದರು.

ಸವಲತ್ತುಗಳ ಭರವಸೆ: ಸಂಘದ ಸಹಕಾರಿಗಳು ಈಗ ನೀಡುತ್ತಿರುವ ಸಹಕಾರವನ್ನು ಮುಂದೆಯೂ ನೀಡಿದಲ್ಲಿ ಸಂಘದ ಆರ್ಥಿಕಾಭಿವೃದ್ಧಿ ಜೊತೆಗೆ ಸದಸ್ಯರೂ ಸಹ ಹೆಚ್ಚಿನ ಸಾಲ ಸೌಲಭ್ಯ ಪಡೆಯಲು ಅರ್ಹರಾಗುತ್ತಾರೆ. ಸೊಸೈಟಿಯಿಂದ ದೊರಕಿಸಿಕೊಡಬಹುದಾದ ಎಲ್ಲ ಸೌಲಭ್ಯಗಳನ್ನು ದೊರಕಿಸಿಕೊಡಲು ನಾನು ಬದ್ಧನಾಗಿದ್ದೇನೆ ಎಂದು ಭರವಸೆ ನೀಡಿದ ಅಧ್ಯಕ್ಷರು, ನೂತನ ಕಟ್ಟಡದಲ್ಲಿರುವ ವಾಣಿಜ್ಯ ಮಳಿಗೆಗಳಿಂದ ಬರುವ ಬಾಡಿಗೆ ಹಣ ಸಂಘದ ಅಭಿವೃದ್ಧಿಗೆ ಸಹಕಾರಿಯಾಗಲಿದೆ ಎಂದರು.

ಸಭೆಯಲ್ಲಿ ಸಂಘದ ಸಿಇಓ ಎಂ.ಗುರುಮಲ್ಲಪ್ಪ ವಾರ್ಷಿಕ ವರದಿ ಮಂಡಿಸಿದರು. ಸಂಘದ ಉಪಾಧ್ಯಕ್ಷ ನಂಜುಂಡ, ನಿರ್ದೇಶಕರಾದ ಹೆಚ್.ಬಿ.ಚಿಕ್ಕನಂಜಯ್ಯ, ಮಲ್ಲಣ್ಣ, ಎಂ.ಗುರುಸ್ವಾಮಿ, ಎನ್.ಮೂರ್ತಿ, ಶಿವಲಿಂಗೇಗೌಡ, ಎಂ.ನಿಂಗರಾಜು, ಬಿ.ಎಸ್.ಯಶೋಧ, ಸಾಕಮ್ಮ, ಜಯಣ್ಣ, ಬಸವರಾಜು, ಜಿಲ್ಲಾ ಬ್ಯಾಂಕ್ ಪ್ರತಿನಿಧಿ ರಾಜಪ್ಪ ಕುಮುದಾನಾಯಕ್ ಮತ್ತಿತರರಿದ್ದರು.

ಶೀಘ್ರ ನೂತನ ಕಟ್ಟಡ ಉದ್ಘಾಟನೆ

ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ.ಹರೀಶ್‌ಗೌಡರ ಸಹಕಾರದೊಂದಿಗೆ ಸಂಘದ ನೂತನ ಕಟ್ಟಡವನ್ನು 80 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಲಾಗುತ್ತಿದ್ದು, ಶೀಘ್ರ ಲೋಕಾರ್ಪಣೆ ಮಾಡಲಾಗುವುದು. ಕಟ್ಟಡ ನಿರ್ಮಾಣಕ್ಕೆ ಸಹಕರಿಸಿರುವ ಹರೀಶ್‌ಗೌಡರು ಸಂಘದ ಅಭಿವೃದ್ಧಿಗೆ ಇನ್ನೂ ಹೆಚ್ಚಿನ ನೆರವು ನೀಡುವ ಭರವಸೆ ನೀಡಿದ್ದಾರೆ ಎಂದರು.

ಸರಗೂರು ವೀರಶೈವ ಸಹಕಾರ ಸಂಘಕ್ಕೆ 7.8 ಲಕ್ಷ ಲಾಭ



ಸರಗೂರು, ಸೆ.25– ವೀರಶೈವ ಸಹಕಾರ ಸಂಘವನ್ನು ಮುಂದಿನ ದಿನಗಳಲ್ಲಿ ವೀರಶೈವ ಲಿಂಗಾಯತ ಪತ್ತಿನ ಸಹಕಾರ ಸಂಘವೆಂದು ನಾಮಕರಣ ಮಾಡಲು ಸಭೆಯಲ್ಲಿ ತೀರ್ಮಾನಿಸಲಾಯಿತು.

ಪಟ್ಟಣದ ಶ್ರೀಶಿವರಾತ್ರೀಶ್ವರ ಶಿವಾನುಭವ ಮಂಟಪದಲ್ಲಿ ಭಾನುವಾರ ಸಂಘದ ಅಧ್ಯಕ್ಷ ಗಣಪತಿ ಅಧ್ಯಕ್ಷತೆಯಲ್ಲಿ ನಡೆದ ಸಂಘದ 2021–22ನೇ ಸಾಲಿನ ವಾರ್ಷಿಕ ಮಹಾಸಭೆಯಲ್ಲಿ ಸಂಘದ ಸರ್ವ ಸದಸ್ಯರು ಒಮ್ಮತದಿಂದ ತೀರ್ಮಾನ ಕೈಗೊಂಡರು.

ಬಿಡಗಲು ಪಡವಲು ವಿರಕ್ತ ಮಠದ ಮಹಾದೇವ ಸ್ವಾಮೀಜಿ ಮಾತನಾಡಿ, ಸಂಘದ ಏಳಿಗೆಗೆ ಸದಸ್ಯರು ಸಹಕಾರ ನೀಡಬೇಕು. ಸಕಾಲಕ್ಕೆ ಸಾಲ ಪಾವತಿಸಬೇಕು. ಅಲ್ಲದೇ ಸಂಘ ಉತ್ತಮ ರೀತಿ ನಡೆಯಲು ಪ್ರೋತ್ಸಾಹ ನೀಡಬೇಕು ಎಂದರು.

ಅಧ್ಯಕ್ಷ ಗಣಪತಿ ಮಾತನಾಡಿ, ಸಂಘದ 122 ಷೇರುದಾರರಿಗೆ 14.30 ಲಕ್ಷ ರೂ. ಸಾಲ ನೀಡಲಾಗಿದೆ. ಸಂಘ 7.8 ಲಕ್ಷ ರೂ. ಲಾಭ ಗಳಿಸಿದ್ದು, 19 ಲಕ್ಷ ರೂ. ಬಂಡವಾಳ ಇದೆ. ಸಂಘದಲ್ಲಿ 914 ಮಂದಿ ಷೇರುದಾರರಿದ್ದಾರೆ. ಸಂಘದ ಬೆಳವಣಿಗೆಗೆ ಸದಸ್ಯರು ಸಹಕರಿಸಬೇಕು ಎಂದು ತಿಳಿಸಿದರು. ಕಾರ್ಯದರ್ಶಿ ಕೆ.ಕೆಂಡಗಣ್ಣಪ್ಪ ವರದಿ ಮಂಡಿಸಿದರು. ಉಪಾಧ್ಯಕ್ಷ ಎಲ್.ಶಿವಣ್ಣ, ನಿರ್ದೇಶಕರಾದ ಡಿ.ಜಿ.ಶಿವರಾಜು, ಕೆ.ಬಸವರಾಜು, ಎಸ್.ಎನ್.ಪ್ರಕಾಶ್, ಬಿ.ಮಾದಪ್ಪ, ಮಲ್ಲೇಶ್, ಮಂಜುಳಾ, ಶ್ರೀಕಂಠಸ್ವಾಮಿ ಇತರರಿದ್ದರು.

ರೈತರಿಗೆ ಸಹಕಾರ ಸಂಘ ದಾರಿದೀಪ



ನಂಜನಗೂಡು, ಸೆ.25– ರೈತರ ಬಾಳಿಗೆ ಸಹಕಾರ ಸಂಘಗಳು ದಾರಿದೀಪವಾಗಲಿವೆ ಎಂದು ನಲ್ಲಿತಾಳಪುರ ಹಾಗೂ ಚಂದ್ರವಾಡಿ ಗ್ರಾಮದ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಸಿ.ರವೀಂದ್ರ ಅಭಿಪ್ರಾಯಪಟ್ಟರು.

ಸಂಘದ ಆವರಣದಲ್ಲಿ ನಡೆದ 2021–22ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಉದ್ಘಾಟಿಸಿ ಮಾತನಾಡಿದ ಅವರು, ರೈತರು ಅನೇಕ ಕಾರಣಗಳಿಂದಾಗಿ ಸಂಕಷ್ಟಕ್ಕೆ ಒಳಗಾಗಿದ್ದಾರೆ. ಅವರ ಸಂಕಷ್ಟ ನೀಗಿಸಲು ಸಹಕಾರ ಸಂಘಗಳು ಬದ್ಧವಾಗಿವೆ. ರೈತರು ಸಹಕಾರ ಸಂಘಗಳಿಂದ ಪಡೆದ ಸಾಲವನ್ನು ಸಕಾಲಕ್ಕೆ ಮರುಪಾವತಿಸಿ ಸಂಘದ ಅಭಿವೃದ್ಧಿಗೆ ಸಹಕರಿಸಬೇಕು. ಇದರ ಜೊತೆಗೆ ಷೇರುದಾರರು ಕೂಡ ಆರ್ಥಿಕವಾಗಿ ಅಭಿವೃದ್ಧಿ ಹೊಂದಬೇಕು. ರೈತರು ಸರ್ಕಾರದಿಂದ ಬರುವ ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದರು. ಸಂಘದ ಉಪಾಧ್ಯಕ್ಷ ಕೂಸೇಗೌಡ, ನಿರ್ದೇಶಕರಾದ ಹೆಚ್.ಎಂ.ಕೆಂಡಗಣ್ಣಪ್ಪ, ವೀರಭದ್ರಪ್ಪ, ಕೆ.ರಾಜು, ಮಲ್ಲಿಗಮ್ಮ, ಚಿಕ್ಕವೆಂಕಟಶೆಟ್ಟಿ, ಹನುಮೇಶ್, ಸುಧಾಮಣಿ, ಶಿವಯ್ಯ, ರಾಮದಾಸಯ್ಯ, ಕೃಷಿ ಟ್ರಾಕ್ಟರ್ ಮಾಲೀಕರ ಸಂಘದ ತಾಲೂಕು ಅಧ್ಯಕ್ಷ ಮೂರ್ತಿ, ಸಿಇಓ ಎ.ಭಾರತಿಬಾಯಿ ಸೇರಿದಂತೆ ಪ್ರಮುಖರಿದ್ದರು.

ನಾಳೆ ಪೂರ್ವಭಾವಿ ಸಭೆ

ನಂಜನಗೂಡು, ಸೆ.25– ಭಾರತ್ ಜೋಡೋ ಯಾತ್ರೆ ಹಮ್ಮಿಕೊಂಡಿರುವ ಎಐಸಿಸಿ ಮುಖಂಡ ರಾಹುಲ್ ಗಾಂಧಿ ಅವರು ಅ.1ರಂದು ನಂಜನಗೂಡಿಗೆ ಆಗಮಿಸುವ ಹಿನ್ನೆಲೆಯಲ್ಲಿ ಸೆ.27ರಂದು ನಗರದ ನಂದಿ ಕನ್ವೆನ್ಷನ್ ಹಾಲ್‌ನಲ್ಲಿ ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರ ಅಧ್ಯಕ್ಷತೆಯಲ್ಲಿ ಪೂರ್ವಭಾವಿ ಸಭೆ ನಡೆಯಲಿದೆ. ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಸಭೆ ಯಶಸ್ವಿಗೊಳಿಸಬೇಕು ಎಂದು ಕಾಂಗ್ರೆಸ್ ಮುಖಂಡ ದೇವನೂರು ಮಹದೇವಪ್ಪ ಮನವಿ ಮಾಡಿದ್ದಾರೆ.

ಕಾಡಾನೆ ದಾಳಿ: ಭತ್ತದ ಬೆಳೆ ನಾಶ

ಹನಗೋಡು, ಸೆ.25– ಕಳೆದ ಮೂರ್ನಾಲ್ಕು ದಿನಗಳಿಂದ ಕಾಡಾನೆಗಳ ಹಿಂಡು ರಾತ್ರಿ ವೇಳೆ ಭತ್ತದ ಗದ್ದೆಗಳಿಗೆ ನುಗ್ಗಿ ಬೆಳೆ ನಾಶಪಡಿಸಿರುವ ಘಟನೆ ಇಲ್ಲಿನ ನಾಗರಹೊಳೆ ರಾಷ್ಟ್ರೀಯ ಉದ್ಯಾನವನ ವ್ಯಾಪ್ತಿಯಲ್ಲಿ ನಡೆದಿದೆ.



ಹನಗೋಡು ಹೋಬಳಿಯ ಕಿಕ್ಕೇರಿಕಟ್ಟೆ ಗ್ರಾಮದ ಜವರೇಗೌಡ, ಪುಟ್ಟರಾಜ್, ಚಂಚಲಾಕ್ಷಿ, ಶಶಿ, ಹೊನ್ನೇಗೌಡರು ತಮ್ಮ ಗದ್ದೆಗಳಲ್ಲಿ ಭತ್ತ ನಾಟಿ ಮಾಡಿದ್ದು, ಉತ್ತಮ ಬೆಳೆಯ ನಿರೀಕ್ಷೆಯಲ್ಲಿದ್ದರು. ಆದರೆ ಕಳೆದ ಮೂರ್ನಾಲ್ಕು ದಿನಗಳಿಂದ ಕಿಕ್ಕೇರಿಕಟ್ಟೆ ಗ್ರಾಮದ ಕಲ್ಲುಗುಂಡಿ, ಆಲದಮರದ ಕಂಡಿ, ಕಾರೇಮಾಳ ಕಂಡಿ ಅರಣ್ಯ ಭಾಗದಿಂದ ರಾತ್ರಿ ವೇಳೆ ಮರಿಯಾನೆ ಸಹಿತ ಕಾಡಾನೆಗಳ ಹಿಂಡು ಹೊರ ಬಂದು ನಾಟಿ ಮಾಡಿರುವ ಭತ್ತದ ಗದ್ದೆಗಳನ್ನು ತುಳಿದು ನಾಶಪಡಿಸಿವೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಹುಣಸೂರು ವನ್ಯಜೀವಿ ಅರಣ್ಯ ಇಲಾಖೆ ಸಿಬ್ಬಂದಿ ಪರಿಶೀಲನೆ ನಡೆಸಿದರು.

ಆಗ್ರಹ: ಕಿಕ್ಕೇರಿಕಟ್ಟೆ ಕಾಡಂಚಿನಲ್ಲಿ ಆನೆ ತಡೆ ಬೇಲಿ ನಿರ್ಮಾಣ ಕಾಮಗಾರಿ ವಿಳಂಬವಾಗಿದ್ದು ಕೂಡಲೇ ಕಾಮಗಾರಿ ಪ್ರಾರಂಭಿಸಬೇಕು. ಬೆಳೆ ನಾಶವಾಗಿರುವ ರೈತರಿಗೆ ಸೂಕ್ತ ಪರಿಹಾರ ನೀಡಬೇಕು ಹಾಗೂ ಕಾಡಾನೆ ಹೊರ ಬಾರದಂತೆ ನೋಡಿಕೊಳ್ಳಲು ತಾತ್ಕಾಲಿಕವಾಗಿ ರಾತ್ರಿ ಕಾವಲು ಪಡೆ ನೇಮಿಸಬೇಕೆಂದು ರೈತರು ಆಗ್ರಹಿಸಿದ್ದಾರೆ.

ಮೋದಿ ಹುಟ್ಟುಹಬ್ಬ ಹಿನ್ನೆಲೆ: ಸೇವಾ ಕಾರ್ಯ



ತಿ.ನರಸೀಪುರ, ಸೆ.25– ಪ್ರಧಾನಿ ಮೋದಿ ಹುಟ್ಟುಹಬ್ಬ ಹಿನ್ನೆಲೆಯಲ್ಲಿ ವಿವಿಧ ಸೇವಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಡವಾಡಿ ಮಹೇಶ್ ತಿಳಿಸಿದರು.

ತಾಲೂಕು ಹಿಂದುಳಿದ ವರ್ಗಗಳ ವತಿಯಿಂದ ಪಟ್ಟಣದ ಸರ್ಕಾರಿ ಬಾಲಕಿಯರ ಪ್ರೌಢಶಾಲೆಯಲ್ಲಿ ಗಿಡ ನೆಡುವ ಕಾರ್ಯಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಮೋದಿ ಹುಟ್ಟುಹಬ್ಬದ ಪ್ರಯುಕ್ತ ಸೆ.17ರಿಂದ ಅ.2ವರೆಗೆ ಸಸಿ ನೆಡುವುದು, ನದಿ ಸ್ವಚ್ಛಗೊಳಿಸುವುದು, ರಕ್ತದಾನ ಶಿಬಿರ, ಆರೋಗ್ಯ ತಪಾಸಣೆ ಶಿಬಿರ, ಟಿಬಿ ಕಾಯಿಲೆ ರೋಗಿಗಳನ್ನು ದತ್ತು ಪಡೆಯುವುದು ಸೇರಿದಂತೆ ವಿವಿಧ ಸೇವಾ ಕಾರ್ಯ ಹಮ್ಮಿಕೊಳ್ಳುವ ಮೂಲಕ ಬಿಜೆಪಿ ಕಾರ್ಯೋನ್ಮುಖವಾಗಿದೆ ಎಂದರು.

ತಾಲೂಕು ಹಿಂದುಳಿದ ವರ್ಗಗಳ ಅಧ್ಯಕ್ಷ ಮಹೇಶ್ (ಗೂಳಿ) ಮಾತನಾಡಿ, ಸಸಿಗಳನ್ನು ಶಾಲಾ ಮಡಲ್ಲಿ ನೆಡುವುದರಿಂದ ಅವುಗಳನ್ನು ಬೆಳೆಸಿ ಪೋಷಿಸಲು ಅನುಕೂಲವಾಗುತ್ತದೆ. ಹೀಗಾಗಿ ಶಾಲೆಗಳನ್ನೇ ಆಯ್ಕೆ ಮಾಡಿಕೊಂಡಿದ್ದೇವೆ ಎಂದರು.

ಈ ವೇಳೆ ಕ್ಷೇತ್ರಾಧ್ಯಕ್ಷ ಕೆ.ಸಿ.ಲೋಕೇಶ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕರೋಹಟ್ಟಿ ಬಸವರಾಜು, ಜಿಲ್ಲಾ ಮೋರ್ಚಾ ಕಾರ್ಯದರ್ಶಿ ಶಿವಕುಮಾರ್, ಟೌನ್ ಅಧ್ಯಕ್ಷ ಹಾಗೂ ಪುರಸಭಾ ಸದಸ್ಯರಾದ ಎಸ್.ಕೆ.ಕಿರಣ್, ಗಣೇಶ್, ಕೆ.ನಂಜುಂಡಸ್ವಾಮಿ, ಟಿಎಪಿಸಿಎಂಎಸ್ ಸದಸ್ಯ ಸೋಮಶೇಖರಪ್ಪ, ಓಬಿಸಿ ಮೋರ್ಚಾ ಕಾರ್ಯದರ್ಶಿ ಕನ್ನಳ್ಳಿಮೋಳೆ ಮಹದೇವಶೆಟ್ಟಿ, ಸಿದ್ದರಾಜು, ಎಸ್ಸಿ ಮೋರ್ಚಾ ಅಧ್ಯಕ್ಷ ಶಿವಕುಮಾರ್ ಬಡ್ಡು, ತಾಲೂಕು ಯುವ ಮೋರ್ಚಾ ಅಧ್ಯಕ್ಷ ಕುರುಬರು ಶಿವು, ಮುಖಂಡರಾದ ಚೌಹಳ್ಳಿ ಸಿದ್ದರಾಜು, ಸಿ.ಬಿ.ಹುಂಡಿ ಸಿದ್ದು, ಕುರುಬೂರು ಮಂಜು, ಎನ್.ನಂದನ್ ಕುಮಾರ್, ಮುಖ್ಯ ಶಿಕ್ಷಕಿ ಜ್ಞಾನೇಶ್ವರಿ ಹಾಗೂ ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು.



ಮೈಸೂರು ತಾಲೂಕು ಕಡಕೊಳ ದಿ.ಯೂನಿಯನ್ ರೈತ ಸೇವಾ ಸಹಕಾರ ಬ್ಯಾಂಕ್ ವಾರ್ಷಿಕ ಮಹಾಸಭೆ ನಡೆಯಿತು. ಈ ವೇಳೆ ಅಧ್ಯಕ್ಷ ಕಪನೀಗೌಡ, ಉಪಾಧ್ಯಕ್ಷ ಕುಮಾರಸ್ವಾಮಿ, ಜಿಪಂ ಮಾಜಿ ಅಧ್ಯಕ್ಷ ನಾಗರಾಜು, ಮಾಜಿ ಪ್ರಧಾನ ಕೆ.ಆದಿರಾಜಯ್ಯ, ಕೆ.ಆರ್.ಮಹದೇವು, ನಿರ್ದೇಶಕರಾದ ಶ್ರೀಕಂಠ, ತೊಂಡೇಗೌಡ, ಜವರನಾಯಕ, ನಟರಾಜು, ಶಿವಲಿಂಗೇಗೌಡ, ಮಹದೇವಸ್ವಾಮಿ, ಮಹದೇವು, ಸಾವಿತ್ರಮ್ಮ, ಜವರಯ್ಯ, ಪ್ರಭಾರ ಸಿಇಓ ದೀಪು ಇತರರಿದ್ದರು.

ನೇಮಕ

ಮೈಸೂರು, ಸೆ.25– ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ, ಅಲ್ಪಸಂಖ್ಯಾತರ ವಿಭಾಗದ ಅಧ್ಯಕ್ಷ ಕೆ.ಅಬ್ದುಲ್ ಜಬ್ಬಾರ್‌ರವರ ಆದೇಶದ ಮೇರೆಗೆ ಮೈಸೂರು ನಗರ (ಜಿಲ್ಲಾ) ಕಾಂಗ್ರೆಸ್ ಸಮಿತಿ ಅಲ್ಪಸಂಖ್ಯಾತರ ವಿಭಾಗದ ಉಪಾಧ್ಯಕ್ಷರನ್ನಾಗಿ ಮಜಾರ್ ಪಾಷ ಅವರನ್ನು ನೇಮಕ ಮಾಡಲಾಗಿದೆ.



ಬೆಟ್ಟದಪುರ ಪಿಎಸಿಎಸ್‌ಗೆ 16 ಲಕ್ಷ ಲಾಭ



ಬೆಟ್ಟದಪುರ, ಸೆ.25– ಪ್ರಸಕ್ತ ಸಾಲಿನಲ್ಲಿ ಸಂಘ 16 ಲಕ್ಷ ರೂ. ಲಾಭ ಗಳಿಸಿದೆ ಎಂದು ಬೆಟ್ಟದಪುರ ಕೃಷಿಪತ್ತಿನ ಸಹಕಾರ ಸಂಘದ ಅಧ್ಯಕ್ಷ ಧರಣೇಶ್ ತಿಳಿಸಿದರು.

ಸಂಘದ ಆವರಣದಲ್ಲಿ ನಡೆದ ವಾರ್ಷಿಕ ಮಹಾಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಸಂಘದಲ್ಲಿ ರೈತರಿಗೆ ಸಾಲ ಸೌಲಭ್ಯಗಳು ಸಿಗುತ್ತಿದ್ದು, ಸಕಾಲದಲ್ಲಿ ಮರುಪಾವತಿಸುವ ಮೂಲಕ ಸಂಘದ ಅಭಿವೃದ್ಧಿಯೊಂದಿಗೆ ರೈತರೂ ಅಭಿವೃದ್ಧಿ ಹೊಂದಬಹುದು ಎಂದರು. ಕಾರ್ಯದರ್ಶಿ ವಿಜಯ್ ಆಯವ್ಯಯ ಮಂಡಿಸಿದರು. ಈ ವೇಳೆ ಉಪಾಧ್ಯಕ್ಷ ಶಂಕರ, ಮಾಜಿ ಅಧ್ಯಕ್ಷ ಬಿ.ಎನ್.ಗಿರೀಶ್, ಗಿರಿಗೌಡ, ಇಕ್ಬಾಲ್ ಶರೀಫ್, ನಿರ್ದೇಶಕರಾದ ಹನುಮಂತ ನಾಯಕ, ದಿಲೀಪ್, ಸುಶೀಲಮ್ಮ, ಪಟೇಲ್ ನಟೇಶ್, ಶಿವಮ್ಮ ಹಾಗೂ ಗ್ರಾಮಸ್ಥರಿದ್ದರು.

ಅರ್ಜಿ ಆಹ್ವಾನ

ನಂಜನಗೂಡು, ಸೆ.25– ನಗರದ ಬ್ರಾಹ್ಮಣ ಧರ್ಮ ಸಹಾಯಕ ಸಭಾ ಪ್ರಸಕ್ತ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಹಾಗೂ ದ್ವಿತೀಯ ಪಿಯುಸಿಯಲ್ಲಿ ಅತಿ ಹೆಚ್ಚು ಅಂಕ ಪಡೆದ ವಿಪ್ರ ಸಮುದಾಯದ ವಿದ್ಯಾರ್ಥಿಗಳಿಂದ ಪ್ರತಿಭಾ ಪುರಸ್ಕಾರಕ್ಕಾಗಿ ಅರ್ಜಿ ಆಹ್ವಾನಿಸಿದೆ. ಅರ್ಜಿ ಸಲ್ಲಿಸಲು ಅ.5 ಕೊನೆ ದಿನ. ಮಾಹಿತಿಗೆ: 9480557224, 7892456870 9945622164 ಸಂಪರ್ಕಿಸಿ.

ರೈತರು ಸಕಾಲಕ್ಕೆ ಸಾಲ ಮರುಪಾವತಿಸಲು ಕರೆ



ಮಲ್ಕುಂಡಿ, ಸೆ.25– ರೈತರು ಸಂಘದಿಂದ ಪಡೆದ ಸಾಲವನ್ನು ಸಕಾಲಕ್ಕೆ ಮರುಪಾವತಿಸಿದರೆ ಸಂಘ ಲಾಭ ಕಾಣಲು ಸಾಧ್ಯ ಎಂದು ಹೆಡಿಯಾಲ ಕೃಷಿ ಪತ್ತಿನ ಸಹಕಾರ ಸಂಘ ಹಾಗೂ ತಾಪಂ ಮಾಜಿ ಅಧ್ಯಕ್ಷ ಬಿ.ಎಸ್.ಮಹದೇವಪ್ಪ ತಿಳಿಸಿದರು.

ಸಂಘದ ಆವರಣದಲ್ಲಿ ನಡೆದ 2021–22ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಉದ್ಘಾಟಿಸಿ ಮಾತನಾಡಿದ ಅವರು ಸಹಕಾರ ಸಂಘದಿಂದ ರೈತರಿಗೆ ಹೆಚ್ಚಿನ ಸೌಲಭ್ಯ ದೊರೆಯುತ್ತಿದೆ. ಸರ್ಕಾರ ರೈತರ ಪರ ಕೆಲಸ ಮಾಡುತ್ತಿದೆ. ಸಂಘದಲ್ಲಿ ಸಾಲ ಪಡೆದ ರೈತರು ಸಕಾಲಕ್ಕೆ ಸಾಲ ಮರುಪಾವತಿಸಿದರೆ ಸಂಘ ಲಾಭ ಕಾಣಲು ಸಾಧ್ಯ. ಇದಕ್ಕೆ ರೈತರು ಸಹಕರಿಸಬೇಕು. ಸಂಘದಲ್ಲಿ ಯಾವುದೇ ಸಣ್ಣಪುಟ್ಟ ಸಮಸ್ಯೆಗಳಿದ್ದರೂ, ಅದನ್ನು ಬಗೆಹರಿಸಲಾಗುವುದು ಎಂದರು.

ಸಂಘದ ಉಪಾಧ್ಯಕ್ಷ ಶಿವರುದ್ರಪ್ಪ, ನಿರ್ದೇಶಕರಾದ ಬಿ.ಬಸವಣ್ಣ, ಎಂ.ಕೆ.ಮಂಜುನಾಥ್, ಅನ್ವರ್, ಬಸವರಾಜಪ್ಪ, ಸಿ.ಎನ್.ಶಿವರುದ್ರಪ್ಪ, ಪ್ರಭಾರ ಸಿಇಓ ಶಿವಕುಮಾರ್, ಸಿಬ್ಬಂದಿ ತಾಜುದ್ದೀನ್, ಮುಖಂಡರಾದ ಶಿವನಾಗಪ್ಪ, ಮಹೇಶ್, ನಾಗರಾಜೇಗೌಡ, ಶಿವರುದ್ರ, ಸಿದ್ದರಾಜೇಗೌಡ ಸೇರಿದಂತೆ ಇತರರಿದ್ದರು.

ಹಿರೀಕ್ಯಾತನಹಳ್ಳಿ ಡೈರಿಗೆ 3.16 ಲಕ್ಷ ನಿವ್ವಳ ಲಾಭ



ಹಿರೀಕ್ಯಾತನಹಳ್ಳಿ, ಸೆ.25– ಇಲ್ಲಿನ ಹಾಲು ಉತ್ಪಾದಕರ ಸಹಕಾರ ಸಂಘ 2021–22ನೇ ಸಾಲಿನಲ್ಲಿ 3.16 ಲಕ್ಷ ರೂ. ನಿವ್ವಳ ಲಾಭ ಗಳಿಸಿದೆ ಎಂದು ಸಂಘದ ಕಾರ್ಯ ನಿರ್ವಹಣಾಧಿಕಾರಿ ಹರೀಶ್ ತಿಳಿಸಿದರು.

ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ಆವರಣದಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ಅವರು, 1.50 ಲಕ್ಷ ಬೋನಸ್ ನೀಡಲಾಗಿದೆ ಎಂದರು.

ಮೈಮುಲ್ ಉಪ ವ್ಯವಸ್ಥಾಪಕ ಎಲ್.ಆರ್.ಕರಿಬಸವರಾಜು ಮಾತನಾಡಿ ರಾಸುಗಳಿಗೆ ವಿಮೆ ಮಾಡಿಸಲು 75% ಒಕ್ಕೂಟ ಹಣ ಭರಿಸಿದರೆ, ರೈತರು 25% ಹಣ ಬರಿಸಬೇಕು. ವಿಮೆ ಮಾಡಿಸಿದ 14 ದಿನಗಳ ನಂತರ ಜಾರಿಗೆ ಬರುತ್ತದೆ. 3 ವರ್ಷ ಚಾಲ್ತಿಯಲ್ಲಿರುತ್ತದೆ. ಆಕಸ್ಮಿಕವಾಗಿ ರಾಸುಗಳು ಸಾವನ್ನಪ್ಪಿದರೆ ರೈತರ ಬ್ಯಾಂಕ್ ಖಾತೆಗೆ ಹಣ ಬರುತ್ತದೆ ಎಂದ ಅವರು ಸಂಘಕ್ಕೆ 3 ತಿಂಗಳು ಹಾಲು ಹಾಕಿದ ರೈತ ಆಕಸ್ಮಿಕವಾಗಿ ಮರಣ ಹೊಂದಿದರೆ 15 ಸಾವಿರ ರೂ. ಸಂಘದಿಂದ ನೀಡಲಾಗುವುದು. ಹಾಲು ಉತ್ಪಾದಕರು 18ರಿಂದ 59 ವರ್ಷದ ರೈತರು 600 ರೂ. ಗುಂಪು ವಿಮೆ ಮಾಡಿಸಿದರೆ ಆಕಸ್ಮಿಕವಾಗಿ ರೈತ ಮರಣ ಹೊಂದಿದರೆ 1 ಲಕ್ಷ ವಿಮೆ ಹಣ ಬರುತ್ತದೆ. ರೈತರು ಈ ಎಲ್ಲಾ ಯೋಜನೆಗಳನ್ನು ಸದುಪಯೋಗ ಪಡಿಸಿಕೊಳ್ಳಬೇಕು ಎಂದರು.

ಸಂಘದ ಅಧ್ಯಕ್ಷ ಮಹೇಶ್ ಮಾತನಾಡಿದರು. ಈ ವೇಳೆ ಸಂಘದ ಮಾಜಿ ನಿರ್ದೇಶಕ ಕೃಷ್ಣೇಗೌಡರ ನಿಧನಕ್ಕೆ ಸಂತಾಪ ಸೂಚಿಸಲಾಯಿತು. ಸಭೆಯಲ್ಲಿ ಮೈಮುಲ್ ವಿಸ್ತರಣಾಧಿಕಾರಿ ಸಂತೋಷ್ ಕುಮಾರ್, ಸಂಘದ ಉಪಾಧ್ಯಕ್ಷ ರವಿ, ನಿರ್ದೇಶಕರಾದ ಕುಮಾರ್, ಹರೀಶ್, ದೇವರಾಜ್, ಅರುಣ್ ಕುಮಾರ್, ಹಾಲು ಪರೀಕ್ಷಕ ಶಶಿಧರ್, ಸಹಾಯಕಿ ಸಿದ್ದಮ್ಮ ಹಾಗೂ ಸರ್ವ ಸದಸ್ಯರು ಹಾಜರಿದ್ದರು.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1 ಬ್ರಹ್ಮಾಸ್ತ್ರ (3ಡಿ)(ಹಿಂ): ಬೆ.10.05ಕ್ಕೆ, ಮ.1.05ಕ್ಕೆ, ಕೃಷ್ಣ ವೃಂದ ವಿಹಾರಿ (ತೆ): ಸಂ.4.20ಕ್ಕೆ, ಅವತಾರ್ (3ಡಿ)(ಇಂ): ರಾ.7ಕ್ಕೆ, ರಾ.10.05ಕ್ಕೆ.

ಸ್ಕ್ರೀನ್ 2 ಚುಪ್ (ಹಿಂ): ಬೆ.10.30ಕ್ಕೆ, ರಾ.7.15ಕ್ಕೆ, ರಾ.10ಕ್ಕೆ, ಲಕ್ಕಿಮ್ಯಾನ್ (ಕ): ಮ.1.15ಕ್ಕೆ, ಸಂ.4.15ಕ್ಕೆ.

ಸ್ಕ್ರೀನ್ 3 ರಾಜ ರಾಣಿ ರೋರರ್ ರ‍್ಯಾಕೆಟ್ (ಕ): ಬೆ.11.30ಕ್ಕೆ, ಮಾನ್ಸೂನ್ ರಾಗ (ಕ): ಮ.1.50ಕ್ಕೆ, ದೊಂಗಲುನ್ನಾರು ಜಾಗ್ರತ (ತೆ): ಸಂ.5ಕ್ಕೆ, ಧೋಕಾ ರೌಂಡ್ ಡಿ ಕಾರ್ನರ್ (ಹಿಂ): ರಾ.7.20ಕ್ಕೆ, ರಾ.9.50ಕ್ಕೆ.

ಸ್ಕ್ರೀನ್ 4 ಗುರುಶಿಷ್ಯರು (ಕ): ಬೆ.9.55ಕ್ಕೆ, ಸಂ.4ಕ್ಕೆ, ರಾ.7.05ಕ್ಕೆ, ಟ್ರಿಗರ್ (ತ): ಮ.1.10ಕ್ಕೆ, ಬ್ರಹ್ಮಾಸ್ತ್ರ (3ಡಿ) (ಹಿಂ): ರಾ.10.10ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1 ಚುಪ್ (ಹಿಂ): ಬೆ.10.10ಕ್ಕೆ, ಧೋಕಾ ರೌಂಡ್ ಡಿ ಕಾರ್ನರ್ (ಹಿಂ): ಮ.1ಕ್ಕೆ, ಅವತಾರ್ (3ಡಿ)(ಇಂ): ಮ.3.25ಕ್ಕೆ, ರಾ.10ಕ್ಕೆ, ಲಕ್ಕಿಮ್ಯಾನ್ (ಕ): ಸಂ.6.50ಕ್ಕೆ.

ಸ್ಕ್ರೀನ್ 2 ಗುರುಶಿಷ್ಯರು (ಕ): ಬೆ.9.30ಕ್ಕೆ, ಮ.12.50ಕ್ಕೆ, ರಾ.7ಕ್ಕೆ, ರಾ.10.20ಕ್ಕೆ, ಚುಪ್ (ಹಿಂ): ಸಂ.4.10ಕ್ಕೆ.

ಸ್ಕ್ರೀನ್ 3 ಟ್ರಿಗರ್ (ತ): ಬೆ.11ಕ್ಕೆ, ದೊಂಗಲುನ್ನಾರು ಜಾಗ್ರತ (ತೆ): ಮ.1.45ಕ್ಕೆ, ಕೃಷ್ಣ ವೃಂದ ವಿಹಾರಿ (ತೆ): ರಾ.7.15ಕ್ಕೆ, ಗುರುಶಿಷ್ಯರು (ಕ): ಮ.3.55ಕ್ಕೆ, ಚುಪ್ (ಹಿಂ): ರಾ.10.10ಕ್ಕೆ.

ಸ್ಕ್ರೀನ್ 4 ಬ್ರಹ್ಮಾಸ್ತ್ರ (3ಡಿ)(ಹಿಂ): ರಾ.10.05ಕ್ಕೆ, ಸಂ.4.40ಕ್ಕೆ, ರಾ.10.30ಕ್ಕೆ, ಲಕ್ಕಿಮ್ಯಾನ್ (ಕ): ಮ.1.30ಕ್ಕೆ, ಧೋಕಾ ರೌಂಡ್ ಡಿ ಕಾರ್ನರ್ (ಹಿಂ): ರಾ.8.05ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1 ಸ್ವಚ್ಛ ಕರ್ನಾಟಕ (ಕ): ಬೆ.11ಕ್ಕೆ, ಮಾನ್ಸೂನ್ ರಾಗ (ಕ): ಮ.1.30ಕ್ಕೆ, ಸಂ.4.30ಕ್ಕೆ, ಕೊಟ್ಟು (ಮ): ರಾ.7.45ಕ್ಕೆ.

ಸ್ಕ್ರೀನ್ 2 ಗುರುಶಿಷ್ಯರು (ಕ): ಬೆ.10.30ಕ್ಕೆ, ಮ.1.35ಕ್ಕೆ, ರಾ.7.45ಕ್ಕೆ, ಲಕ್ಕಿಮ್ಯಾನ್ (ಕ): ಸಂ.4.45ಕ್ಕೆ.

ಸ್ಕ್ರೀನ್ 3 ಬ್ರಹ್ಮಾಸ್ತ್ರ (3ಡಿ)(ಹಿಂ): ಮ.1.15ಕ್ಕೆ, ರಾ.7.45ಕ್ಕೆ, ಬ್ರಹ್ಮಾಸ್ತ್ರ (3ಡಿ)(ಕ): ಸಂ.4.30ಕ್ಕೆ.

ಸ್ಕ್ರೀನ್ 4 ಲಕ್ಕಿಮ್ಯಾನ್ (ಕ): ಬೆ.10.30ಕ್ಕೆ, ಮ.1.35ಕ್ಕೆ, ರಾ.7.45ಕ್ಕೆ, ಗುರುಶಿಷ್ಯರು (ಕ): ಸಂ.4.35ಕ್ಕೆ.

ಪಿವಿಆರ್ ಸಿನಿಮಾಸ್

PVR CINEMAS

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಲಕ್ಕಿಮ್ಯಾನ್ (ಕ): ಬೆ.11.30ಕ್ಕೆ, ಮ.3.50ಕ್ಕೆ, ಸಂ.6.15ಕ್ಕೆ, ಮಾನ್ಸೂನ್ ರಾಗ (ಕ): ಬೆ.9.50ಕ್ಕೆ, ಮ.12.45ಕ್ಕೆ, ಮ.3.40ಕ್ಕೆ, ಸಂ.6.35ಕ್ಕೆ, ರಾ.9.30ಕ್ಕೆ, ಬ್ರಹ್ಮಾಸ್ತ್ರ (3ಡಿ)(ಹಿಂ): ಮ.12ಕ್ಕೆ, ಮ.2.45ಕ್ಕೆ, ಮ.3.30ಕ್ಕೆ, ರಾ.7ಕ್ಕೆ, ರಾ.9.30ಕ್ಕೆ, ರಾ.10.30ಕ್ಕೆ, ವೆಂದು ತನಿಂದದು ಕಾಡು (ತ): ಬೆ.10.05ಕ್ಕೆ, ಬೆ.11.30ಕ್ಕೆ, ಮ.3.05ಕ್ಕೆ, ಸಂ.6.40ಕ್ಕೆ, ರಾ.10.15ಕ್ಕೆ, ವೇರ್ ದಿ ಕ್ರೌಡಾಡ್ಸ್ ಸಿಂಗ್ (ಇಂ): ಮ.1.40ಕ್ಕೆ, ರಾ.9.45ಕ್ಕೆ, ನೇನು ಮೀಕು ಭಾಗ ಕಾವಾಲ್ಸಿನವಾಡಿನಿ (ತೆ): ರಾ.7.30ಕ್ಕೆ, ಆ ಅಮ್ಮಾಯಿ ಗುರಿಂಚಿ ಮೀಕು ಚೆಪ್ಪಾಲಿ (ತೆ): ಸಂ.4.25ಕ್ಕೆ, ರಾ.10.20ಕ್ಕೆ, ಜಹಾನ್ ಚಾರ್ ಯಾರ್ (ಹಿಂ): ಮ.1.05ಕ್ಕೆ, ಸಿಯಾ (ಹಿಂ): ರಾ.7.05ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ಕಾರ್ತಿಕೇಯ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಲಕ್ಕಿಮ್ಯಾನ್ (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಮಿಸ್ ಮಲ್ಲಿಗೆ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಶಂಶೇರ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಗುರುಶಿಷ್ಯರು (ಕ)	4 ಪ್ರದರ್ಶನಗಳು
ಗಾಯಿತ್ರಿ	
ಮರ್ದಿನಿ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಟ್ರಿಗರ್ (ತ)	4 ಪ್ರದರ್ಶನಗಳು
ಸಂಗಂ	
ಮಾನ್ಸೂನ್ ರಾಗ (ಕ)	4 ಪ್ರದರ್ಶನಗಳು
ಲಿಡೋ	
ರಾಜಾ ರಾಣಿ ರೋರರ್ ರಾಕೆಟ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಗುರುಶಿಷ್ಯರು (ಕ)	4 ಪ್ರದರ್ಶನಗಳು
ಪ್ರಭಾ	
ಗಾಳಿಪಟ–2 (ಕ)	4 ಪ್ರದರ್ಶನಗಳು

ಜಾನುವಾರುಗಳ ತುರ್ತು ಚಿಕಿತ್ಸೆಗೆ ಮೊಬೈಲ್ ಆಸ್ಪತ್ರೆ ಪ್ರಸ್ತಾವನೆ

ಮೈಮುಲ್ ಮಾಜಿ ಅಧ್ಯಕ್ಷ ಸಿ.ಓಂಪ್ರಕಾಶ್ ಮಾಹಿತಿ



ಬನ್ನೂರು, ಸೆ.25– ತುರ್ತು ಸಂದರ್ಭ ಜಾನುವಾರುಗಳಿಗೆ ಚಿಕಿತ್ಸೆ ನೀಡಲು ಮೊಬೈಲ್ ಆಸ್ಪತ್ರೆ ತೆರೆಯಲು ಒಕ್ಕೂಟಕ್ಕೆ ಪ್ರಸ್ತಾವನೆ ಸಲ್ಲಿಸಲಾಗುವುದು ಎಂದು ಮೈಮುಲ್ ಮಾಜಿ ಅಧ್ಯಕ್ಷ ಸಿ.ಓಂಪ್ರಕಾಶ್ ಮಾಹಿತಿ ನೀಡಿದರು.

ತಾಲೂಕಿನ ಬನ್ನೂರಿನ ಎನ್.ಆರ್.ಕಲ್ಯಾಣ ಮಂಟಪದಲ್ಲಿ ನಡೆದ ಹಾಲು ಉತ್ಪಾದಕರ ಸಹಕಾರ ಸಂಘದ 2021–22ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯಲ್ಲಿ ಅವರು ಮಾತನಾಡಿದರು.

ಜಿಲ್ಲೆಯಲ್ಲಿ ಪಶು ವೈದ್ಯರ ಕೊರತೆ ಇದೆ. ಹಾಗಾಗಿ ರಾಸುಗಳು ಅನಾರೋಗ್ಯಕ್ಕೊಳಗಾದಾಗ ತುರ್ತು ಚಿಕಿತ್ಸೆ ನೀಡಲು ಮೈಸೂರು, ತಿ.ನರಸೀಪುರ, ಬನ್ನೂರು ವಿಭಾಗಕ್ಕೆ ಮೊಬೈಲ್ ಆಸ್ಪತ್ರೆ ಮಾದರಿ ವ್ಯಾನ್‌ಗಳನ್ನು ನಿಯೋಜಿಸಿ ರಾಸುಗಳನ್ನು ಪಶು ವೈದ್ಯರ ಬಳಿ ಸಾಗಿಸಿ ಚಿಕಿತ್ಸೆ ಕೊಡಿಸಲು ಮತ್ತೊಬ್ಬ ನಿರ್ದೇಶಕ ಚೆಲುವರಾಜು ಅವರೊಂದಿಗೆ ಒಕ್ಕೂಟಕ್ಕೆ ಪ್ರಸ್ತಾವನೆ ಸಲ್ಲಿಸಲಾಗುತ್ತದೆ ಎಂದರು.

ಜಿಲ್ಲೆಯ ಜನರು ಹೈನೋದ್ಯಮಕ್ಕೆ ಹೆಚ್ಚಿನ ಒತ್ತು ನೀಡುತ್ತಿರುವುದರಿಂದ ಹಾಲು ಉತ್ಪಾದನೆ ಹೆಚ್ಚಾಗಿದೆ. ಕೇವಲ 2 ಸಾವಿರ ಲೀ. ಹಾಲಿನೊಂದಿಗೆ ಆರಂಭಗೊಂಡ ಮೈಸೂರು–ಚಾಮರಾಜನಗರ ಒಕ್ಕೂಟ ಪ್ರತ್ಯೇಕಗೊಂಡ ನಂತರ ಮೈಸೂರು ಒಕ್ಕೂಟಕ್ಕೆ ಸರಾಸರಿ 10 ಲಕ್ಷ ಲೀ.ಹಾಲು ಸರಬರಾಜಾಗುತ್ತಿದೆ ಎಂದರು.

ಮೈಮುಲ್ ನಿರ್ದೇಶಕ ಆರ್.ಚೆಲುವರಾಜು ಮಾತನಾಡಿ, 45 ವರ್ಷ ಸುದೀರ್ಘ ಇತಿಹಾಸ ಹೊಂದಿರುವ ಬನ್ನೂರು ಹಾಲು ಉತ್ಪಾದಕರ ಸಹಕಾರ ಸಂಘ ತಾಲೂಕಿನಲ್ಲಿಯೇ ಹೆಚ್ಚು ಹಾಲು ಉತ್ಪಾದಿಸುವ ಸಂಘವಾಗಿ ಹೊರಹೊಮ್ಮಿದೆ ಎಂದರು.

ಕಾರ್ಯದರ್ಶಿ ರಾಘು ಮಾತನಾಡಿ, ಪ್ರಸಕ್ತ ಸಾಲಿನಲ್ಲಿ ಸಂಘ 27 ಲಕ್ಷ ರೂ. ಲಾಭಗಳಿಸಿದ್ದು, ಉತ್ಪಾದಕರಿಗೆ 19 ಲಕ್ಷ ರೂ. ಬೋನಸ್ ವಿತರಿಸಲಾಗಿದೆ ಎಂದರು.

ಈ ವೇಳೆ ಮೈಮುಲ್ ಉಪ ವ್ಯವಸ್ಥಾಪಕ ಡಾ.ಸಿ.ದಿವಾಕರ್, ಮಾರ್ಗ ವಿಸ್ತರಣಾಧಿಕಾರಿ ಆರ್.ಪ್ರಮೋದ್, ಎನ್.ಶೃತಿ ಅವರನ್ನು ಸನ್ಮಾನಿಸಲಾಯಿತು. ಸಂಘದ ಅಧ್ಯಕ್ಷ ಆರ್.ಮಾಯಪ್ಪ, ಉಪಾಧ್ಯಕ್ಷ ಶ್ರೀನಿವಾಸ್, ನಿರ್ದೇಶಕರಾದ ಬಿ.ಕೆ.ಕಾಳೇಗೌಡ, ಬಿ.ಹೆಚ್.ರಾಜು, ಪಿ.ರಮೇಶ್, ಬಿ.ಪಿ.ಸ್ವಾಮಿ, ಬಿ.ಇ.ಮಹದೇವಸ್ವಾಮಿ, ಎಂ.ರಾಜು, ಎಸ್.ಜಯಪದ್ಮ, ಮಂಜುಳ, ಕ್ಯಾರತ್ನ ಸೇರಿದಂತೆ ಇತರರಿದ್ದರು.

ದಸರಾ ಸಹಾಯವಾಣಿ

ಮೈಸೂರು,ಸೆ.25– ದಸರಾ ಮಹೋತ್ಸವ–2022ರ ಸಂಬಂಧ ರಾಜ್ಯ ಹಾಗೂ ಅಂತರ ರಾಜ್ಯದಿಂದ ಆಗಮಿಸುವ ಸಾರ್ವಜನಿಕರ/ಪ್ರವಾಸಿಗರ ಮಾಹಿತಿಗಾಗಿ ಜಿಲ್ಲಾಡಳಿತದಿಂದ ಡಿಸಿ ಕಚೇರಿ ನಿಯಂತ್ರಣ ಕೊಠಡಿಯಲ್ಲಿ ಸಹಾಯವಾಣಿಯನ್ನು ತೆರೆಯಲಾಗಿದೆ. ಸಹಾಯವಾಣಿ ಕೇಂದ್ರವು ಸೆ.26ರಿಂದ ಅ.5ರವರೆಗೆ ಪ್ರತಿ ದಿನ ಬೆಳಗ್ಗೆ 6ರಿಂದ ರಾತ್ರಿ 10 ರವರೆಗೆ ಕಾರ್ಯ ನಿರ್ವಹಿಸಲಿದ್ದು, ಸಾರ್ವಜನಿಕರು/ಪ್ರವಾಸಿಗರು ಮೈಸೂರು ದಸರಾ ಮಹೋತ್ಸವ–2022ರ ಸಂಬಂಧ ಮಾಹಿತಿ ಅಗತ್ಯವಿದ್ದಲ್ಲಿ ಸಹಾಯವಾಣಿ ಸಂ: 0821–2444777ಗೆ ಕರೆ ಮಾಡಿ ಮೈಸೂರು ದಸರಾ ಮಹೋತ್ಸವ–2022ರ ಸಂಬಂಧ ಮಾತ್ರ ಅಗತ್ಯ ಮಾಹಿತಿಯನ್ನು ಪಡೆದುಕೊಳ್ಳಬಹುದು ಎಂದು ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.





ಇಲವಾಲ ಪ್ರಾಥಮಿಕ ಕೃಷಿಪತ್ತಿನ ಸಹಕಾರ ಸಂಘದ 2021-22ನೇ ಸಾಲಿನ ಸರ್ವ ಸದಸ್ಯರ ಮಹಾಸಭೆಗೆ ಆಗಮಿಸಿದ M.C.D.C.C ಬ್ಯಾಂಕಿನ ಅಧ್ಯಕ್ಷರು ಮತ್ತು ಅಪೆಕ್ಸ್ ಬ್ಯಾಂಕ್‌ನ ಉಪಾಧ್ಯಕ್ಷರಾದ, ಸನ್ಮಾನ್ಯ ಶ್ರೀ ಜಿ.ಡಿ. ಹರೀಶ್‌ಗೌಡರಿಗೆ ಇಲವಾಲದ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರು, ನಿರ್ದೇಶಕರುಗಳು ಹಾಗೂ ಸದಸ್ಯರಿಂದ ಸ್ವಾಗತವನ್ನು ಕೋರಿ ಸನ್ಮಾನಿಸಲಾಯಿತು. ಸನ್ಮಾನಿಸಿದ ಇಲವಾಲದ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ನನ್ನ ಅಭಿನಂದನೆಗಳು.

ಚನ್ನಂಕೇಗೌಡ (ರಾಜು, R.M.C)
ಇಲವಾಲ, ಮೈಸೂರು



